## 3. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

"2015 ರ ಫೆಬ್ರವರಿ 2 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ." ಎಂದು ದಿನಾಂಕ 2ನೇ ಫೆಬ್ರವರಿ 2015 ರಂದು ಶ್ರೀ ಬಸವರಾಜ ರಾಯರೆಡ್ಡಿಯವರು ಸೂಚಿಸಿದ ಪ್ರಸ್ತಾವದ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ.

**ಶ್ರೀ ಸಿದ್ದರಾಮಯ್ಯ (ಸನ್ಮಾನ್ಯ ಮುಖ್ಯಮಂತ್ರಿಗಳು):-** ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನು ಈ ಸದನ ಸಲ್ಲಿಸುವುದು ಸಂವಿಧಾನಾತ್ಮಕವಾದ ಪದ್ಧತಿ ಹಾಗೂ ಸಂಪ್ರದಾಯವೂ ಆಗಿದೆ. ಹಾಗಾಗಿ ಪ್ರತಿ ವರ್ಷ ಹೊಸ ವರ್ಷ ಪ್ರಾರಂಭವಾದ ಮೇಲೆ, ನಾವು ಹೊಸ ವರ್ಷದಲ್ಲಿ ಯಾವಾಗ ಸದನ ಸೇರುತ್ತೇವೆ, ಆಗ ಮೊದಲನೆಯ ದಿನ ರಾಜ್ಯಪಾಲರ ಮೂಲಕ ಭಾಷಣ ಮಾಡಿಸುವುದು, ಸರ್ಕಾರದ ನೀತಿಯನ್ನು, ದೂರದೃಷ್ಟಿಯನ್ನು ಸದನ ಮುಂದೆ ಇಡುವುದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಡೆದು ಬಂದಿರುವ ಪದ್ಧತಿ ಎಂದು ನಾವೆಲ್ಲಾ ತಿಳಿದುಕೊಂಡಿದ್ದೇವೆ. ಈ ವರ್ಷ 2015ರ ಫೆಬ್ರವರಿ ತಿಂಗಳಿನಲ್ಲಿ ನಾವು ಸೇರಿದ್ದೇವೆ. ಮಾನ್ಯ ರಾಜ್ಯಪಾಲರು ಸದನವನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಅವರಿಗೆ ವಂದನೆಯನ್ನು ಸಲ್ಲಿಸುವುದಕ್ಕೋಸ್ಕರ ವಂದನಾ ನಿರ್ಣಯವನ್ನು ಮಾನ್ಯ ಬಸವರಾಜ ರಾಯರೆಡ್ಡಿಯವರು ಮಂಡಿಸಿ ಮಾತನಾಡಿದ್ದಾರೆ. ಶ್ರೀ ಎಸ್.ಟಿ. ಸೋಮಶೇಖರ್‌ರವರು ವಂದನಾ ನಿರ್ಣಯವನ್ನು ಬೆಂಬಲಿಸಿ ಅವರು ಸಹ ಮಾತನಾಡಿದ್ದಾರೆ. ಅವರು ಸರ್ಕಾರದ ಕಾರ್ಯಕ್ರಮಗಳು, ನಮ್ಮ ನೀತಿ, ನಿರೂಪಣೆ, ಸರ್ಕಾರದ ಐದು ವರ್ಷಗಳಲ್ಲಿರುವಂಥ ದೂರದೃಷ್ಟಿ ಇವೆಲ್ಲದರ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಬಹಳ ದೀರ್ಘವಾಗಿ ಸಹ ಅವರು ಮಾತನಾಡಿದ್ದಾರೆ. ನಾವು ಅವರೀರ್ವರಿಗೂ ಸಹ ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸಲು ಬಯಸುತ್ತಿದ್ದೇನೆ.

ಹಾಗೆಯೇ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಸುಮಾರು 30 ಜನ ಮಾನ್ಯ ಸದಸ್ಯರು ಭಾಗವಹಹಿಸಿದ್ದಾರೆ. ವಿರೋಧ ಪಕ್ಷದ ನಾಯಕರಾದ ಮಾನ್ಯ ಜಗದೀಶ್ ಶೆಟ್ಟರ್‌ರವರು, ಜೆ.ಡಿ.(ಎಸ್)ನ ನಾಯಕರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು, ನಮ್ಮ ಪಕ್ಷದ ಕಡೆಯಿಂದ ರಮೇಶ್‌ಕುಮಾರ್‌ರವರು ಮತ್ತು ಅನೇಕ ಜನ, ನಾನು ಎಲ್ಲರ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ, ಎಲ್ಲಾ 30 ಜನ ಸದಸ್ಯರು ಭಾಗವಹಿಸಿ ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಸ್ವಾಭಾವಿಕವಾಗಿ ವಿರೋಧ ಪಕ್ಷದವರು ಸರ್ಕಾರದ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳನ್ನು ಸಹ ಮಾಡಿದ್ದಾರೆ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಎಲ್ಲರೂ ಸಹ ಸರ್ಕಾರ ಮಾಡಿರುವಂಥ ಕಾರ್ಯಕ್ರಮಗಳನ್ನು ಮತ್ತು ನೀತಿಯನ್ನು ಸರಿ ಎಂದು ಹೇಳಬೇಕೆಂದು ನಾನೂ ಕೂಡ ನಿರೀಕ್ಷೆ ಮಾಡುವುದಿಲ್ಲ. ನಾವೆಲ್ಲವನ್ನೂ ಸಹ ನೂರಕ್ಕೆ ನೂರು ನಾವು ಸರಿಯಾಗಿ ಮಾಡಿದ್ದೇವೆನ್ನುವಂಥ ಮಾತುಗಳನ್ನೂ ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಅನೇಕ ಸಣ್ಣಪುಟ್ಟ ದೋಷಗಳಿರಬಹುದು, ನಾನು ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, 2013 ರಲ್ಲಿ ಜನ ನಮಗೇನು ಜನಾದೇಶ ಕೊಟ್ಟಿದ್ದಾರೆ, ಆ ಜನಾದೇಶ ಮತ್ತು ಜನರು ನಮ್ಮ ಮೇಲೆ ವಿಶ್ವಾಸವನ್ನೇನು ಇಟ್ಟಿದ್ದಾರೆ, ಆ ವಿಶ್ವಾಸಕ್ಕೆ ಧಕ್ಕೆ ಬಾರದ ರೀತಿಯಲ್ಲಿ ನಮ್ಮ ಸರ್ಕಾರ ಕಳೆದ ಒಂದು ವರ್ಷ 9 ತಿಂಗಳುಗಳ ಕಾಲ ಆಡಳಿತ ನಡೆಸಿದೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದು ಇವತ್ತಿಗೆ ಒಂದು ವರ್ಷ 9 ತಿಂಗಳುಗಳಾಗಿದೆ. ಮಾನ್ಯ ಅಧ್ಯಕ್ಷರೆ, ಮೇ 13ನೇ ತಾರೀಖು 2013 ರಲ್ಲಿ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂತು. ಅದು ನಾನು ಪ್ರಮಾಣ ವಚನ ತೆಗೆದುಕೊಂಡ ದಿನ. ಅಂದು ಬಸವಣ್ಣನವರ ಜಯಂತಿ. ಅಂದು ನಾನು ಪ್ರಮಾಣ ವಚನ ಸ್ವೀಕಾರ ಮಾಡಿದೆ. ಒಂದು ವರ್ಷ 9 ತಿಂಗಳಾಗಿವೆ, ಇನ್ನೂ ಎರಡು ವರ್ಷ ತುಂಬಿಲ್ಲ. ಮೇ ತಿಂಗಳಿಗೆ ಎರಡು ವರ್ಷ ತುಂಬುತ್ತದೆ. ಈ ಒಂದು ವರ್ಷ 9 ತಿಂಗಳಿನಲ್ಲಿ ನಾವು ಜನಪರವಾಗಿ, ಪಾರದರ್ಶಕವಾಗಿ, ಜನರಿಗೆ ಸ್ಪಂದಿಸುವ ರೀತಿಯಲ್ಲಿ ಆಡಳಿತವನ್ನು ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು

ಮಾಡಿದ್ದೇವೆ. ಇದರ ಬಗ್ಗೆ ಅನೇಕ ಜನರು ಟೀಕೆಗಳನ್ನು ಮಾಡಿದ್ದಾರೆ, ಸಲಹೆಗಳನ್ನು ಕೂಡಾ ಕೊಟ್ಟಿದ್ದಾರೆ. ಕೆಲವರು ಬಹಳ ಆಕ್ರೋಶದಿಂದಲೂ ಕೂಡ ಮಾತನಾಡಿದ್ದಾರೆ. ಸರ್ಕಾರದ ತಪ್ಪುಗಳನ್ನು ಹೇಳುವ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದ್ದಾರೆ. ಕೇವಲ ವಿರೋಧ ಪಕ್ಷದವರಲ್ಲ, ನಮ್ಮ ಪಕ್ಷದವರೂ ಕೆಲವರು ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ತಪ್ಪುಗಳನ್ನು ಗುರುತು ಮಾಡಿ ಹೇಳಿದ್ದಾರೆ. ನಾನು ಯಾರ್ಯಾರು ಈ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು, ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ, ಅವರೆಲ್ಲರಿಗೂ ಕೂಡಾ, ಟೀಕೆ ಮಾಡಿದವರಿಗೆ, ನಮ್ಮ ಕಾರ್ಯಕ್ರಮಗಳನ್ನು ಮೆಚ್ಚಿ ಮಾತನಾಡಿದವರಿಗೆ, ನಮ್ಮ ಸರ್ಕಾರದ ಬಗ್ಗೆ ಒಳ್ಳೆಯ ಮಾತನಾಡಿರುವವರಿಗೆ ಎಲ್ಲರಿಗೂ ಸರ್ಕಾರದ ಪರವಾಗಿ ಅಭಿನಂದನೆಯನ್ನು ಸಲ್ಲಿಸಲಿಚ್ಛಿಸುತ್ತೇನೆ. ನಾವು ಹೆಚ್ಚು ಪ್ರಚಾರ ಮಾಡಿಕೊಳ್ಳಲು ಹೋಗಿಲ್ಲ. ಪ್ರಚಾರದ ಹುಚ್ಚು ಅಷ್ಟಿಲ್ಲ. ಪ್ರಚಾರ ಮಾಡಬೇಕು, ಅದೂ ಕೂಡಾ ಬಹಳ ಮುಖ್ಯವೆಂದು ಬಹಳ ಜನ ನಮ್ಮ ಸ್ನೇಹಿತರು ಹೇಳುತ್ತಾರೆ. ಆದರೆ ಪ್ರಚಾರದ ಗೀಳನ್ನು ನಾವು ಮೊದಲಿನಿಂದ ಅಂಟಿಸಿಕೊಂಡು ಬರಲಿಲ್ಲ. ಹಾಗಾಗಿ ನಮ್ಮ ಸರ್ಕಾರದಲ್ಲಿ ಅದೊಂದು ದೋಷ ಸ್ವಲ್ಪ ಎದ್ದು ಕಾಣುತ್ತದೆ. ಆದರೆ, ಪ್ರಚಾರದ ಗೀಳನ್ನು ಅಂಟಿಸಿಕೊಂಡು ಆಡಳಿತ ಮಾಡಿದವರ ಕಥೆ. ಅವರ ಪರಿಸ್ಥಿತಿ ಏನಾಗಿದೆ ಎನ್ನುವುದೂ ಕೂಡಾ ಈಗ ನಮಗೆ ಗೊತ್ತಾಗಿದೆ. ಪ್ರಚಾರದ ಗೀಳು ಕೂಡಾ ಬಹಳ ಒಳ್ಳೆಯದಲ್ಲ ಎಂದು ಗೊತ್ತಾಗಿದೆ. ದೆಹಲಿ ಚುನಾವಣೆ ಫಲಿತಾಂಶ ನೋಡಿದೆವಲ್ಲ.

ಶ್ರೀ ಆರ್.ಅಶೋಕ್:- ಅಸ್ಸಾಂನಲ್ಲಿ ಬಿ.ಜೆ.ಪಿ. ಪಕ್ಷ ಗೆದ್ದಿದೆ.

ಶ್ರೀ ಸಿದ್ದರಾಮಯ್ಯ:- ಬಹಳ ಸಂತೋಷ ಗೆಲ್ಲಿ, ಬೇಡವೆಂದು ನಾನು ಹೇಳಿದೆನೆ? ಆದರೆ ಇರುವ ವಿಚಾರವನ್ನು ಹೇಳಿದರೆ ತಪ್ಪೇನೂ ಇಲ್ಲವಲ್ಲ?

ಶ್ರೀ ಆರ್.ಅಶೋಕ್:- 4 ರಲ್ಲಿ ಒಂದು ಸೋತಿದ್ದೇವೆ.

ಶ್ರೀ ಸಿದ್ದರಾಮಯ್ಯ:- ಅಷ್ಟೆ. 4 ರಲ್ಲಿ ಒಂದು ಸೋತಿದ್ದೀರಿ. ನಾಲ್ಕೂ ಸೋತಿದ್ದೀರಿ ಎಂದು ಹೇಳಿದೆನೇನು? ನಾನು ಹೇಳಲೇ ಇಲ್ಲ. ದೆಹಲಿ ಈ ದೇಶದ ರಾಜಧಾನಿ.

ಶ್ರೀ ಕೆ.ಜಿ. ಬೋಪಯ್ಯ:- 15 ವರ್ಷ ನೀವೇ ಇದ್ದದ್ದು.

ಶ್ರೀ ಸಿದ್ದರಾಮಯ್ಯ:- ಅದಕ್ಕೆ ನಾವು ಸೋತದ್ದು, 15 ವರ್ಷ ಇದ್ದುದರಿಂದ, ನಾವೂ ಸೋತಿದ್ದೇವೆ, ಇಲ್ಲವೆಂದು ಇಲ್ಲ. ನಾನು ಹೇಳಿದೆನೆ ನಾವು ಗೆದ್ದಿದ್ದೇವೆ ಎಂದು. ನಮಗೂ ಅದರಲ್ಲಿ ಸೊನ್ನೆ ಬಂದಿದೆ. ಒಂದು ಸೀಟನ್ನೂ ಗೆಲ್ಲಲಾಗಿಲ್ಲ.

ಶ್ರೀ ಬಿ.ಆರ್. ಪಾಟೀಲ್:- ಇದು ನಿಮ್ಮ 20 point program ಗೂ apply ಆಗುತ್ತದೆ.

ಶ್ರೀ ಸಿದ್ದರಾಮಯ್ಯ:- ಇವೆಲ್ಲಾ ಆಗಿವೆ. ನಾವು 65 ವರ್ಷ ಈ ದೇಶದಲ್ಲಿ ಅನೇಕ ವರ್ಷಗಳ ಕಾಲ ಅಧಿಕಾರ ಮಾಡಿದ್ದೇವೆಲ್ಲ.

ಶ್ರೀ ಆರ್. ಅಶೋಕ್:- ನೀವಲ್ಲ, ಕಾಂಗ್ರೆಸ್ಸಿನವರು.

ಶ್ರೀ ಸಿದ್ದರಾಮಯ್ಯ:- 'ನಾನು' ಎಂದು ಹೇಳಲಿಲ್ಲ, "ನಾವು". I am Congress man. 'ನಾವು,' . . . .

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:- ಯಾರಿಗಾದರೂ ಅನುಮಾನವಿದೆಯೆ?..

(ಗೊಂದಲ)

ಶ್ರೀ ಲಕ್ಷ್ಮಣ ಎಸ್. ಸವದಿ:- ಅವರ ಸಂಶಯ clear ಮಾಡಿ.

ಶ್ರೀ ಸಿದ್ದರಾಮಯ್ಯ:- ಯಾರಿಗೆ? ಬಿ.ಆರ್. ಪಾಟೀಲ್ ರವರಿಗೇನು? ಪಾಪ! ಅವರು ಸ್ವಲ್ಪ ಗೊಂದಲದಲ್ಲಿದ್ದಾರೆ, ಅದರಿಂದ ತಾಪತ್ರಯವಾಗಿದೆ. ಮೊದಲೆಲ್ಲಾ ಬಹಳ ಸ್ಪಷ್ಟವಾಗಿ clarity ಇತ್ತು. ಈಗ ಇತ್ತೀಚೆಗೆ 6 ತಿಂಗಳಿನಿಂದ ಗೊಂದಲದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ.

**ಶ್ರೀ ಆರ್. ಅಶೋಕ್:-** 'ನಿಮ್ಮಿಂದ' ಎಂದು ಹೇಳುತ್ತಿದ್ದಾರೆ, ಕೈ ತೋರಿಸಿ ನೋಡಿ.

**ಶ್ರೀ ಸಿದ್ದರಾಮಯ್ಯ:-** ಸ್ವಲ್ಪ ನೀವು ಯಾವಾಗಲಾದರೂ ಕರೆದು ಅವರಿಗೆ ಹೇಳಿ. ಈಗ ಮತ್ತೆ ಸರಿಹೋಗಿದ್ದಾರೆ. ಆಗಾಗ ಗೊಂದಲದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಿರುತ್ತಾರೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನಾನು ರಮೇಶ್ ಕುಮಾರ್ ರವರ ಜೊತೆ ಇನ್ನೊಮ್ಮೆ ಮಾತನಾಡಬೇಕು.

**ಶ್ರೀ ಬಿ.ಆರ್. ಪಾಟೀಲ್:-** ಹಾಗಾದರೆ ನಿಮ್ಮಲ್ಲಿ ಬಹಳ ಜನ ಸೀದಾ ಆಗುತ್ತಾರೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್:-** Problem ಇಷ್ಟೆ. ಟೋಪಿ ತೆಗೆದರೆ ಸರಿಯಾಗಿರುತ್ತಾರೆ, ಹಾಕಿಕೊಂಡರೆ ತಲೆ ಎಲ್ಲಾ problem.

**ಶ್ರೀ ಸಿದ್ದರಾಮಯ್ಯ:-** ಇಲ್ಲ, ರಮೇಶ್‌ಕುಮಾರ್ ಇಲ್ಲಿ ವಿಧಾನಸೌಧದಲ್ಲಿ ಮಾತ್ರ democratic ಆಗಿ ಮಾತನಾಡುವುದು. ಒಬ್ಬರನ್ನೇ ಭೇಟಿ ಮಾಡಿದರೆ correct ಆಗಿ advise ಮಾಡುತ್ತಾರೆ. ಆದುದರಿಂದ ಅವರು ಸ್ವಲ್ಪ ಗೊಂದಲದಲ್ಲಿದ್ದಾರೆ, ಸರಿ ಹೋಗುತ್ತಾರೆ. ದೆಹಲಿ ಫಲಿತಾಂಶ ಎಲ್ಲರಿಗೂ ಪಾಠ ಕಲಿಸಿದೆ. ನಾವು ಪ್ರಚಾರದ ಹುಚ್ಚಿಗೆ ಬಿದ್ದರೆ ಯಾವ ರೀತಿ ಆಗುತ್ತೇವೆ ಎನ್ನುವುದಕ್ಕೆ ದೆಹಲಿಯ ಜನರ ತೀರ್ಪು ಇದೆಯಲ್ಲ, ಅದು ನಿಮಗೆ, ನಮಗೆ ಎಲ್ಲರಿಗೂ ಪಾಠ. ನಿಮಗೆ ವಿಶೇಷವಾಗಿ ದೊಡ್ಡ ಪಾಠ.

**ಶ್ರೀ ಆರ್.ಅಶೋಕ್:-** ದೆಹಲಿಯಲ್ಲಿ ನಿಮ್ಮದೇ advertisement ಜಾಸ್ತಿ ಬರುತ್ತಿರುವುದು ಈಗ. Everyday ಪತ್ರಿಕೆಯಲ್ಲಿ ನಿಮ್ಮದೇ "ಕರ್ನಾಟಕ ಸರ್ಕಾರ" advertisement ಅರ್ಧ ಪೇಜ್ ಇದ್ದೇ ಇರುತ್ತದೆ. Chek ಮಾಡಿ ನೋಡಿ. ವಾರ್ತಾ ಇಲಾಖೆಯವರು ಯಾರೋ ನಿಮಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ.

**ಶ್ರೀ ಸಿದ್ದರಾಮಯ್ಯ**:- ನಾವು ನಿಮ್ಮಷ್ಟು ಪ್ರಚಾರ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ದೆಹಲಿಯಲ್ಲಿ President Rule ಇತ್ತು, ನೀವೇ ಅಧಿಕಾರದಲ್ಲಿದದ್ದಿರಿ. President Rule ಎಂದರೆ ಕೇಂದ್ರಾಡಳಿತ ಪ್ರದೇಶ, ನಿಮ್ಮದೇ ಆಡಳಿತವಿತ್ತು. ಚುನಾವಣಾ ಫಲಿತಾಂಶ ಏನಾಯಿತು? ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪರಿಸ್ಥಿತಿ ಏನಿತ್ತು? ಇವತ್ತು ಬಹಳ ಕೆಟ್ಟ ಪರಿಸ್ಥಿತಿಗೆ ಹೋಗಿದೆ. ಸಮೀಕ್ಷೆಗಳು ತಲೆಕೆಳಗಾಗಿದೆ.

**ಶ್ರೀ ಜಗದೀಶ ಶೆಟ್ಟರ್**:- 15 ವರ್ಷ ಆಡಳಿತ ಮಾಡಿದ್ದೀರಿ, 63 ಸೀಟುಗಳಲ್ಲಿ deposit ಕಳೆದುಕೊಂಡಿದ್ದೀರಿ.

**ಶ್ರೀ ಸಿದ್ದರಾಮಯ್ಯ**:- ಅದನ್ನೂ ಹೇಳಿದೆನಲ್ಲ ಶೆಟ್ಟರೆ, 15 ವರ್ಷ ನಾವು ಆಡಳಿತ ಮಾಡಿ ಜನರು ನಮ್ಮನ್ನು ಮೊದಲೇ reject ಮಾಡಿದರು.

**ಶ್ರೀ ಜಗದೀಶ ಶೆಟ್ಟರ್**:- 63 ಸೀಟುಗಳಲ್ಲಿ deposit ಕಳೆದುಕೊಂಡಿದ್ದೀರಿ. Address ಇಲ್ಲ. ಮತ್ತೊಬ್ಬರ ಬಗ್ಗೆ ಮಾತನಾಡಲು ನಿಮಗೆ ನೈತಿಕ ಹಕ್ಕು ಏನಿದೆ?

(ಗೊಂದಲ)

**ಶ್ರೀ ಸಿದ್ದರಾಮಯ್ಯ**:- ನಿಮಗೆ ಮಾತ್ರ ನೈತಿಕ ಹಕ್ಕು ಇರುವುದು. ಪಾಪ! ನಿಮಗೆ ಮಾತ್ರ ನೈತಿಕ ಹಕ್ಕು ಬಹಳ ಜಾಸ್ತಿ ಇದೆ.

(ಗೊಂದಲ)

**ಶ್ರೀ ಡಿ.ಕೆ. ಶಿವಕುಮಾರ್**:- ಇಡೀ ದೇಶ, ಇಡೀ ಪ್ರಪಂಚದಲ್ಲಿ market ಮಾಡುತ್ತಿರುವವರು ಈಗ ನಿಂತುಕೊಂಡು ಮಾತನಾಡುವುದಕ್ಕೆ ಹಕ್ಕು ಇಲ್ಲವಲ್ಲ.

(ಗೊಂದಲ)

**ಶ್ರೀ ಸಿ.ಟಿ. ರವಿ**:- ಮಾನ್ಯ ಮುಖ್ಯಮಂತ್ರಿಗಳೆ, ನಮಗೆ ಗೋವಿಂದನ ನಾಮ, ....

(ಗೊಂದಲ)

**ಶ್ರೀ ಕೆ.ಜಿ. ಬೋಪಯ್ಯ:-** ನೀವು ದೆಹಲಿಗೆ ಹೋಗುವಂತೆಯೇ ಇಲ್ಲ, ನಿಮ್ಮನ್ನು ದೆಹಲಿಯಲ್ಲಿ ಮಾತನಾಡಿಸುವವರೇ ಇಲ್ಲ. ದೆಹಲಿ ಕಾಂಗ್ರೆಸ್ ಮುಕ್ತ.

(ಗೊಂದಲ)

**ಶ್ರೀ ಡಿ.ಕೆ. ಶಿವಕುಮಾರ್:-** ಅದು ನಿಮ್ಮ ಭ್ರಮೆ. In 2018, we will come back, and we will sit here. ನೋಡಿಕೊಳ್ಳಿ ಬೇಕಾದರೆ ನೀವು.

(ಗೊಂದಲ)

**ಶ್ರೀ ಎನ್. ಚೆಲುವರಾಯಸ್ವಾಮಿ:-** ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಪಕ್ಷಗಳೆರಡೂ ನೈತಿಕತೆಯನ್ನು ಕಳೆದುಕೊಂಡಿದ್ದಾರೆ. ಇಬ್ಬರೂ ಮಾತನಾಡುವುದು ಬೇಡ.

(ಗೊಂದಲ)

**ಶ್ರೀ ವೈ.ಎಸ್.ವಿ. ದತ್ತಾ:-** ಎರಡು ರಾಷ್ಟ್ರೀಯ ಪಕ್ಷಗಳ ಮಧ್ಯೆ ಮೂರನೆಯವರಿಗೆ ಒಂದು ಅವಕಾಶವಿದೆ. ಆ ಮೂರನೇ ಅವಕಾಶ ಬಹಳ ಮುಖ್ಯ.

(ಗೊಂದಲ)

**ಶ್ರೀ ಎನ್. ಚೆಲುವರಾಯಸ್ವಾಮಿ:-** ದೆಹಲಿಯಲ್ಲಿ ಮಾತನಾಡುವುದಕ್ಕೆ ಇಬ್ಬರಿಗೂ ನೈತಿಕ ಹಕ್ಕು ಇಲ್ಲ.

(ಗೊಂದಲ)

**ಶ್ರೀ ಎನ್. ಚೆಲುವರಾಯಸ್ವಾಮಿ:-** ಎರಡೂ ಪಕ್ಷಗಳಿಗೆ ನೈತಿಕತೆ ಇಲ್ಲ.

(ಗೊಂದಲ)

**ಶ್ರೀ ಹೆಚ್.ಸಿ. ಬಾಲಕೃಷ್ಣ:-** ಡಿ.ಕೆ. ಶಿವಕುಮಾರ್ ರವರು ಹೇಳಿದ್ದಕ್ಕೆ ರಮೇಶ್ ಕುಮಾರ್‌ರವರು ಉತ್ತರ ಕೊಡಲಿ.

(ಗೊಂದಲ)

**ಅಧ್ಯಕ್ಷರು:-** ಬಾಲಕೃಷ್ಣ, ಪ್ರತಿ ಹಂತದಲ್ಲೂ interfere ಮಾಡಿದರೆ ಹೇಗೆ? ನೀವು (ಮಾನ್ಯ ಮುಖ್ಯಮಂತ್ರಿಗಳು) ಉತ್ತರವನ್ನು ಹೇಳಿ.

(ಗೊಂದಲ)

**ಶ್ರೀ ಬಿ.ಆರ್. ಪಾಟೀಲ್:-** ದೆಹಲಿ ಎಲ್ಲರಿಗೂ ಪಾಠ ಕಲಿಸಿದೆ ಬಿಡಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಮುಖ್ಯಮಂತ್ರಿಗಳೆ ನೀವು ಹೇಳಿದ್ದು ಸರಿ. ನಾವೂ ಪಾಠ ಕಲಿಯಬೇಕು, ನೀವೂ ಪಾಠ ಕಲಿಯಬೇಕು, ನಾನು ಒಪ್ಪುತ್ತೇನೆ. ನಮಗೆ ತಿರುಪತಿ ನಾಮ, ನಮಗೆ 'ಗೋವಿಂದ, ಗೋವಿಂದ' ಎಂದು ಅವರು ಹೇಳಿರುವುದು ಸರಿಯಿದೆ. ಕಾಂಗ್ರೆಸ್ ಸ್ಥಿತಿ 'ರಾಮ ನಾಮ ಸತ್ಯ ಹೈ' ಎಂದು 4 ಜನ ಹೆಗಲ ಮೇಲೆ ಹೊತ್ತುಕೊಂಡು ಹೋಗುವಾಗ ಹೇಳುತ್ತಾರಲ್ಲ, ಎನ್ನುವ ಸ್ಥಿತಿ ಕಾಂಗ್ರೆಸ್‌ನದು. ನಮಗೆ 'ಗೋವಿಂದ, ಗೋವಿಂದ.'

(ಗೊಂದಲ)

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಅಧ್ಯಕ್ಷರೆ, ಇವತ್ತು ಕೊನೆಯ ದಿವಸ, ಇಲ್ಲಿ ಆದ ಮೇಲೆ ಮುಖ್ಯಮಂತ್ರಿಗಳು council ಗೆ ಅಲ್ಲಿಯೂ ಉತ್ತರ ಕೊಡಬೇಕಾಗುತ್ತದೆ. ಶುಕ್ರವಾರ ಬೇರೆ. ಮಧ್ಯೆ ಮಧ್ಯೆ ಈ ರೀತಿಯಾಗಿ ಎದ್ದು ನಿಂತರೆ ಹೇಗೆ? ಅವರು ಹೇಳುವುದನ್ನು ಕೇಳುವಷ್ಟು ವ್ಯವಧಾನ ಇಲ್ಲದಿದ್ದರೆ ಹೇಗಾಗುತ್ತದೆ?

(ಗೊಂದಲ)

**ಒಬ್ಬ ಮಾನ್ಯ ಸದಸ್ಯರು:-** ರಾಮ ನಾಮ ಹೇಳುವವರು ತಾವೇ

**ಶ್ರೀ ಹೆಚ್.ಎಸ್. ಮಹದೇವಪ್ರಸಾದ್:-** ಭ್ರಮೆಯಲ್ಲಿರುವವರಿಗೆ, ಪ್ರಚಾರದ ಗೀಳು ಇರುವವರಿಗೆ it is an eye opener ಎಂದು ಅವರು ಹೇಳಿದರಷ್ಟೆ.

(ಗೊಂದಲ)

**ಶ್ರೀ ಕೆ.ಆರ್. ರಮೇಶ್ ಕುಮಾರ್:-** ಜಗದೀಶ್ ಶೆಟ್ಟರ್ ರವರು ಹೇಳಿದರು, 63 ಸೀಟುಗಳಲ್ಲಿ ನೀವು deposit ಕಳೆದುಕೊಂಡಿರಿ ಎಂದು. ಆ ಸೀಟೇ ಹೋದ ಮೇಲೆ ಹಣ ಕಟ್ಟಿಕೊಂಡು ನಮಗೇನು ಆಗಬೇಕು? ನಾವು ಅಷ್ಟು ಸಣ್ಣವರಲ್ಲ. ಹೋದರೆ ಹೋಯಿತು ಬಿಡು ಅತ್ತಲಾಗೆ ಎಂದು ಬಿಟ್ಟೆವಪ್ಪ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:-** Deposit meaning ಹಣವಲ್ಲ. ನೀವು ಎಷ್ಟು ಅಧೋಗತಿಗೆ ಹೋಗಿದ್ದೀರಿ, ನೀವು zero ಆಗಿದ್ದೀರಿ ಎಂದು ಅದು ತೋರಿಸುತ್ತದೆ. ನಾವು ಹೇಳುತ್ತಿರುವುದು deposit ಎಂದರೆ ಆ ಅರ್ಥವಲ್ಲ, deposit ಎಂದರೆ ಜನರು ಬೇರೆ ಅರ್ಥ ಮಾಡಿಕೊಳ್ಳುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ನಾನು ಈಲ್ಡ್ ಆಗಲ್ಲ. ಸಮಯ ಬಹಳ ಕಡಿಮೆ ಇದೆ. ವಿರೋಧ ಪಕ್ಷದವರಲ್ಲಿ ನನ್ನ ಮನವಿ ಏನೆಂದರೆ, ಏನಾದರೂ ಕೇಳಬೇಕಾದರೆ ಆಮೇಲೆ ಕೇಳಿ. ದಯಮಾಡಿ ಮಧ್ಯದಲ್ಲಿ interfere ಆಗಬೇಡಿ.

**ಅಧ್ಯಕ್ಷರು:-** ಇಲ್ಲದಿದ್ದರೆ ಆ flow ಹೋಗಿಬಿಡುತ್ತದೆ.

**ಶ್ರೀ ಸಿದ್ದರಾಮಯ್ಯ:-** ನಾನು ಏನು ಮಾತನಾಡಬೇಕೆಂದು ಅಂದುಕೊಂಡಿರುತ್ತೇನೆ, ಅದೆಲ್ಲಾ ಹೋಗಿಬಿಡುತ್ತದೆ. ಮಾನ್ಯ ಅಶೋಕ್‌ರವರೇ, ವಸ್ತು ಸ್ಥಿತಿ ಹೇಳಬೇಕಲ್ಲ. ನಾನು ಅದನ್ನು ಸುಮ್ಮನೆ ಹೇಳಿದೆ. ಅದೇ ಬಹಳ ಮುಖ್ಯವಲ್ಲ. ದೆಹಲಿ ಚುನಾವಣಾ ಫಲಿತಾಂಶ ಇದೆಯಲ್ಲ, ಅದು ಪ್ರಚಾರದ ಗೀಳು ಇರುವರಿಗೆ, ಅಧಿಕಾರದಲ್ಲಿ ಬಹಳ ವರ್ಷಗಳ ಕಾಲ ಇದ್ದವರಿಗೆ ಎಲ್ಲರಿಗೂ ಕೂಡ eye opener. ಅದರ ಬಗ್ಗೆ ಎರಡನೆ ಮಾತಿಲ್ಲ. ನಮ್ಮೆಲ್ಲರಿಗೂ ಅದು eye opener. ನೀವು ಅಧಿಕಾರಕ್ಕೆ ಬಂದು ಬಹಳ ಕಡಿಮೆ ದಿನ ಆಗಿದೆ, ಏಳೆಂಟು ತಿಂಗಳಾಗಿದೆ. ಏಳೆಂಟು ತಿಂಗಳಲ್ಲೇ ಜನ ಇವತ್ತು ನಿರಾಶರಾಗಿದ್ದಾರಲ್ಲ ಎನ್ನುವುದು ಬಹಳ ಮುಖ್ಯವಾದ ವಿಚಾರ. ಈಗಾಗಲೇ ಜನ ನಿಮ್ಮ ಮೇಲೆ ವಿಶ್ವಾಸ ಕಳೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ ಎನ್ನತಕ್ಕಂಥದಕ್ಕೆ ದೆಹಲಿ ಫಲಿತಾಂಶ ಒಂದು ಎಚ್ಚರಿಕೆಯ ಗಂಟೆ

ಎನ್ನತಕ್ಕಂತಹ ಮಾತನ್ನು ನಿಮಗೆ ತಿಳಿಸುವುದಕ್ಕೆ ಬಯಸುತ್ತಿದ್ದೇನೆ. ವಿರೋಧ ಪಕ್ಷದ ನಾಯಕರಾದ ಮಾನ್ಯ ಜಗದೀಶ ಶೆಟ್ಟರ್‌ರವರು, ನಮ್ಮಲ್ಲಿ ಬಹಳ ಒಡಕಿದೆ, ಸರ್ಕಾರದ ವಿರುದ್ಧವಾಗಿಯೇ ಆಡಳಿತ ಪಕ್ಷದ ಶಾಸಕರು ಮಾತನಾಡಿರುವುದು ಪತ್ರಿಕೆಗಳಲ್ಲಿ ಬಂದಿದೆ ಎಂದು ಪತ್ರಿಕಾ ವರದಿಗಳನ್ನೆಲ್ಲಾ ತಂದು ಇಲ್ಲಿ ಅದನ್ನು ಓದಿ ಹೇಳಿದ್ದಾರೆ. ನಾನು ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುವಾಗ ಆ ಸಂದರ್ಭದಲ್ಲಿಯೇ ಹೇಳಿದೆ. ನಮ್ಮಲ್ಲಿ Legislative Party ಯಲ್ಲಿ ನಡೆಯುವಂತಹ ಮೀಟಿಂಗ್‌ಗಳು ಇರಬಹುದು, ಅಥವಾ ದಿಗ್ವಿಜಯ್‌ಸಿಂಗ್‌ರವರು ಬಂದು ಪಕ್ಷದ ಸಂಘಟನೆ ಬಗ್ಗೆ ಚರ್ಚೆ ಮಾಡಿದಂಥದ್ದು ಇರಬಹುದು, ಮಾಧ್ಯಮದವರನ್ನು ಅಲ್ಲಿ ಎಲ್ಲಿಯೂ ಕೂಡ ನಾವು ಕರೆದಿರಲಿಲ್ಲ. ಪತ್ರಿಕೆಯವರಿಗೆ ಏನು ಹೇಳಬೇಕೆಂದು ಇತ್ತೋ, ಅದನ್ನು ಮಾಧ್ಯಮದವರನ್ನು ಭೇಟಿ ಮಾಡಿ ಹೇಳಿದ್ದೇವೆ. ಅದು ವಾಸ್ತವವಾಗಿರತಕ್ಕಂಥ ವಿಚಾರ. ಮಾನ್ಯ ದಿಗ್ವಿಜಯ್‌ಸಿಂಗ್‌ರವರು ಕೂಡ ಹೇಳಿದ್ದಾರೆ, ನಮ್ಮ ಅಧ್ಯಕ್ಷರೂ ಪತ್ರಿಕೆಗಳಿಗೆ ಹೇಳಿದ್ದಾರೆ, ಬೇರೆ ಬೇರೆ ವರದಿಯಾಗಿರುವ ವಿಚಾರಗಳೆಲ್ಲಾ ಸತ್ಯವಲ್ಲ. 'ಮಂತ್ರಿಗಳನ್ನು ತರಾಟೆಗೆ ತೆಗೆದುಕೊಂಡರು, ಮಾನ್ಯ ಮುಖ್ಯ ಮಂತ್ರಿಗಳನ್ನು ತರಾಟೆಗೆ ತೆಗೆದುಕೊಂಡು, ಅವರ ಮೇಲೆ ಅಸಮಾಧಾನ ವ್ಯಕ್ತ ಮಾಡಿದರು, ಇವರ ಮೇಲೆ ಅಸಮಾಧಾನ ವ್ಯಕ್ತ ಮಾಡಿದರು,' ಈ ತರಹದ ವರದಿಗಳೆಲ್ಲಾ ಬಂದಿವೆಯಲ್ಲ, ಅವು ಯಾವುವೂ ಕೂಡ ಸತ್ಯವಲ್ಲ, ಅದು ಸತ್ಯಕ್ಕೆ ದೂರವಾದವು. ಪತ್ರಿಕೆಗಳಲ್ಲಿ ಬರುವುದನ್ನೇ ನಂಬಿಕೊಂಡರೆ ಹೇಗೆ? ಯಾರಾದರೂ ನಮ್ಮ ಶಾಸಕರು ಪ್ರತ್ರಿಕೆಗಳಿಗೆ ಹೇಳಿದ್ದರೆ, ನಮ್ಮ ಅಧ್ಯಕ್ಷರು ಅಧಿಕೃತವಾಗಿ ಹೇಳಿದ್ದರೆ, ಅಥವಾ ಇನ್ಯಾರಾದರೂ ಹೇಳಿದ್ದರೆ I can understand ಇರಬಹುದು ಎಂದು ಹೇಳಬಹುದು. ಇದನ್ನೇ ದೊಡ್ಡದಾಗಿ, ಈ ತರಹ ಪತ್ರಿಕೆಯಲ್ಲಿ ಬಂದಿದೆ, 'ನಿಮಲ್ಲಿ ಒಡಕಿದೆ, ಸರ್ಕಾರದ ಬಗ್ಗೆ ನಿಮ್ಮವರೇ ಈ ತರಹ ಟೀಕೆಗಳನ್ನು ಮಾಡಿದ್ದಾರೆ, ಆ ತರಹ ಎಲ್ಲಾ ಮಾತನಾಡಿದ್ದಾರೆ' ಎನ್ನುವುದು ಸರಿಯಲ್ಲ. ಅವು ಯಾವುದೂ ಕೂಡ ಸತ್ಯವಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಎಷ್ಟು ದಿವಸ

ಇರುತ್ತದೋ? ಇಲ್ಲವೋ? ಅದು ಮೂರು ತಿಂಗಳು ಇರುತ್ತದೆ, ಆರು ತಿಂಗಳು ಇರುತ್ತದೆ, ಎಂದೆಲ್ಲಾ ಮಾತನಾಡಿದ್ದೀರಿ. ನಾನು ಈಗ ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ. ನಮ್ಮ ಸರ್ಕಾರ ಐದು ವರ್ಷ ಇದ್ದೇ ಇರುತ್ತದೆ. ಉಳಿದ ಈ ಅವಧಿಯ ಮೂರು ವರ್ಷ ಮೂರು ತಿಂಗಳು ನಾನೇ ಮುಖ್ಯಮಂತ್ರಿಯಾಗಿರುತ್ತೇನೆ.

**ಶ್ರೀ ಆರ್. ಅಶೋಕ್:–** ನಿಮಗೆ doubt ಬಂದಿದೆಯೇ? ನನಗೇನೂ ಅರ್ಥವಾಗುತ್ತಿಲ್ಲ.

**ಶ್ರೀ ಸಿ.ಟಿ. ರವಿ:–** ಹೈಕಮಾಂಡ್ ಒಪ್ಪದೇ ಇದ್ದರೂ ನೀವೇ ಇರುತ್ತೀರಾ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ರವಿ ಅವರೇ ನೀವು ಅವೆಲ್ಲಾ ಭ್ರಮೆ ಒಳಗೆ ಇರಬೇಡಿ. ಕುಳಿತುಕೊಳ್ಳಿ. ಆ ಭ್ರಮೆಗಳೆಲ್ಲಾ ಬೇಡ ನಿಮಗೆ. ಮಾನ್ಯ ಅಧ್ಯಕ್ಷರೆ, ಇವರು ಬಹಳ ಭ್ರಮೆಯಲ್ಲಿದ್ದಾರೆ. ನಾನು ಹೇಳಿದ್ದೇ ನಿಜ, ನಾನು ಈ ಚುನಾವಣೆ ವ್ಯವಸ್ಥೆ ನೋಡಿ ಮುಂದಿನ ಚುನಾವಣೆಗೆ ನಿಲ್ಲಬಾರದು ಎಂದು ಅಂದುಕೊಂಡಿದ್ದೆ. ಇವರು ಭಾರತವನ್ನು 'ಕಾಂಗ್ರೆಸ್ ಮುಕ್ತ ಭಾರತ' ಮಾಡುತ್ತೇವೆ, ಕರ್ನಾಟಕವನ್ನು 'ಕಾಂಗ್ರೆಸ್ ಮುಕ್ತ ಕರ್ನಾಟಕ' ಮಾಡುತ್ತೇವೆಂದು ಹೇಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದು ಹೇಳಿದ ಮೇಲೆ ನಾನು ಮತ್ತೆ ನನ್ನ ತೀರ್ಮಾನವನ್ನು ಬದಲಾವಣೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ.

**ಶ್ರೀ ಆರ್. ಅಶೋಕ್:–** BJP ಯಿಂದ ಜ್ಞಾನೋದಯವಾಗಿದೆ.

**ಶ್ರೀ ಸಿದ್ದರಾಮಯ್ಯ:–** ನಿಮ್ಮನ್ನು ನಿರ್ಮೂಲನೆ ಮಾಡಬೇಕೆಂಬ ಜ್ಞಾನೋದಯ ಅಲ್ಲ ಇದು. BJP ಯನ್ನು ಕರ್ನಾಟಕದಲ್ಲಿ ನಿರ್ಮೂಲನೆ ಮಾಡಬೇಕು, ಮತ್ತೆ 2018 ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕು. ಅದು ನೀವೇನು ಹೇಳುತ್ತೀರೋ ಅದು ನಿಮ್ಮ ಕನಸು.

ಶ್ರೀ ಜಗದೀಶ್ ಶೆಟ್ಟರ್:- ಅದು ನಿಮ್ಮ ಭ್ರಮೆ ಕನಸು ಅದು. ಯಾವ ರೀತಿ ನಿಮ್ಮದು U turn ಸರ್ಕಾರ ಇದೆ, ಅದೇ ರೀತಿ ನಿಮ್ಮ statement U turn ಅಷ್ಟೆ.

ಶ್ರೀ ಸಿದ್ದರಾಮಯ್ಯ:- 2018ನೇ ಇಸವಿಗೂ ಕೂಡ ಕಾಂಗ್ರೆಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ನಾವು ತರುತ್ತೇವೆ, BJP ಪಕ್ಷವನ್ನು ಎಂದೆಂದಿಗೂ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದಕ್ಕೆ ನಾವು ಬಿಡುವುದಿಲ್ಲ.

ಶ್ರೀ ಸಿ.ಟಿ. ರವಿ:- ನರೇಂದ್ರ ಮೋದಿಯವರನ್ನು ಪ್ರಧಾನಿಯಾಗುವುದಕ್ಕೆ ಬಿಡುವುದಿಲ್ಲವೆಂದು ಹೇಳಿದಿರಲ್ಲ ಹಾಗೆ.

ಶ್ರೀ ಸಿದ್ದರಾಮಯ್ಯ:- ಹೌದೌದು ಕುಳಿತುಕೊಳ್ಳಿ. ಐದು ವರ್ಷ ಆದ ಮೇಲೆ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ರವಿ ಅವರೇ, ಕಳೆದ ಸಾರಿ ನೀವೂ ಮಂತ್ರಿಯಾಗಿದ್ದಿರಿ, ಇಲ್ಲಿ ಕುಳಿತುಕೊಂಡು '20 ವರ್ಷಗಳ ಕಾಲ ನಾವು ಇಲ್ಲೇ, ನೀವು ಅಲ್ಲೇ' ಎಂದು ಹೇಳುತ್ತಿದ್ದೀರಿ. ಏನಾಯಿತು ಈಗ?

ಶ್ರೀ ಸಿ.ಟಿ. ರವಿ:- ನಿಮ್ಮದೂ ಅಷ್ಟೆ.

ಶ್ರೀ ಬಿ.ಆರ್. ಪಾಟೀಲ್:- ನೀವೆಲ್ಲ Kejriwal ರವರಿಗೆ ಧನ್ಯವಾದಗಳನ್ನು ಸಲ್ಲಿಸಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ:- 20 ವರ್ಷಗಳ ಕಾಲ. . . ಜನ ತಂತ್ರದ ವ್ಯವಸ್ಥೆಯಲ್ಲಿ . . .

ಶ್ರೀ ಬಸವರಾಜ ಬೊಮ್ಮಾಯಿ:- 2018 ಕ್ಕೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುತ್ತೀರಿ ಎಂದರೆ ನಮಗೆ ಚಿಂತೆ ಇಲ್ಲ, ಕಾಂಗ್ರೆಸ್‌ನವರು ಅದನ್ನು ಚಿಂತೆ ಮಾಡಬೇಕು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:- ಇದು ಭಾಷಣದ ಯಾವ ಭಾಗ ಎಂದು ಸ್ವಲ್ಪ ಹೇಳಿಬಿಡಿ.

ಶ್ರೀ ಸಿದ್ದರಾಮಯ್ಯ:- ನೀವು ಪತ್ರಿಕೆಗಳನ್ನೆಲ್ಲಾ ಓದಿ ಹೇಳಿದಿರಲ್ಲ. ಅದು ಯಾವ ಭಾಗ? ಪತ್ರಿಕೆಗಳಲ್ಲಿ ಬಂದಿದ್ದೆಲ್ಲಾ ಯಾವ ಭಾಗವೆಂದು ಸ್ವಲ್ಪ ಹೇಳುತ್ತೀರಾ?

ಶ್ರೀ ಕೆ.ಜಿ. ಬೋಪಯ್ಯ:- ನೀವು ಹೇಳಿದ ಹಾಗೆ ಅವರು ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ:- ಇದು ರಾಜ್ಯಪಾಲರ ಭಾಷಣ, ಕುಳಿತುಕೊಳ್ಳಿ. ನೀವು ಹೇಳಿದ್ದರಿಂದ ರಾಜಕೀಯವಾಗಿ ನಿಮಗೂ ಸ್ವಲ್ಪ ಹೇಳಬೇಕಾಗುತ್ತದೆ. ನೀವೆಲ್ಲಾ ಹೇಳಿ ಹೋದರೆ ನಾವು ಹಾಗೆ ಕುಳಿತುಕೊಂಡು ಕೇಳಿಕೊಂಡು ಹೋಗಿ ಬಿಡುವುದಾ?

ಶ್ರೀ ಕೆ.ಜಿ. ಬೋಪಯ್ಯ:- ನೀವು ಬರೀ ರಾಜಕೀಯವನ್ನೇ ಹೇಳುವುದಾದರೆ, ನಾನೂ ಮಧ್ಯೆ ಮಧ್ಯೆ ಹೇಳಲೇಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ:- ನಾನು ರಾಜಕೀಯ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ ಬೋಪಯ್ಯನವರೇ, ನೀವು ಅಧ್ಯಕ್ಷರಾಗಿದ್ದಾಗ ನಾನು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡು ಮಾತನಾಡುವಾಗ, ನೀವು ಎಷ್ಟು ಸಾರಿ ಮೆಚ್ಚುಗೆ ವ್ಯಕ್ತಪಡಿಸಿದ್ದೀರಿ. ನಾನು ರಾಜಕೀಯ ಹೆಚ್ಚಾಗಿ ಮಾತನಾಡುತ್ತಿದ್ದೆನಾ?

ಶ್ರೀ ಕೆ.ಜಿ. ಬೋಪಯ್ಯ:- ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮೆಚ್ಚುಗೆ ವ್ಯಕ್ತಪಡಿಸುವುದು ಅದೊಂದು ಭಾಗ ಅದಕ್ಕೇ ಮಾಡಿದ್ದೇನೆ.

ಶ್ರೀ ಸಿದ್ದರಾಮಯ್ಯ:- Ok. Thank you.

ಶ್ರೀ ಆರ್. ಅಶೋಕ್:– ನೀವು ಬಂದು ಬಾಗಿಲು ಒಡೆದು ಹಾಕಿದಿರಲ್ಲಾ?

ಶ್ರೀ ಕೆ.ಜಿ. ಬೋಪಯ್ಯ:– ನೀವು ಇಲ್ಲಿದ್ದಾಗ ಹೇಗೆ ವರ್ತನೆ ಮಾಡಿದಿರಿ ಎಂದು ಹೇಳಬೇಕೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಾನು ಮಧ್ಯಾಹ್ನ 3.00 ಗಂಟೆಗೆ ವಿಧಾನಪರಿಷತ್ತಿಗೆ ಹೋಗಿ ಉತ್ತರ ಕೊಡಬೇಕು. ನಮಗೆ ಟೈಮ್ ಬಹಳ ಕಡಿಮೆ ಇದೆ.

ಶ್ರೀ ಆರ್. ಅಶೋಕ್:– ನೀವು ಪದೇ ಪದೇ, 'ನಾನೇ ಮುಖ್ಯ ಮಂತ್ರಿ,' 'ನಾನೇ ಮುಖ್ಯ ಮಂತ್ರಿ' ಎಂದು ದಯವಿಟ್ಟು ಹೇಳಬೇಡಿ. ರಾಜ್ಯಪಾಲರು ಭಾಷಣದಲ್ಲಿ ಹೇಳಿ ಹೋಗಿದ್ದಾರೆ. 'ನನ್ನ ಸರ್ಕಾರ' ಎಂದು ಅವರು ನಿಮ್ಮ ಬಗ್ಗೆ ಹೊಗಳಿ ಹೇಳಿ ಹೋಗಿದ್ದಾರೆ. ಯಾರಿಗೂ doubt ಇಲ್ಲ ನೀವೇ ಕ್ರಿಯೇಟ್ ಮಾಡುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ:– ನೀವು ಹೇಳಿದ್ದರಿಂದ ನಾನು ಅದಕ್ಕೆ ಉತ್ತರ ಹೇಳುತ್ತಿದ್ದೇನೆ.

ಶ್ರೀ ಆರ್. ಅಶೋಕ್:– ನಾವು ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಸಿದ್ದರಾಮಯ್ಯನವರು ಇನ್ನು ಮೂರು ತಿಂಗಳು ಮಾತ್ರ ಇರುತ್ತಾರೆಂದು ನಿಮ್ಮ ಜೋಷಿಯವರು, ಮಾನ್ಯ ಜಗದೀಶ್ ಶೆಟ್ಟರ್ ರವರು ಎಲ್ಲರೂ ಹೇಳಿದ್ದಾರೆ.

ಶ್ರೀ ಆರ್. ಅಶೋಕ್:– ನಾವು ಹೇಳಲಿಲ್ಲ. ಮಾನ್ಯ ಖರ್ಗೆಯವರು ಮುಖ್ಯ ಮಂತ್ರಿಗಳಾಗುತ್ತಾರೆಂದು ಮಾನ್ಯ ಮಾಲೀಕಯ್ಯ ಗುತ್ತೇದಾರ್‌ರವರು statement ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಪತ್ರಿಕಾ ಹೇಳಿಕೆಗಳನ್ನು ಹೇಳಬಾರದು ಎಂದು ಇದ್ದೆ, ಆದರೆ ಈಗ ಅದನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಹೌದು, ಹೇಳಿದ್ದಾರೆ, ನಿಜ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಅಶೋಕ್ ನೀವು ಕುಳಿತುಕೊಳ್ಳಿ. ಮಧ್ಯೆ ಮಧ್ಯೆ ಈ ರೀತಿ ಎದ್ದರೆ ಹೇಗೆ? ನೀವು senior member, Deputy Chief Minister ಆಗಿದ್ದವರು ಈ ರೀತಿ ಮಾಡಿದರೆ ಹೇಗೆ ಹೇಳಿ?

ಶ್ರೀ ಆರ್. ಅಶೋಕ್:- ಅಲ್ಲಾ ಸಾರ್, ನೀವು ದೆಹಲಿಗೆ ಹೋದರೆ ನಾವು ಕರ್ನಾಟಕಕ್ಕೆ ವಾಪಸ್ ನಿಮ್ಮನ್ನು ಕರೆದುಕೊಂಡು ಬರಬೇಕಲ್ಲ.

ಶ್ರೀ ಸಿದ್ದರಾಮಯ್ಯ:- ಆಯಿತು, ಕುಳಿತುಕೊಳ್ಳಿ. ಅವರೆಲ್ಲಾ ಪರಿಶಿಷ್ಟ ಜಾತಿಯವರು ಕೂಡ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿಯಾಗುತ್ತಾರೆಂದು ಹೇಳಿದ್ದಾರೆ. ಆಗಬೇಕು ಎಂದು ನಾನೂ ಕೂಡ ಹೇಳುತ್ತೇನೆ. ಅದೇನಾದರೂ ಆಗುವುದಕ್ಕೆ ಸಾಧ್ಯವಿದ್ದರೆ, ಕಾಂಗ್ರೆಸ್‌ನಲ್ಲಿ ಮಾತ್ರ ಸಾಧ್ಯ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಹಿಂದೆ ಎಲ್ಲಾ ಆಗಿದ್ದಾರೆ. ಬಿಹಾರದಲ್ಲಿ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಆಗಿದೆ. ಮಹಾರಾಷ್ಟ್ರದಲ್ಲಿ, ಬಿಹಾರ್‌ದಲ್ಲಿ, ಒರಿಸ್ಸಾದಲ್ಲಿ, ಆಂಧ್ರದಲ್ಲಿ ಇಲ್ಲೆಲ್ಲಾ ಪರಿಶಿಷ್ಟ ಜಾತಿಯವರು ಮುಖ್ಯಮಂತ್ರಿಗಳಾಗಿರತಕ್ಕಂಥ ನಿದರ್ಶನವಿದೆ. ಅದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಎನ್ನತಕ್ಕಂಥದ್ದನ್ನು ಹೇಳಬಯಸುತ್ತೇನೆ. ಆದುದರಿಂದ ಇವತ್ತು ಹಿಂದುಳಿದವರಿಗೆ, ದಲಿತರಿಗೆ, ಅಲ್ಪಸಂಖ್ಯಾತರಿಗೆ ಹೀಗೆ ಎಲ್ಲರಿಗೂ ಕೂಡ ಅವಕಾಶ ಇರತಕ್ಕಂಥದ್ದು ಮತ್ತು ಎಲ್ಲ ವರ್ಗದ ಜನರಿಗೂ ಕೂಡ ಅವಕಾಶ ಇರತಕ್ಕಂಥದ್ದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ. ನಮ್ಮದು sectarian outlook ಇರತಕ್ಕಂಥ ಪಾರ್ಟಿ ಅಲ್ಲ. ಈ ದೇಶದ ಎಲ್ಲ ಜನರನ್ನೂ ಕೂಡ, ರಾಜ್ಯದಲ್ಲಿರತಕ್ಕಂಥ 6 ಕೋಟಿ 35 ಲಕ್ಷ ಜನರನ್ನೂ ಕೂಡ ಒಟ್ಟಿಗೆ ತೆಗೆದುಕೊಂಡು ಹೋಗತಕ್ಕಂಥ, ರಾಜಕೀಯ

ಸಿದ್ಧಾಂತವಿರತಕ್ಕಂಥ, ರಾಜಕೀಯ ಕಾರ್ಯಕ್ರಮಗಳಿರತಕ್ಕಂಥ, ಎಲ್ಲರಿಗೂ ಕೂಡ ಸಾಮಾಜಿಕ ನ್ಯಾಯ ಒದಗಿಸತಕ್ಕಂಥ ರೀತಿಯಲ್ಲಿ ಇಚ್ಛಾಶಕ್ತಿ ಇರತಕ್ಕಂಥದ್ದು. ಅದು ಕಾಂಗ್ರೆಸ್ ಪಕ್ಷಕ್ಕೆ ಮಾತ್ರವೇ ಹೊರತು ಬೇರೆ ಯಾವ ಪಕ್ಷಕ್ಕು ಅಲ್ಲ ಎನ್ನತಕ್ಕಂಥದ್ದನ್ನು ತಿಳಿಸಬಯಸುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಒಬ್ಬ ಹಿಂದುಳಿದ ವರ್ಗದ ವ್ಯಕ್ತಿಯನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡಿದ್ದು ಭಾರತೀಯ ಜನತಾ ಪಾರ್ಟಿ, ಒಬ್ಬ ಚಹಾ ಮಾರುವಂಥ ವ್ಯಕ್ತಿಯನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡಿದ್ದು ಭಾರತೀಯ ಜನತಾ ಪಾರ್ಟಿ.

**ಶ್ರೀ ಸಿದ್ದರಾಮಯ್ಯ:-** ಬಂಗಾರು ಲಕ್ಷ್ಮಣ್‌ರವರು ಬಿ.ಜೆ.ಪಿ. ಯಲ್ಲಿ ಇದ್ದರಲ್ಲ, ಏನಾಯಿತು ಅವರ ಕಥೆ? ಪಾಪ! ಈತ ತೀರಿಹೋಗಿದ್ದಾರೆ. ಅವರಿಗೆ sting operatin ಮಾಡಿ, ಪಾಪ ಅವರು ಏನಾದರು? ಈಗ ಅದೆಲ್ಲಾ ಬೇಡ ಬಿಡಿ.

**ಶ್ರೀ ಸಿ.ಟಿ. ರವಿ:-** ಅಂಬೇಡ್ಕರ್‌ರವರನ್ನು ಲೋಕಸಭೆಗೆ ಬರುವುದಕ್ಕೆ ಬಿಡಲಿಲ್ಲವಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಕಾಂಗ್ರೆಸ್‌ನಲ್ಲಿ ಅಂಬೇಡ್ಕರ್‌ಗೆ ಏನಾಯಿತು? ಜಗಜೀವನ್ ರಾಂಗೆ ಏನಾಯಿತು?

**ಶ್ರೀ ಸಿ.ಟಿ. ರವಿ:-** ಮಹಾನ್ ವ್ಯಕ್ತಿತ್ವ ಹೊಂದಿದ್ದ ಅಂಬೇಡ್ಕರ್‌ಗೆ ಲೋಕಸಭೆಗೆ ಬರುವುದಕ್ಕೆ ಬಿಡಲಿಲ್ಲ.

(ಗೊಂದಲ)

**ಅಧ್ಯಕ್ಷರು:-** ಏ ರವಿ, ಏಕೆ ಹೀಗೆ ಮಾಡುತ್ತೀರಿ? ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ರೀ ಬಸವರಾಜ್, ನಿಮ್ಮ father ಇದನ್ನೇ ಹೇಳಿಕೊಟ್ಟಿದ್ದಾರಾ, ಹೀಗೆ ಹೇಳು ಎಂದು.

**ಶ್ರೀ ಬಸವರಾಜ ಬೊಮ್ಮಾಯಿ:-** ಸತ್ಯ ಹೇಳು ಎಂದು ಹೇಳಿಕೊಟ್ಟಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಆಯಿತು ಕುಳಿತುಕೊಳ್ಳಿ. ಅವರು ಇದ್ದಿದ್ದರೆ ನೀವು ಈ ರೀತಿ ಮಾತನಾಡುವುದನ್ನು ಅವರು ಒಪ್ಪಿಕೊಳ್ಳುತ್ತಿರಲಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಸಮಾಜವಾದಿ ಗುರುಗಳು ಜಾರ್ಜ್ ಫರ್ನಾಂಡಿಸ್‌ರವರು ನಿಮಗೆ ಏನು ಹೇಳಿದರು?

**ಶ್ರೀ ಸಿದ್ದರಾಮಯ್ಯ:-** ಜಾರ್ಜ್ ಫರ್ನಾಂಡಿಸ್‌ರವರು ಹೇಳಿದುದರ ಬಗ್ಗೆ ಇಲ್ಲೆಲ್ಲಾ ಚರ್ಚೆ ಮಾಡುವುದು ಈಗ ಬೇಡ.

**ಅಧ್ಯಕ್ಷರು:-** ಇವೆಲ್ಲಾ ದೊಡ್ಡ issue ಮಾಡುವುದು ಬೇಡ. ನೀವು ಉತ್ತರ ಮುಂದುವರೆಸಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಬಂಗಾರು ಲಕ್ಷ್ಮಣ್‌ರವರಿಗೆ ಏನಾಯಿತು? ಎಂಬ ಕಥೆ ಈಗ ಇತಿಹಾಸವಾಗಿದೆ. ಆಯಿತಪ್ಪಾ, ನೀವು Scheduled Caste ಬಗ್ಗೆ ಬಹಳ ಮಾತನಾಡುತ್ತೀರಲ್ಲಾ, ಅಲ್ಲಿ ನಮ್ಮ ಕಾರಜೋಳ್‌ರವರಿದ್ದಾರೆ, ಅವರು ಅಧ್ಯಕ್ಷರಾಗಬೇಕೆಂದಿದ್ದರು, ಅವರನ್ನು ಏಕೆ ಅಧ್ಯಕ್ಷರನ್ನಾಗಿ ಮಾಡಲಿಲ್ಲ? ನೀವೇನು ಜೋಶಿಯವರನ್ನೇ ಮಾಡಬೇಕಾಗಿತ್ತೇ? ಜಿಗಜಿಣಗಿಯವರಿದ್ದಾರಲ್ಲ. Is he not a senior leader in your party?

**ಶ್ರೀ ಜಗದೀಶ್ ಶೆಟ್ಟರ್:-** ಪರಮೇಶ್ವರ್‌ರವರನ್ನು ಮಂತ್ರಿ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ. ಅವರು ರಾಜ್ಯದಲ್ಲಿ ಕಾಂಗ್ರೆಸ್ ಪಾರ್ಟಿ ಅಧ್ಯಕ್ಷರು.

**ಶ್ರೀ ಸಿದ್ದರಾಮಯ್ಯ:-** ಜಿಗಜಿಣಗಿಯವರನ್ನು ಕರ್ನಾಟಕದಿಂದ ಮಂತ್ರಿಯನ್ನಾಗಿ ಕೇಂದ್ರದಲ್ಲಿ ಏಕೆ ಮಾಡುವುದಕ್ಕೆ ಆಗಲಿಲ್ಲ? ಇವರಿಗೆ ಸಾಮಾಜಿಕ ನ್ಯಾಯದಲ್ಲಿ ನಂಬಿಕೆಯಿಲ್ಲ. ಇವರಿಗೆ ಪ್ರತಿಯೊಬ್ಬರಿಗೂ ಕೂಡ

ಸಮಾನ ಅವಕಾಶವನ್ನು ಕೊಡಬೇಕು ಎಂಬುದರಲ್ಲಿ ನಂಬಿಕೆಯಿಲ್ಲ. ಇವರು ಮೀಸಲಾತಿಗೆ ವಿರುದ್ಧವಾಗಿರತಕ್ಕಂಥವರು. ಆದುದರಿಂದ ನಾವು ಇವರಿಂದ ಪಾಠ ಕಲಿಯಬೇಕಾದಂಥ ಅಗತ್ಯವಿಲ್ಲ.

**ಶ್ರೀ ಸಿ.ಟಿ. ರವಿ:–** ಅತಿ ಹೆಚ್ಚು ದಲಿತರು ಗೆದ್ದು ಬಂದಿರತಕ್ಕಂಥ ಪಾರ್ಟಿ ಬಿ.ಜೆ.ಪಿ.

**ಶ್ರೀ ಸಿದ್ದರಾಮಯ್ಯ:–** ಅದಕ್ಕೇ ಜಿಗಜಿಣಗಿಯವರನ್ನು ಪಾಪ ಮಂತ್ರಿ ಮಾಡಲಿಲ್ಲ. ಹೆಚ್ಚು ಜನರು ಗೆದ್ದು ಬಂದಿದ್ದಾರೆಂದು ಜಿಗಜಿಣಗಿಯವರನ್ನು ಮಂತ್ರಿ ಮಾಡಲಿಲ್ಲ.

**ಶ್ರೀ ಆರ್. ಅಶೋಕ್:–** ಈಗ ಪರಮೇಶ್ವರ್‌ರವರು ಡಿ.ಸಿ.ಎಂ. ಆಗುತ್ತಾರೋ ಇಲ್ಲವೋ ಎಂಬುದು ಈಗ ಪ್ರಮುಖವಾದ ವಿಚಾರ.

**ಶ್ರೀ ಸಿದ್ದರಾಮಯ್ಯ:–** ಆ ವಿಚಾರ ನಮಗೆ ಬಿಟ್ಟದ್ದು ನೀವು ಕುಳಿತುಕೊಳ್ಳಿ. ಆ ವಿಚಾರ ಹೈಕಮಾಂಡ್‌ಗೆ ಮತ್ತು ನಮಗೆ ಸೇರಿದ ವಿಚಾರ. ನಿಮಗೆ ಸಂಬಂಧಪಟ್ಟದ್ದಲ್ಲ.

**ಅಧ್ಯಕ್ಷರು:–** ಎಲ್ಲರೂ ಕುಳಿತುಕೊಳ್ಳಿ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗಿರುವುದಕ್ಕೆ ಉತ್ತರ ಹೇಳಬೇಕು. ನೀವು ಈ ರೀತಿ ಮಧ್ಯೆ ಮಧ್ಯೆ ಮಾತನಾಡಿದರೆ ಉತ್ತರ ಅದಕ್ಕೆ ಮಾತ್ರ ಹೇಳಬೇಕೆ?

**ಶ್ರೀ ಆರ್. ಅಶೋಕ್:–** ಅವರು ಇನ್ನೂ ಉತ್ತರ ಕೊಡುವುದಕ್ಕೆ ಪ್ರಾರಂಭ ಮಾಡಿಲ್ಲ.

**ಅಧ್ಯಕ್ಷರು:–** ಬರುತ್ತಾರೆ ಸುಮ್ಮನಿರಿ, casual ಆಗಿ ವಿರೋಧ ಪಕ್ಷದ ನಾಯಕರು ಹೇಳಿದ್ದರಿಂದ ಅದರ ಬಗ್ಗೆ ಹೇಳಿದ್ದಾರೆ.

**ಶ್ರೀ ಆರ್. ಅಶೋಕ್:–** ಅವರು ದೆಹಲಿಯಲ್ಲೇ ಇನ್ನು ಇದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಇಲ್ಲ, ಇಲ್ಲ, ದೆಹಲಿಯಲ್ಲಿಲ್ಲ. ಬಂದುಬಿಟ್ಟೆ, ದೆಹಲಿಯಲ್ಲಿ ಎಲ್ಲವೂ ಆಗಿ ಹೋಯಿತಲ್ಲ. ನಿಮಗೆ ಸರಿಯಾಗಿ ಪಾಠ ಕಲಿಸಿದ್ದು ಆಯಿತಲ್ಲ. ಪುನಃ ಅದರ ಬಗ್ಗೆ ಏನು ಹೇಳೋದು?

**ಶ್ರೀ ಬಸವರಾಜ ಬೊಮ್ಮಾಯಿ:-** ಅಲ್ಲಾರಿ, ಪಕ್ಕದ ಮನೆಯಲ್ಲಿ ಗಂಡು ಹಡದ್ರೆ ನೀವೇಕೆ ಪೇಡ ಹಂಚುತ್ತೀರಿ? ನೀವೇ ದೆಹಲಿಯಲ್ಲಿ ಗೆದ್ದಂತೆ ಆಡುತ್ತೀರಿ.

**ಅಧ್ಯಕ್ಷರು:-** ಏ ಬೊಮ್ಮಾಯಿ, ಅವರು ಉತ್ತರ ಹೇಳುವುದಕ್ಕೆ ಬಿಡ್ರೋ ಮಾರಾಯ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ನಾವು ಚುನಾವಣೆಗಿಂತ ಪೂರ್ವದಲ್ಲಿ ನಮ್ಮ manifesto ಮೂಲಕ ಜನತೆಗೆ 165 ಭರವಸೆಗಳನ್ನು ಕೊಟ್ಟಿದ್ದೆವು. ಈಗಾಗಲೇ ನಾವು 2013-14 ಮತ್ತು 2014-15 ರ ಎರಡು ಆಯವ್ಯಯಗಳಲ್ಲಿ ಅದರಲ್ಲಿ 95 ಭರವಸೆಗಳನ್ನು ಈಡೇರಿಸಿದ್ದೇವೆ. ನಮ್ಮ ಸರ್ಕಾರ ಸಾಮಾನ್ಯ ಜನರ ಪರವಾಗಿದೆ, ಬಡವರ ಪರವಾಗಿದೆ, ರೈತರ ಪರವಾಗಿದೆ, ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರ ಪರವಾಗಿದೆ ಎನ್ನುವುದನ್ನು ಹೇಳಬಯಸುತ್ತೇನೆ. ನಾವು ನಮ್ಮ ಕಾರ್ಯಕ್ರಮಗಳ ಮುಖಾಂತರ ಈಗಾಗಲೇ ಸಾಧನೆ ತೋರಿಸಿದ್ದೇವೆ. ಆ ಹಾದಿಯಲ್ಲಿ ಇವತ್ತು ನಾವು ನಡೆಯುತ್ತಿದ್ದೇವೆ. ನಾನು ಪ್ರಮಾಣ ವಚನ ಸ್ವೀಕಾರ ಮಾಡಿದ ಮೊದಲನೇ ದಿನವೇ, ಮಾನ್ಯ ರಮೇಶ್‌ಕುಮಾರ್‌ರವರು ನಮ್ಮ ಪಕ್ಷದ ಪ್ರಣಾಳಿಕೆಯನ್ನು ತಯಾರು ಮಾಡತಕ್ಕಂಥ ಅಧ್ಯಕ್ಷರಾಗಿದ್ದರು, ...

**ಶ್ರೀ ಸಿ.ಟಿ. ರವಿ:-** ಅಂಥ ಬುದ್ಧಿವಂತರನ್ನು ಕೇವಲ ಅದಕ್ಕೆ ಮಾತ್ರ ಇಟ್ಟುಬಿಟ್ಟಿದೀರಲ್ಲ. ಅಂಥ ಬುದ್ಧಿವಂತರನ್ನು ಸಾಮಾಜಿಕ ನ್ಯಾಯದ ಹೆಸರಿನಲ್ಲಿಯೇ ನೀವು ಅಲ್ಲಿಯೇ ಇಟ್ಟುಬಿಟ್ಟಿದ್ದೀರಲ್ಲ. ಅವರು ಎಂಥ ಅನುಭವಿ, ಎಂಥ ಬುದ್ಧಿಂತರು, ಮೇಧಾವಿ, ಅವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಇಡೀ ಸದನ ಅವರ ಮಾತುಗಳನ್ನು ಆಲಿಸುತ್ತದೆ.

**ಶ್ರೀ ಸಿದ್ದರಾಮಯ್ಯ:-** ಅವರ ಬುದ್ದಿವಂತಿಕೆ, ಅವರ ಅನುಭವ, ಎಲ್ಲವನ್ನೂ ಉಪಯೋಗಿಸಿಕೊಳ್ಳುತ್ತಿದ್ದೇವೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಅವರು ಅಲ್ಲಿ ಇರುತ್ತಾರೋ, ಇಲ್ಲಿಗೆ ಬರುತ್ತಾರೋ ಅವೆಲ್ಲ ನಿಮಗೆ ಏಕೆ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ನಾನು ಅಧಿಕಾರ ಸ್ವೀಕಾರ ಮಾಡಿದ ಅರ್ಧ ಗಂಟೆಯೊಳಗೆ ರಮೇಶ್‌ಕುಮಾರ್‌ರವರು ತಯಾರು ಮಾಡಿದ್ದಂಥ ಪ್ರಣಾಳಿಕೆಯಲ್ಲಿನ ಬಹುತೇಕ ಭರವಸೆಗಳನ್ನು ಈಡೇರಿಸತಕ್ಕಂಥದ್ದರ ಬಗ್ಗೆ ಘೋಷಣೆ ಮಾಡಿ, ಅದನ್ನು 24 ಗಂಟೆಯೊಳಗೆ ಜಾರಿಗೆ ಕೊಡತಕ್ಕಂಥ ಕೆಲಸವನ್ನು ಮಾಡಿದೆ. ಇವರು, 'ಸರ್ಕಾರ ಜೀವಂತಿಕೆಯಿಲ್ಲ,' 'ಲವಲವಿಕೆಯಿಲ್ಲ,' 'ಆಡಳಿತ ಕುಸಿದು ಬಿದ್ದುಹೋಗಿದೆ' ಎಂದು ಇವರ ಭಾಷೆಯಲ್ಲಿ ಹೇಳಿದ್ದಾರೆ.

**ಶ್ರೀ ಪ್ರಮೋದ್ ಮಧ್ವರಾಜ್:-** ಟೇಕ್ ಆಫ್ ಆಗಿಲ್ಲ.

**ಶ್ರೀ ಸಿದ್ದರಾಮಯ್ಯ:-** ಹೌದು. ಟೇಕ್ ಆಫ್ ಆಗಿಲ್ಲ ಎಂದೂ ಸಹಾ ಹೇಳಿದ್ದಾರೆ.

**ಶ್ರೀ ಆರ್. ಅಶೋಕ್:-** ಶಾಸಕಾಂಗ ಪಕ್ಷದಲ್ಲಿ ಅವರು ಏನು ಹೇಳಿದ್ದರೋ ಅದನ್ನು ಇಲ್ಲಿ ಹೇಳುತ್ತಿದ್ದಾರಷ್ಟೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನಮ್ಮಲ್ಲಿ ಆಂತರಿಕ ಪ್ರಜಾಪ್ರಭುತ್ವವಿದೆ. ನಿಮ್ಮಲ್ಲಿ ಆಂತರಿಕ ಪ್ರಜಾಪ್ರಭುತ್ವ ಇರಲಿಕ್ಕೆ ಸಾಧ್ಯವೇ ಇಲ್ಲ. ನನಗೆ ಈಗ ಇರುವ information ಪ್ರಕಾರ ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ಮೋದಿಯವರನ್ನು ಕ್ಯಾಬಿನೆಟ್ ಮಂತ್ರಿಗಳು ಕೂಡ ಭೇಟಿ ಮಾಡುವುದಕ್ಕೆ

ಆಗುವುದಿಲ್ಲ, ಅಂಥ ಪರಿಸ್ಥಿತಿ ನಿರ್ಮಾಣವಾಗಿದೆಯೆಂದು information ಬರುತ್ತಿದೆ.

**ಶ್ರೀ ಜಗದೀಶ್ ಶೆಟ್ಟರ್:-** ಸತ್ಯಕ್ಕೆ ದೂರವಾದ ಸಂಗತಿ. ಇವನ್ನೆಲ್ಲ ಸುಮ್ಮನೆ ಯಾವುದೇ ಆಧಾರವಿಲ್ಲದೇ ಹೇಳುವಂಥದ್ದು ಸರಿಯಲ್ಲ. ಒಬ್ಬ ಜವಾಬ್ದಾರಿ ಮುಖ್ಯಮಂತ್ರಿ ಈ ರೀತಿ ಹೇಳುವುದು ಸರಿಯಲ್ಲ.

**ಶ್ರೀ ಸಿದ್ದರಾಮಯ್ಯ:-** ಜಗದೀಶ್ ಶೆಟ್ಟರ್‌ರವರೆ, ನಾನು information ಎಂದು ಹೇಳಿದೆ. ಅದು ಸರಿಯಿಲ್ಲವೆಂದರೆ ಸರಿಯಿಲ್ಲ ಬಿಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಪತ್ರಿಕೆಯಲ್ಲಿ ಬಂದಿರುವ information ಅನ್ನು ನಾನು ಹೇಳಿದೆ.

**ಶ್ರೀ ಜಗದೀಶ್ ಶೆಟ್ಟರ್:-** ಪತ್ರಿಕೆಯಲ್ಲಿ ಬಂದಿದ್ದು ಹೇಳಬೇಡಿ ಎನ್ನುವವರು ಈಗ ನೀವೇ ಪತ್ರಿಕೆಯಲ್ಲಿ ಬಂದಿದ್ದನ್ನು ಹೇಳುತ್ತಿದ್ದೀರಲ್ಲಾ?

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:-** ಒಂದು ಕಡೆ ಪತ್ರಿಕೆ, ಒಂದು ಕಡೆ ಇಲ್ಲ

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನೀವು ಪತ್ರಿಕೆ ನೋಡಿಕೊಂಡು ಹೇಳಿದ ಹಾಗೆ ನಾನು ಹೇಳಿದೆ ಅಷ್ಟೆ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:-** ನಾವು ಹೇಳುವುದು ಸರಿಯಲ್ಲ ಅದು, ನೀವು ಹೇಳುವುದು ಸರಿ.

(ಗೊಂದಲ)

**ಶ್ರೀ ಪ್ರಮೋದ್ ಮಧ್ವರಾಜ್:-** ಮೋದಿಯವರದು one man show.

**ಶ್ರೀ ರಮಾನಾಥ್ ರೈ:–** ಅದು one man show.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನಾನು ಆ ವಿಚಾರ ಮಾತನಾಡುವುದಕ್ಕೆ ಹೋದರೆ ನೀವು ಕೇಳುವುದಕ್ಕೆ ತಯಾರಾಗಿಲ್ಲ, ಸಹಿಸಿಕೊಳ್ಳುವುದಕ್ಕೂ ತಯಾರಾಗಿಲ್ಲ. ನೀವು ಮಾತನಾಡುವಾಗ ನಾನು interfere ಆಗದೆ ಸುಮ್ಮನೆ ಕುಳಿತುಕೊಂಡಿದ್ದೆನು. ಜಗದೀಶ್ ಶೆಟ್ಟರ್ ಮಾತನಾಡುವಾಗ ನಾನು ಒಂದೇ ಒಂದು ಬಾರಿ ಎದ್ದು interfere ಆಗಿಲ್ಲ. ಆದರೆ ನಾನು ಆ ರೀತಿ ಮಾಡುವುದಿಲ್ಲ.

(ಗೊಂದಲ)

**ಶ್ರೀ ಸಿ.ಟಿ. ರವಿ:–** ತಾವು ಇನ್ನೂ ಮಾನ್ಯ ರಾಜ್ಯಪಾಲರ ಭಾಷಣದ ಟ್ರ್ಯಾಕ್‌ಗೆ ಬರಲೇ ಇಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಅದು ಮಿತವಾಗಿರಬೇಕು ಅಷ್ಟೆ, ಕುಳಿತುಕೊಳ್ಳಿ. ನಮ್ಮಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ಅವರ ಅಭಿಪ್ರಾಯಗಳನ್ನು ವ್ಯಕ್ತ ಮಾಡುವುದಕ್ಕೆ ಅವರಿಗೆ ಹಕ್ಕಿದೆ. ನಾವು ನಮ್ಮ ಶಾಸಕಾಂಗ ಸಭೆಯಲ್ಲಿ ಅಥವಾ ಬೇರೆ ವೇದಿಕೆಗಳಲ್ಲಿ ಅದಕ್ಕೆ ಉತ್ತರ ಕೊಡುತ್ತೇವೆ, ಅದು ನಮಗೆ ಸಂಬಂಧಪಟ್ಟ ವಿಚಾರ. ಆದರೆ ಎಲ್ಲಿಯೂ ಕೂಡ ಸರ್ಕಾರದ ಆಡಳಿತದ ಬಗ್ಗೆ ನಮ್ಮ ಯಾವ ಶಾಸಕರೂ ಕೂಡ ವಿರುದ್ಧವಾಗಿ ಎಲ್ಲಿಯೂ ಕೂಡ ಮಾತನಾಡಿಲ್ಲ. ನಮ್ಮ ಎಲ್ಲಾ ಶಾಸಕರು ಕೂಡ ಒಗ್ಗಟ್ಟಾಗಿದ್ದೇವೆ. ನಿಮ್ಮ ಕಾಲದಲ್ಲಿ, ನೀವು ಅಧಿಕಾರದಲ್ಲಿದ್ದಾಗ ಏನೇನು ಆಯಿತು? ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನೀವು ಯಾವ್ಯಾವ ರೆಸಾರ್ಟ್‌ಗಳಿಗೆ ಹೋದಿರಿ? ಎಲ್ಲಿಗೆ ಕರೆದುಕೊಂಡು ಹೋದಿರಿ? ಏನಾಯಿತು? ಯಾರು ರಾಜೀನಾಮೆ ಕೊಡಬೇಕಾಗಿ ಬಂತು? ಎಂದು ಎಲ್ಲರಿಗೂ ಗೊತ್ತಿದೆ. ಪಾಪ! ಶೋಭಾ ಕರಂದ್ಲಾಜೆ ಯವರು ಏಕೆ ರಾಜೀನಾಮೆ ಕೊಟ್ಟರು? ಸುಮ್ಮಸುಮ್ಮನೆ

ಕೊಟ್ಟರೇ? ಅವರು ಯಾರ ಒತ್ತಡದಿಂದ ಕೊಟ್ಟರು? ಹೋಗಲಿ, ಇದೇ ನಮ್ಮ ಜಗದೀಶ್ ಶೆಟ್ಟರ್‌ರವರು ಇಲ್ಲಿ ಸ್ಪೀಕರ್ ಆಗಿದ್ದರು. ಅವರು ಏನೇನು ಮಾತನಾಡಿದರು? ಏನೇನು ಹೇಳಿದರು? ಎಂದು ನಮಗೆ ಗೊತ್ತಿಲ್ಲವೇ? ನಾನು ಈಗ ಅದರ ಬಗ್ಗೆ ಹೇಳುವವುದಕ್ಕೆ ಹೋಗುವುದಿಲ್ಲ.

**ಶ್ರೀ ಜಗದೀಶ್ ಶೆಟ್ಟರ್**:- ನಾನು ಸ್ಪೀಕರ್ ಇದ್ದಂತಹ ಸಂದರ್ಭದಲ್ಲಿ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ, ಏನೂ ಹೇಳಿಲ್ಲ. ಅದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ಇದನ್ನು ನೀವು ಹೇಳುವುದಲ್ಲ. ಮಾನ್ಯ ಸತೀಶ್ ಜಾರಕಿಹೊಳಿ ಏಕೆ ರಾಜಿನಾಮೆ ಕೊಟ್ಟರು? ಪತ್ರಿಕೆಯಲ್ಲಿ ಏನು ಬಂತು? ಒಳಗೆ ಏನು ನಡೆಯುತ್ತಿದೆ? ಎನ್ನುವುದು ಎಲ್ಲಾ ಗೊತ್ತಿದೆ, ಒಂದೊಂದೇ ಸ್ಫೋಟವಾಗುತ್ತಿದೆ. ಸ್ವಲ್ಪ ದಿವಸ ಹಾಗೆ ಇರುತ್ತದೆ. ನಿಮ್ಮಲ್ಲಿ ಒಂದೂವರೆ ವರ್ಷದಲ್ಲೇ ಪ್ರಾರಂಭವಾಗಿದೆ. ಮಾನ್ಯ ಸತೀಶ್ ಜಾರಕಿಹೊಳಿಯವರು ಏಕೆ ರಾಜಿನಾಮೆ ಕೊಟ್ಟರು?

**ಶ್ರೀ ಸಿದ್ದರಾಮಯ್ಯ**:- ಯಾವ ಸ್ಫೋಟವೂ ಇಲ್ಲ. ಅವರು ಬೇರೆ ವಿಚಾರಕ್ಕೆ ರಾಜೀನಾಮೆ ಕೊಟ್ಟಿದ್ದು, ಅದನ್ನು ಹೇಳುತ್ತೇನೆ. ಅವರು ಒಂದೇ ಒಂದು ಕಾರಣಕ್ಕೆ ರಾಜೀನಾಮೆ ಕೊಟ್ಟಿದ್ದು, ನನಗೆ ಈ ಇಲಾಖೆ ಬೇಡ, ನನಗೆ ಈ ಇಲಾಖೆ ಆಗುತ್ತಿಲ್ಲ, ಬೇರೆ ಇಲಾಖೆ ಕೊಡಿ ಎಂದು ಆರು ತಿಂಗಳ ಹಿಂದೆ ಹೇಳಿದ್ದರು. ಅದಕ್ಕೆ ನಾನು ಮುಂದೆ ಮಂತ್ರಿಮಂಡಲ ವಿಸ್ತರಣೆ ಮಾಡುವಾಗ ಬದಲಾಯಿಸಿ ಕೊಡುತ್ತೇನೆಂದು ಹೇಳಿದ್ದೆ. ಅದಕ್ಕೆ ಅವರು ಸ್ವಲ್ಪ ನಿಧಾನವಾಯಿತು ಎಂದು ರಾಜೀನಾಮೆ ಕೊಟ್ಟಿದ್ದಾರೆ, ಅಷ್ಟು ಬಿಟ್ಟರೆ ಬೇರೆ ಯಾವ ಕಾರಣ ಕೂಡ ಇಲ್ಲ. ಸರ್ಕಾರದ ಬಗ್ಗೆಯಾಗಲಿ, ನನ್ನ ಬಗ್ಗೆಯಾಗಲಿ, ಬೇರೆ ಯಾವುದರ ಬಗ್ಗೆಯಾಗಲಿ ಅವರಿಗೆ ಅಸಮಾಧಾನ ಇರಲಿಲ್ಲ. ಅಸಮಾಧಾನಕ್ಕೂ, ರಾಜೀನಾಮೆಗೂ ಯಾವ ಸಂಬಂಧ ಕೂಡ ಇಲ್ಲ. ನಮ್ಮಲ್ಲಿ ಯಾವ ಸ್ಫೋಟ ಕೂಡ ಇಲ್ಲ, ಯಾವ ಅಸಮಾಧಾನ ಕೂಡ ಇಲ್ಲ. ನಮ್ಮ ಎಲ್ಲಾ ಮಾನ್ಯ ಶಾಸಕರು ಕೂಡ ಸರ್ಕಾರದ ಬಗ್ಗೆ ಸಮಾಧಾನದಿಂದ ಇದ್ದಾರೆ.

**ಶ್ರೀ ಆರ್. ಅಶೋಕ್**:- ನೀವು ಹಾಗೆ ತಿಳಿದುಕೊಂಡಿದ್ದೀರಿ.

**ಶ್ರೀ ಸಿದ್ದರಾಮಯ್ಯ**:- ಅಶೋಕ್, ನೀವು ಈ ರೀತಿ ಎಲ್ಲದಕ್ಕೂ ಎದ್ದು ನಿಂತುಕೊಂಡರೆ ಹೇಗೆ?

**ಶ್ರೀ ಆರ್. ಅಶೋಕ್**:- ಕೆಲವರಿಗೆ ಕಿವಿ ಇಲ್ಲ, ಕಣ್ಣಿಲ್ಲ, ಓಡಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ, ಅದೂ ಅಭಿಪ್ರಾಯ ಬಂದಿದೆ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಅಧ್ಯಕ್ಷರೆ, ಅದನ್ನೇ ನಾನು ಹೇಳಿದ್ದು, ಪದೇ ಪದೇ ಪತ್ರಿಕೆಗಳನ್ನು ಓದಿಕೊಂಡು ಬಂದು ಇಲ್ಲಿ ಹೇಳಿದರೆ ಹೇಗೆ? ನಮ್ಮಲ್ಲಿ ಎಲ್ಲಾ ಮಂತ್ರಿಗಳೂ ಕೂಡ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದೇವೆ. ನಮ್ಮ ಮಂತ್ರಿಮಂಡಲ ಒಂದು ಯುನಿಟ್ ಆಗಿ ಕೆಲಸ ಮಾಡುತ್ತಿದ್ದೇವೆ. ನಾವು ಹಿಂದೆಲ್ಲಾ ನೋಡಿದ್ದೇವೆ. ಬ್ರೇಕ್‌ಫಾಸ್ಟ್ ಮಾಡುವುದಕ್ಕೆ ಹೈದರಾಬಾದ್‌ಗೆ ಹೋಗುತ್ತಿದ್ದುದ್ದನ್ನು ನಾವು ನೋಡಿಲ್ಲವೇ?

**ಶ್ರೀ ಜಗದೀಶ್ ಶೆಟ್ಟರ್**:- ಮೂರು ಜನ ಮುಖ್ಯಮಂತ್ರಿಗಳು ಹಿಂದೆ ಬಂದಿರಲಿಲ್ಲವೇ?

**ಶ್ರೀ ಸಿದ್ದರಾಮಯ್ಯ**:- ನಿಮ್ಮಲ್ಲಿ ಮೂರು ಜನ ಆದರಲ್ಲ.

**ಶ್ರೀ ಜಗದೀಶ್ ಶೆಟ್ಟರ್**:- ಮೂರು ಜನ ಮುಖ್ಯಮಂತ್ರಿಗಳು ಮೊಯ್ಲಿಯವರು, ಬಂಗಾರಪ್ಪನವರು, ವೀರೇಂದ್ರ ಪಾಟೀಲರು ಆಗಿದ್ದು, ವಿರೇಂದ್ರ ಪಾಟೀಲರಿಗೆ ವಿಮಾನ ನಿಲ್ದಾಣದಲ್ಲಿ ಆದೇಶ ಬಂತು.

**ಶ್ರೀ ಸಿದ್ದರಾಮಯ್ಯ**:- ಅವರು ಮಾಡಿದರು ಎಂದು ನೀವು ಮಾಡಿದಿರಾ?

**ಶ್ರೀ ಜಗದೀಶ್ ಶೆಟ್ಟರ್**:- ಮಾನ್ಯ ವೀರಪ್ಪ ಮೊಯ್ಲಿಯವರನ್ನು ಇಲ್ಲಿಯೇ ವಿಧಾನಸೌಧದಲ್ಲಿ ಹೊಡೆಯುವುದಕ್ಕೆ ಹೋಗಿದ್ದರು.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಯಾಗಿದ್ದಾಗ ನೀವೆಲ್ಲಿದ್ದಿರಿ? ನೀವು 1994 ಕ್ಕೆ ಬಂದಿದ್ದು.

**ಶ್ರೀ ಜಗದೀಶ್ ಶೆಟ್ಟರ್**:- ಮೊದಲು ನಿಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಿ.

**ಶ್ರೀ ಸಿದ್ದರಾಮಯ್ಯ**:- ನೀವೆಲ್ಲಿದ್ದೀರಿ? ನಿಮ್ಮಲ್ಲಿ ಮೂರು ಜನ ಮುಖ್ಯಮಂತ್ರಿಗಳಾದರು.

**ಶ್ರೀ ಜಗದೀಶ್ ಶೆಟ್ಟರ್**:- ನಿಮ್ಮ ಕಾಂಗ್ರೆಸ್‌ನಲ್ಲಿ ಮೂರು ಜನ ಮುಖ್ಯಮಂತ್ರಿಗಳಾಗಿದ್ದು.

**ಶ್ರೀ ಸಿದ್ದರಾಮಯ್ಯ**:- ಮೂರು ಜನ ಮುಖ್ಯಮಂತ್ರಿಗಳು ಯಾವ್ಯಾವ ರೀತಿ ಆದರು ಎಂದು ಎಲ್ಲರಿಗೂ ಗೊತ್ತಿದೆ. ನಮ್ಮಲ್ಲಿ ಆ ರೀತಿಯ ಪರಿಸ್ಥಿತಿ ಇಲ್ಲವೇ ಇಲ್ಲ. ನೀವೇನು ಅಂದುಕೊಂಡಿದ್ದೀರಿ, ಪತ್ರಿಕೆಗಳಲ್ಲಿ ಏನು ಬಂದಿದೆ, ಆ ರೀತಿಯೇ ಆಗುತ್ತಿದೆಯೆಂದು ನಿಮ್ಮ ಭ್ರಮೆಗಳಿವೆಯಲ್ಲ, ಆ ಭ್ರಮೆಗಳ ಬಗ್ಗೆ ಇನ್ನು ಮುಂದೆ ಮಾತನಾಡುವುದು ಬೇಡ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಾನು ನಮ್ಮ ಭರವಸೆಗಳನ್ನು ಬಹುತೇಕವಾಗಿ ಪ್ರಾಮಾಣಿಕವಾಗಿ ಈಡೇರಿಸುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಹಾಲಿನ ಪ್ರೋತ್ಸಾಹ ಧನವನ್ನು ಎರಡು ರೂಪಾಯಿಯಿಂದ ನಾಲ್ಕು ರೂಪಾಯಿಗೆ ಮಾಡಿದೆವು. ನಾಲ್ಕು ರೂಪಾಯಿ ಮಾಡಿದ ತಕ್ಷಣ ಪ್ರತಿ ದಿನ 35 ಲಕ್ಷ ಲೀಟರ್ ಹಾಲು ಉತ್ಪನ್ನ ಇದ್ದದ್ದು ಇವತ್ತು 63 ಲಕ್ಷ ಲೀಟರ್‌ಗೆ ಹೋಗಿದೆ. ಇದರಿಂದ ಹಳ್ಳಿಗಾಡಿನ ಜನರಲ್ಲಿ ಆರ್ಥಿಕ ಚಟುವಟಿಕೆಗಳು ಜಾಸ್ತಿಯಾಗಿವೆ. ನಾನು ಏಕೆ ಇದನ್ನು ಹೇಳಿದೆ ಎಂದರೆ, ಬಹಳ ವರ್ಷದಿಂದ ಇವರ ಸರ್ಕಾರದಲ್ಲಿ . .

**ಶ್ರೀ ಆರ್. ಅಶೋಕ್**:- ಮಾನ್ಯ ರೇವಣ್ಣನವರು ರಾಹುಕಾಲ ಆದಮೇಲೆ ಸದನಕ್ಕೆ ಬಂದಿದ್ದಾರೆ.

**ಶ್ರೀ ಸಿದ್ದರಾಮಯ್ಯ**:- ಪಾಪ! ಅವರ ನಂಬಿಕೆಗಳು, ಅದರ ಬಗ್ಗೆ ನಾವು ಏಕೆ ಮಾತನಾಡುವುದು?

**ಶ್ರೀ ಹೆಚ್.ಡಿ. ರೇವಣ್ಣ**:- ನಮಗೆ ಯಾವುದೇ ರಾಹುಕಾಲ, ಗುಳಿಕಕಾಲ ಏನೂ ಇಲ್ಲ. ಎಲ್ಲಾ ಕಾಲನೂ ಒಂದೇ.

**ಶ್ರೀ ಸಿದ್ದರಾಮಯ್ಯ**:- ರೇವಣ್ಣ, ಅವರು ಹೇಳುತ್ತಾರೆಂದು ನೀನು deny ಮಾಡುವುದಕ್ಕೆ ಹೋಗಬೇಡ. ಸುಮ್ಮನೆ ನಾನು ಮಾಡುತ್ತಿರುವುದು ನಿಜ, ನೀವೂ ಅದನ್ನು ಅನುಸರಿಸುವುದಿದ್ದರೆ ಅನುಸರಿಸಿ, ಅದು ನಿಮಗೆ ಬಿಟ್ಟಿದ್ದು ಎಂದು ಹೇಳಿ ಸುಮ್ಮನೆ ಕುಳಿತುಕೋ. ಏಕೆ ಅದೆಲ್ಲಾ ಮಾತನಾಡುತ್ತೀಯ?

**ಶ್ರೀ ಬಿ.ಆರ್. ಪಾಟೀಲ್**:- ಆದರೆ ಇತ್ತೀಚೆಗೆ ನಮ್ಮ ನಂಬಿಕೆಗಳಲ್ಲಿ ಬದಲಾವಣೆಯಾಗುತ್ತಿದೆ.

**ಶ್ರೀ ಸಿದ್ದರಾಮಯ್ಯ**:- ನನ್ನ ನಂಬಿಕೆಗಳು ಯಾವುದೇ ಕಾರಣಕ್ಕೂ ಬದಲಾವಣೆ ಆಗುವ ಪರಿಸ್ಥಿತಿಯೇ ಇಲ್ಲ. ಬಿ.ಆರ್. ಪಾಟೀಲ್, ನಿಮಗೆ ಗೊತ್ತಿದ್ದೂ, ಗೊತ್ತಿದ್ದೂ ಹೀಗೆ ಹೇಳಿದರೆ ಹೇಗೆ? ನಂಬಿಕೆಗಳು ಬದಲಾವಣೆಗಳು ಆಗುವುದಕ್ಕೆ ಸಾಧ್ಯವಿಲ್ಲ, ನಾನು ಮತ್ತೆ ಅದರ ಬಗ್ಗೆ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ನಂಬಿಕೆಗಳು ಎಂದರೆ ನಾನ್ಯಾವತ್ತೂ ರಾಹು ಕಾಲ, ಗುಳಿಕ ಕಾಲ ಎಂದು ಏನೂ ನೋಡುವುದಕ್ಕೆ ಹೋಗುವುದಿಲ್ಲ. ಪ್ರತಿದಿನ ಬೆಳಿಗ್ಗೆ ಎದ್ದು ಪೂಜೆ ಮಾಡುವುದಕ್ಕೆ ಹೋಗುವುದಿಲ್ಲ. ಬೆಳಿಗ್ಗೆ ಎದ್ದ ತಕ್ಷಣ ಇಂತಹ ದಿಕ್ಕಿಗೆ ಹೋಗಬೇಕು, ಇಂತಹವರು ಬಂದರೆ ಹೋಗಬಾರದು ಎನ್ನುವುದೇನೂ ಇಲ್ಲ. ನಾನು ಅವುಗಳನ್ನು ಏನೂ ಮಾಡುವುದಿಲ್ಲ. ನಂಬಿಕೆಗಳು ಬೇಕು, ಆದರೆ ಮೂಢ ನಂಬಿಕೆಗಳು ಇರಬಾರದು ಅಷ್ಟೆ. ನಂಬಿಕೆಗಳು ಬೇಕಾಗುತ್ತವೆ, ಆದರೆ ಮೂಢ ನಂಬಿಕೆಗಳು ಇರಬಾರದು. ಬಹುಶಃ ರೇವಣ್ಣನವರು ಕೂಡ ಮೂಢ ನಂಬಿಕೆಗಳನ್ನು ಮಾಡುವುದಕ್ಕೆ ಹೋಗುವುದಿಲ್ಲ. ಕೆಲವು ನಂಬಿಕೆಗಳನ್ನು ಇಟ್ಟುಕೊಂಡಿದ್ದಾರೆ, ಅದರಿಂದ ಅವುಗಳನ್ನು ಮಾಡುತ್ತಿದ್ದಾರೆ ಅಷ್ಟೆ. ಒಂದೊಂದು ಸಾರಿ ರೇವಣ್ಣನವರು, 'ನಾನು ಹೇಳಿದ ಸಾರ್, ನೀವು ಇಂತಹ ಹೊತ್ತಿಗೆ ಅಸೆಂಬ್ಲಿಯನ್ನು ಕರೆಯಬೇಡಿ' ಎಂದು ಹೇಳಿದ್ದೆ, ಕರೆದುಬಿಟ್ಟರಿ ಎಂದು ಹೇಳುತ್ತಾರೆ. ಅದೇನೆ ಇರಲಿ ಅದು ಅವರ ನಂಬಿಕೆ.

**ಶ್ರೀ ಹೆಚ್.ಡಿ. ರೇವಣ್ಣ:-** ನಮ್ಮದಿರಲಿ, ಅಶೋಕಣ್ಣನವರೇ, ಮೋದಿಯವರೇ 11 ದಿನ ಉಪವಾಸ ಇದ್ದದ್ದನ್ನು ನೋಡಿಲ್ಲವೇ? ಅವರೇ 11 ದಿನ ಉಪವಾಸ ಇದ್ದಾರೆ, ನಮ್ಮದೇನೂ ಇಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಚೆನ್ನಾಗಿ ನಡೆಯುತ್ತಿದೆಯೋ ಇಲ್ಲವೋ, ಆಡಳಿತ ಪ್ರಮಾಣಿಕವಾಗಿ ನಡೆಯುತ್ತಿದೆಯೋ ಇಲ್ಲವೋ ಎಂದು ಹೇಳುವುದಾದರೆ, ನಾವು ಅಧಿಕಾರಕ್ಕೆ ಬಂದು ಕಳೆದ ಒಂದು ವರ್ಷ ಒಂಬತ್ತು ತಿಂಗಳಲ್ಲಿ ಯಾವುದೇ ಹಗರಣಗಳಿಗೆ ಒಳಗಾಗದೆ, ಯಾವುದೇ ಭ್ರಷ್ಟಾಚಾರದ ಆರೋಪಗಳಿಗೆ ಒಳಗಾಗದೆ, ಇವತ್ತು ಪ್ರಾಮಾಣಿಕವಾಗಿ ನಮ್ಮ ಸರ್ಕಾರ ಕೆಲಸ ಮಾಡಿದೆ ಎಂದು ಅತ್ಯಂತ ಹೆಮ್ಮೆಯಿಂದ ಹೇಳುವುದಕ್ಕೆ ಬಯಸುತ್ತೇನೆ. ನೀವು ಜನರನ್ನು ಹೋಗಿ ಕೇಳಿ. ನೀವು ಪತ್ರಿಕೆಗಳಲ್ಲಿ ಬಂದಿರುವುದು, ಯಾರೋ ನಮ್ಮ ವಿರುದ್ಧವಾಗಿ ಇರುವವರ ಮಾತುಗಳನ್ನು ಕೇಳಿಕೊಂಡು ಹೇಳುವುದಕ್ಕೆ ಹೋಗಬೇಡಿ. 30 ಕೆ.ಜಿ. ಅಕ್ಕಿ ಕೊಡುತ್ತಿದ್ದೇವಲ್ಲ, ಅವರನ್ನು ಹೋಗಿ ಕೇಳಿ. ಒಂದು ಕೋಟಿ, 3 ಲಕ್ಷ ಜನರಿದ್ದಾರಲ್ಲ, 3 ಕೋಟಿ ಕುಟುಂಬಗಳಿವೆಯಲ್ಲ, ಅವರನ್ನು ಹೋಗಿ ಕೇಳಿ. ಕಾಂಗ್ರೆಸ್ ಸರ್ಕಾರ ನಿಮಗೆ ತೃಪ್ತಿ ತಂದಿದೆಯಾ? ಎಂದು ಅವರನ್ನು ಕೇಳಿ. ಸಾಲ ಮನ್ನಾ ಮಾಡಿದ್ದೇವೆಲ್ಲ, ಮನೆ ಕೊಟ್ಟಿದ್ದೇವಲ್ಲ, ವಿದ್ಯಾಸಿರಿ ಕಾರ್ಯಕ್ರಮ ಮಾಡಿಕೊಟ್ಟಿದ್ದೇವಲ್ಲ ಅವರುಗಳನ್ನೆಲ್ಲಾ ಹೋಗಿ ಕೇಳಿ. ನೀವು ಅವರನ್ನು ಕೇಳಿದರೆ ಸತ್ಯ ಗೊತ್ತಾಗುತ್ತದೆ. ಇವೆಲ್ಲಾ ಗೊತ್ತಿದ್ದು ಕೂಡ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ನಾವು ಅರ್ಕಾವತಿ ಬಡಾವಣೆ ಬಗ್ಗೆ ನ್ಯಾಯಾಂಗ ಆಯೋಗವನ್ನು ಮಾಡಿದ್ದೇವೆ. ಆದುದರಿಂದ ನಾನು ಅವರ ತಪ್ಪು-ಒಪ್ಪುಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ, ವಿವರವನ್ನು ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಅರ್ಕಾವತಿ ಬಡಾವಣೆ ಬಗ್ಗೆ ಚರ್ಚೆ ನಡೆದಿದ್ದೇ ನಡೆದಿದ್ದು, ಅದು ಸದನದ ಒಳಗೆ ನಡೆದಿದೆ, ಹೊರಗಡೆ ನಡೆದಿದೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಇದೇ ಸದನದಲ್ಲಿ ಕಳೆದ ಸಾರಿ ಜುಲೈ ತಿಂಗಳಲ್ಲಿ demands ಮೇಲೆ ಚರ್ಚೆ ಮಾಡುವಾಗ

ಪ್ರಸ್ತಾಪ ಮಾಡಿದ್ದಾರೆ. ನಾನು ಸುದೀರ್ಘವಾಗಿ ಸರ್ಕಾರದ ಪರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಅದು ಆದ ಮೇಲೆ Justice ಕೆಂಪಣ್ಣನವರು, ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರು, ಅವರ ಅಧ್ಯಕ್ಷತೆಯಲ್ಲಿ ನ್ಯಾಯಾಂಗ ತನಿಖೆಯಾಗಬೇಕೆಂದು ನ್ಯಾಯಾಂಗ ಆಯೋಗವನ್ನು ರಚನೆ ಮಾಡಿದ್ದೇವೆ. ಅದು ಆದಮೇಲೂ ಕೂಡ ಇವರ ಹತ್ತಿರ ಏನಾದರೂ ದಾಖಲಾತಿಗಳು ಇದ್ದರೆ, ಏನಾದರೂ ಹೇಳಿಕೆಯನ್ನು ಕೊಡಬೇಕೆನ್ನುವುದಾದರೆ, ಅಲ್ಲಿ ಹೋಗಿ ಕೊಡಬಹುದು. ಮಾನ್ಯ ಕುಮಾರಸ್ವಾಮಿಯವರು ಒಂದು ಪುಸ್ತಕವನ್ನೇ ಬಿಡುಗಡೆ ಮಾಡಿ ಬಿಟ್ಟಿದ್ದಾರೆ. ಅದಕ್ಕೆ ಕಾರಣ ಏನು ಕೊಡುತ್ತಾರೆಂದರೆ, 'ನನ್ನನ್ನು ಸಿದ್ದರಾಮಯ್ಯನವರು ಕೆಣಕಿದರು, ಅದಕ್ಕೋಸ್ಕರ ನಾನು research ಮಾಡಿ ಒಂದು ಪುಸ್ತಕವನ್ನು ಬಿಡುಗಡೆ ಮಾಡಿದ್ದೇನೆ ಎಂದು ಹೇಳಿದ್ದಾರೆ. ನಾನು ಇವತ್ತು ಬಹಳ ಸ್ಪಷ್ಟ ಪಡಿಸಬಯಸುತ್ತೇನೆ, ನಾನು ನಿನ್ನೆಯೂ ಹೇಳಿದ್ದೇನೆ, ಈಗಲೂ ಹೇಳಿದ್ದೇನೆ, ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇನೆ. ನಮ್ಮ ಸರ್ಕಾರ ಬಂದ ಮೇಲೆ ಅರ್ಕಾವತಿ ಬಡಾವಣೆಯಲ್ಲಿ ಒಂದೇ ಒಂದು ಗುಂಟೆ, ಈ ಬಗ್ಗೆ ನಾನು ಹೇಳಿದ್ದೇನೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಇಲ್ಲ, ನೀವು ಒಂದು ಗುಂಟೆ ಬಿಟ್ಟಿಲ್ಲ, ಜಾಸ್ತಿ ಬಿಟ್ಟಿದ್ದೀರಿ ಎಂದು ಹೇಳಿದ್ದಾರೆ. ನಾನು ಈಗ ಸ್ಪಷ್ಟಪಡಿಸುತ್ತಿದ್ದೇನೆ, ಒಂದೇ ಒಂದು ಗುಂಟೆ ಬಿಟ್ಟಿಲ್ಲ. ನಾನು ದಿನಾಂಕ: 13.02.2013 ರಲ್ಲಿ ಮುಖ್ಯಮಂತ್ರಿಯಾಗಿದ್ದೇನೆ. ಅಂದಿನಿಂದ ಇವತ್ತಿನವರೆಗೂ ಕಾನೂನು ಬಾಹಿರವಾಗಿ ಅದರಲ್ಲೂ ಅರ್ಕಾವತಿ ಬಡಾವಣೆಯಲ್ಲಿ ಒಂದೇ ಒಂದು ಗುಂಟೆ denotification ಮಾಡಿಲ್ಲ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಅಧ್ಯಕ್ಷರೆ, 703 ಎಕರೆ ಮಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ತಾವು ಕುಳಿತುಕೊಳ್ಳಿ, 703 ಎಕರೆ ಯಾರು ಮಾಡಿದ್ದಾರೆಂಬುದು ಗೊತ್ತಾಗುತ್ತದೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಅಧ್ಯಕ್ಷರೆ, ಆಯೋಗದ ಅವಧಿ ಫೆಬ್ರವರಿ ತಿಂಗಳಿಗೆ ಮುಗಿಯುತ್ತಾ ಇದೆ. ಇಲ್ಲಿ ಸದನದಲ್ಲಿ ಪ್ರಸ್ತಾಪ ಮಾಡಿದ ಮೇಲೆ documents ಹಾಜರು ಮಾಡಿಲ್ಲವೆಂದು ಹೇಳಿದ ಮೇಲೆ ನಿನ್ನೆ ದಿವಸ

ಎಲ್ಲಾ documents ಅನ್ನು ಕಳುಹಿಸಿದರು. ಅಲ್ಲಿಯವರೆಗೂ correction ಮತ್ತೊಂದು ಎಲ್ಲಾ ನಡೆಯಿತು.

ಶ್ರೀ ಸಿದ್ದರಾಮಯ್ಯ:- ತಾವು ಕುಳಿತುಕೊಳ್ಳಿ, ಅದೆಲ್ಲವನ್ನು ಹೇಳಿದ್ದೀರಲ್ಲಾ.

ಶ್ರೀ ಜಗದೀಶ್ ಶೆಟ್ಟರ್:- ನೀವು ಪ್ರಾಮಾಣಿಕರಾಗಿದ್ದರೆ, ಇಲ್ಲಿ ಭ್ರಷ್ಟಾಚಾರ ಆಗಿಲ್ಲವೆಂದರೆ, ನಾವು ಇದನ್ನು ಹೇಳುತ್ತಲೇ ಇರಲಿಲ್ಲ. ತಾವು ಒಂದೇ ಒಂದು ಇಂಚು ಅಲ್ಲ, 700 ಎಕರೆಯನ್ನು ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ:- ಹೌದು, ಹೌದು ಗೊತ್ತಾಗುತ್ತದೆ, ಅಲ್ಲಿಗೆ ಹೋಗಿ ದಾಖಲಾತಿ ಕೊಡಿ. ಯಾರು ಮಾಡಿದ್ದಾರೆಂಬುದು ಗೊತ್ತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:- ಅದು ತನಿಖೆಯಾಗಲಿ, ನೀವು ಎಷ್ಟು ಪ್ರಾಮಾಣಿಕರಿದ್ದೀರಿ? ಏನು ಮಾಡಿದ್ದೀರೆಂಬುದೆಲ್ಲಾ ಬರುತ್ತದೆ. High Court direction, Supreme Court direction ಏನಿದೆ ಹೊರಗಡೆ ಬರುತ್ತದೆ. ಮೊದಲು ತನಿಖೆಯಾಗಲಿ, ಅದೆಲ್ಲಾ ಹೊರಗೆ ಬರುತ್ತದೆ. ನಾವು ಎಲ್ಲಾ documents ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಾವು ಅಕ್ರಮವಾಗಿ ಏನು ಮಾಡಿಲ್ಲವೆನ್ನುವುದು ಇವರಿಗೆ ಗೊತ್ತಿದೆ. ಇವರಿಗೆ ಗೊತ್ತಿದ್ದರೂ ಕೂಡ ಏಕೆ ಆರೋಪ ಮಾಡುತ್ತಿದ್ದಾರೆಂದರೆ, ಬಹುಶಃ ಅವರು ಯಾರನ್ನೋ ಗುರಿ ಇಟ್ಟುಕೊಂಡು ಮಾಡುತ್ತಿದ್ದಾರೆ, ಅವರ ಪಕ್ಷದವರನ್ನೇ ಗುರಿ ಇಟ್ಟುಕೊಂಡು ಇದೆಲ್ಲವನ್ನೂ ಮಾಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ತಮ್ಮದನ್ನು ಮುಚ್ಚಿಕೊಳ್ಳುವುದಕ್ಕೆ ಹೋಗಿ, ಆಧಾರ ರಹಿತವಾಗಿ ಹೇಳುವುದು ಸರಿಯಲ್ಲ. ತಾವು ಆ file clear ಮಾಡಿ 700 ಎಕರೆಯನ್ನು de-notify ಮಾಡಿಲ್ಲ, re-modify ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ:- ಕೆಂಪಣ್ಣ ಆಯೋಗದಲ್ಲಿ ತನಿಖೆಯಾಗಿ ವರದಿ ಬರಲಿ, ಸತ್ಯ ಏನೆಂಬುದು ಗೊತ್ತಾಗುತ್ತದೆ.

**ಶ್ರೀ ಜಗದೀಶ್ ಶೆಟ್ಟರ್**:– Land Acquisition Act ನಲ್ಲಿ re-modify ಎನ್ನುವ ಶಬ್ದ ಇಲ್ಲವೇ ಇಲ್ಲ. ನೀವು re-modify ಮಾಡಿದ್ದೇನೆ, denotify ಮಾಡಿಲ್ಲ, re-do ಮಾಡಿದ್ದೇನೆ ಎಂದು ಹೇಳುತ್ತಿದ್ದೀರಿ.

**ಶ್ರೀ ಸಿದ್ದರಾಮಯ್ಯ**:– Re-do ಎನ್ನುವ ಪದವನ್ನು ಇವರೇ ಉಪಯೋಗಿಸಿರುವವರು.

**ಶ್ರೀ ಜಗದೀಶ್ ಶೆಟ್ಟರ್**:– ಕೆಂಪಣ್ಣ ಆಯೋಗದ ತನಿಖೆ ಮುಗಿಯಲಿ, ಏನಾಗಿದೆಯೆಂಬುದು ಅಲ್ಲಿ ಗೊತ್ತಾಗುತ್ತದೆ. ನಿಮ್ಮ ಹಣೆಬರಹ ಏನೆಂಬುದು ಗೊತ್ತಾಗುತ್ತದೆ.

**ಶ್ರೀ ಸಿದ್ದರಾಮಯ್ಯ**:– ಮೋಹನ್ ಶಾಂತನ್ ಗೌಡರು ಒಂದು writ ಅರ್ಜಿ re-do ಎನ್ನುವ ಪದವನ್ನು ಉಪಯೋಗಿಸುತ್ತಾರೆ. ಅದು ಆದಮೇಲೆ ಅದನ್ನು ಕಡತದ ಮೇಲೆ re-do ಎನ್ನುವ ಪದವನ್ನು ಮಾನ್ಯ ಜಗದೀಶ್ ಶೆಟ್ಟರ್‌ರವರೇ ಬರೆದಿರುವುದು.

**ಶ್ರೀ ಜಗದೀಶ್ ಶೆಟ್ಟರ್**:– ಯಾವುದೋ ಒಂದು judgment ನಲ್ಲಿ, ಯಾವುದೇ ಒಂದು case ಗೆ ಸಂಬಂಧಪಟ್ಟಂತೆ re-do ಎಂದು ಇದ್ದರೆ, ಅದನ್ನೇ ಇವರು re-do ಎಂದು 700 ಎಕರೆಗೂ ಮಾನ್ಯ ಸಿದ್ದರಾಮಯ್ಯನವರೇ ವಿಸ್ತರಣೆ ಮಾಡಿರುವವರು. ಆ ಫೈಲ್‌ನಲ್ಲಿ clear ಮಾಡಿರುವವರು ಇವರು. ಅದರ ಬಗ್ಗೆ ಇವರು ಮಾತನಾಡುತ್ತಾರೆಯೇ? ಇವರು ಪ್ರಾಮಾಣಿಕ ಆಡಳಿತದ ಬಗ್ಗೆ ಮಾತನಾಡುತ್ತಾರೆ, ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ. ಆ ತನಿಖೆಯ ನಿರ್ಣಯ ಬರಲಿ ಗೊತ್ತಾಗುತ್ತದೆ. ಇವರು ಏನು ಮಾಡಿದ್ದಾರೆ, ಅರ್ಕಾವತಿ ಹಗರಣ ಎಲ್ಲಾ ಗೊತ್ತಾಗುತ್ತದೆ.

**ಶ್ರೀ ಪಿ.ಎಂ. ನರೇಂದ್ರಸ್ವಾಮಿ**:– ಬಿಡದಿಯಿಂದ 25 ಕಿ.ಮೀ. radius ನಲ್ಲಿ TDR relax ಮಾಡಿದವರು ಯಾರು?

**ಶ್ರೀ ಸಿದ್ದರಾಮಯ್ಯ**:– ನಾನು ಅದನ್ನೇ ಹೇಳುತ್ತಿದ್ದೇನೆ. ಇದು ನೋಡಿ, ನಿಮ್ಮದೇ re-do, ನೀವೇ ಬರೆದಿರುವುದು.

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಪ್ರತಿಯನ್ನು ಸಭೆಯಲ್ಲಿ ತೋರಿಸಿದರು)

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಅಧ್ಯಕ್ಷರೆ, ಒಂದು ಸಾರಿ ಅದರ ಬಗ್ಗೆ ಚರ್ಚೆಯಾಗಿ ಬಿಡಲಿ.

**ಶ್ರೀ ಸಿದ್ದರಾಮಯ್ಯ:-** ನಾವು ನೀವು ಬರೆದಿರುವುದನ್ನು ಓದುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಅಧ್ಯಕ್ಷರೆ, ತಾವು allow ಮಾಡಿದರೆ detail ಆಗಿ ನಾನು ಚರ್ಚೆ ಮಾಡುವುದಕ್ಕೆ ರೆಡಿಯಾಗಿದ್ದೇನೆ.

**ಶ್ರೀ ಸಿದ್ದರಾಮಯ್ಯ:-** ನಾನು ಹೇಳುವುದನ್ನು ಸ್ವಲ್ಪ ಕೇಳಿ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಅಧ್ಯಕ್ಷರೆ, ಇನ್ನೂ ಹಲವು ಕಾಗದ ಪತ್ರಗಳಿವೆ, ಅದರ ಬಗ್ಗೆಯೂ ಚರ್ಚೆಯಾಗಿ ಬಿಡಲಿ.

**ಶ್ರೀ ಸಿದ್ದರಾಮಯ್ಯ:-** Re-do ಪ್ರಕರಣದಲ್ಲಿ ಇವರು ಬರೆದಿರುವುದು.

(ಗೊಂದಲ)

**ಶ್ರೀ ಆರ್. ಅಶೋಕ್:-** ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾವು ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ. ಇದು ತನಿಖಾ ಆಯೋಗದ ಮುಂದಿದೆ. ಆದ್ದರಿಂದ ಈ ಬಗ್ಗೆ ನಮಗೆ ಮಾತನಾಡಬೇಡಿ ಎಂದು ಹೇಳಿದಿರಿ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:-** ನಾನು ಇದರ ಬಗ್ಗೆ ಮಾತನಾಡುತ್ತೇನೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** Re-do ಪ್ರಕರಣದಲ್ಲಿ ಇವರು ಬರೆದಿರುವುದು, ಇವರ hand writing ನಲ್ಲಿ ಬರೆದಿರುವುದನ್ನು ತಮಗೆ ಕೊಡುತ್ತೇನೆ ನೋಡಿ.

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಭಾಧ್ಯಕ್ಷರಿಗೆ ಪ್ರತಿಯನ್ನು ಕಳುಹಿಸಿಕೊಟ್ಟರು)

ಶ್ರೀ ಜಗದೀಶ್ ಶೆಟ್ಟರ್:- 'ಕಡತ ಮಂಡಿಸಿ' ಎಂದು ಬರೆದಿರುವುದನ್ನೇ ಇವರು order ಎಂದು ತೋರಿಸುತ್ತಾರೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:- ಮಾನ್ಯ ಅಧ್ಯಕ್ಷರೆ, point of order.

(ಗೊಂದಲ)

ಶ್ರೀ ಆರ್. ಅಶೋಕ್:- ಮಾನ್ಯ ಅಧ್ಯಕ್ಷರೆ, point of order ಎತ್ತಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, point of order.

(ಗೊಂದಲ)

ಶ್ರೀ ಸಿದ್ದರಾಮಯ್ಯ:- 'Re-do ಪ್ರಕರಣಗಳಲ್ಲಿ ಈ ಜಮೀನುಗಳು ಒಳಪಡುವ ಬಗ್ಗೆ ಪರಿಶೀಲಿಸಿ ಪ್ರಸ್ತಾವನೆಯನ್ನು ಸಲ್ಲಿಸಲು ಬಿ.ಡಿ.ಎ. ಆಯುಕ್ತರಿಗೆ ತಿಳಿಸುವುದು.' ಎಂದು ಇವರು ಬರೆದಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಸಿ.ಬಿ.ಐ. ತನಿಖೆಗೆ ಕೊಡಿ, ಯಾವುದೇ ತನಿಖೆಗೆ ಕೊಡಿ, ನಾನು ತಯಾರಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಸುಮ್ಮನೆ 're-do' ಎಂದು ನನಗೆ ಹೇಳುತ್ತಾ ಕುಳಿತಿದ್ದಾರೆ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:-** ಅದನ್ನು ಕೊಡಿ, ನಾನು ಎಲ್ಲಕ್ಕೂ ರೆಡಿಯಾಗಿದ್ದೇನೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಕುಂಬಳಕಾಯಿ ಕಳ್ಳ ಎಂದರೆ ಏಕೆ ಹೆಗಲು ಮುಟ್ಟಿಕೊಂಡು ನೋಡಿಕೊಳ್ಳುತ್ತೀರಿ?

(ಗೊಂದಲ)

**ಶ್ರೀ ಕೆ.ಜಿ. ಬೋಪಯ್ಯ:-** ಮಾನ್ಯ ಅಧ್ಯಕ್ಷರೆ, point of order.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:-** 703 ಎಕರೆ fileಗೆ signature ಮಾಡಿ, ಆ file clear ಮಾಡಿ, re-modified, re-do ಇದನ್ನು ಮಾಡಿದವರು ಯಾರು? ನೀವು signature ಮಾಡದಿದ್ದರೆ . . .

**ಶ್ರೀ ಸಿದ್ದರಾಮಯ್ಯ:-** ಈಗ ನೋಡಿದೆ, 're-do' ಎಂದು ನೀವೇ ಬರೆದಿರುವುದು.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:-** ಅದನ್ನೂ ತನಿಖೆಗೆ ಕೊಡಿ, ಯಾರು ಬೇಡ ಎನ್ನುತ್ತಾರೆ? ನಾನು ತಯಾರಾಗಿದ್ದೇನೆ. ತಾವು ಸಿ.ಬಿ.ಐ. ಗೆ ಕೊಡುತ್ತೀರೋ, ಲೋಕಾಯುಕ್ತಕ್ಕೆ ಕೊಡುತ್ತಿರೋ, ಅಥವಾ ಯಾವುದಾದರೂ agency fix ಮಾಡುತ್ತೀರೋ, ಅದಕ್ಕೆ ನಾನು ತಯಾರಾಗಿದ್ದೇನೆ. ಅದನ್ನು ಕೊಡಿ. 703 ಎಕರೆಯನ್ನು re-modify ಮಾಡಿ, de-nofity ಮಾಡಿ, ಎಲ್ಲವನ್ನೂ ಮಾಡಿದ್ದೀರಿ. ನೀವು ಪ್ರಾಮಾಣಿಕರಿದ್ದರೆ, ಸಿ.ಬಿ.ಐ. ತನಿಖೆಗೆ ಕೊಡಿ. ತಾವು ಅದನ್ನು ಸಿ.ಬಿ.ಐ. ಗೆ ಕೊಡುತ್ತರೋ ಲೋಕಾಯುಕ್ತಕ್ಕೆ ಕೊಡುತ್ತೀರೋ ಕೊಡಿ, ನಾನು ಎಲ್ಲಕ್ಕೂ ತಯಾರಾಗಿದ್ದೇನೆ. Detailed ಚರ್ಚೆಗೆ ಅವಕಾಶ ಕೊಡಿ. 119 ಎಕರೆ, 54 ಎಕರೆಯನ್ನು ಯಾವ ರೀತಿ ಮಾಡಿರುವುದೆಂಬುದು ಗೊತ್ತಿದೆ.

ಯಾವುದೇ ಒಂದು BDA resolution ಇಲ್ಲ. ಬಿ.ಡಿ.ಎ. ನಲ್ಲಿ ಯಾವುದೇ ಒಂದು survey ಮಾಡಿಲ್ಲ, ಯಾರು Land Acquisition Officer ಇದ್ದಾರೆ, ಅವರು ಆ 54 ಎಕರೆ ಬಗ್ಗೆ ಯಾವುದೇ ಒಂದು report ಕೊಟ್ಟಿಲ್ಲ. ಏನೂ ಇಲ್ಲ, resolution ಇಲ್ಲದೇ pass ಮಾಡಿ, 119 ಎಕರೆಗೆ file ನಲ್ಲಿ add ಮಾಡುತ್ತಾರೆ. ಅದಕ್ಕೆ ಯಾವುದೇ base ಇಲ್ಲ. ಇದಕ್ಕೆ ಏನು ಉತ್ತರ ಹೇಳುತ್ತಾರೆ?

(ಗೊಂದಲ)

**ಶ್ರೀ ಕೆ.ಆರ್. ರಮೇಶ್ ಕುಮಾರ್:-** ಮಾನ್ಯ ಅಧ್ಯಕ್ಷರೆ, I am on a point of order.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಅಧ್ಯಕ್ಷರೆ, ಅವರು ಪ್ರಸ್ತಾಪ ಮಾಡಿರುವವರು, 52 ಎಕರೆ ಬಗ್ಗೆ ಅವರು ಹೇಳಲಿ.

(ಗೊಂದಲ)

**ಅಧ್ಯಕ್ಷರು:-** ಹೇಳಿ.

(ಗೊಂದಲ)

**ಶ್ರೀ ಕೆ.ಜಿ. ಬೋಪಯ್ಯ:-** ಮಾನ್ಯ ಅಧ್ಯಕ್ಷರೆ, ನಾನು point of order ಎತ್ತಿದ್ದೇನೆ.

(ಗೊಂದಲ)

**ಶ್ರೀ ಕೆ.ಆರ್. ರಮೇಶ್ ಕುಮಾರ್:-** ಮಾನ್ಯ ಬೋಪಯ್ಯನವರೆ, I am on a point of order. Sir, ಈ ವಿಚಾರ ಮೊದಲು ಚರ್ಚೆಗೆ ಪ್ರಸ್ತಾಪವಾದಾಗ, ಇದು ನ್ಯಾಯಮೂರ್ತಿಯವರ ಒಂದು ತನಿಖಾ ಆಯೋಗದ ಮುಂದೆ ವಿಚಾರಣೆಗೆ ಒಳಪಟ್ಟಿದೆ. ಇದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವಂಥದ್ದು, ಯಾವ terms of reference ಮಾಡತಕ್ಕಂಥದ್ದು ಬೇಡವೆಂದು ಹೇಳಿ, ಮಾನ್ಯ

ಕುಮಾರಸ್ವಾಮಿಯವರನ್ನಾಗಲಿ, ಮಾನ್ಯ ಜಗದೀಶ್ ಶೆಟ್ಟರ್‌ರವರನ್ನಾಗಲಿ ನಿರ್ಬಂಧಿಸಿದ್ದೆವು. ನಾವು ಈ ಎಲ್ಲಾ ಕೆಲವು ನಿರ್ಬಂಧಗಳನ್ನು ನಮ್ಮ ಮೇಲೆ ನಾವು ಏಕೆ ಹೇರಿಕೊಂಡಿದ್ದೇವೆಂದರೆ, ಕೆಲವು ನಿಯಮಗಳನ್ನು ಪಾಲಿಸುವುದಕ್ಕೋಸ್ಕರ ಮಾಡಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುವ ಧಾಟಿಯಲ್ಲಿ ಎಲ್ಲೋ ಪ್ರಾಸಂಗಿಕವಾಗಿ ಒಂದು ಮಾತನ್ನು ಹೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಯವಲ್ಲಿ ಮತ್ತಿತರೆಲ್ಲರಲ್ಲೂ ಕೂಡ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಕುಮಾರಸ್ವಾಮಿಯವರಿಗೆ ಅವಕಾಶ ತಪ್ಪಿದೆ, ಅವರು ಮಾತನಾಡುವುದಕ್ಕೆ ಆಗಿಲ್ಲ. ಆದ್ದರಿಂದ ಒಬ್ಬರಿಗೆ ಆ ಕಾರಣದ ಮೇಲೆ ಅವಕಾಶ ತಪ್ಪಿದಾಗ, ಇತರರು ಅದನ್ನು ಚರ್ಚೆ ಮಾಡುವಂಥದ್ದು, ನಾವು ಸದಸ್ಯರಲ್ಲೇ ತಾರತಮ್ಯ ಮಾಡಿದ ಹಾಗೆ ಆಗುತ್ತದೆ. ನಾವು ಈ ಸದನ ರೂಪಿಸಿರುವಂಥ ನಿಯಮಾವಳಿಗಳ ಪ್ರಕಾರ, ಒಂದು judicial enquiry ಮುಂದೆ, Commission of Enquiries Act ಪ್ರಕಾರ constitute ಮಾಡಿರುವಂಥ Commission ಮುಂದೆ ಇರುವಾಗ, I think we should not take it up for discussion whatever has happened, has happened. ದಯಮಾಡಿ ಮುಖ್ಯಮಂತ್ರಿಗಳಲ್ಲೂ appeal ಮಾಡಿಕೊಳ್ಳುತ್ತೇನೆ, ತಮ್ಮಲ್ಲೂ ಮಾಡಿಕೊಳ್ಳುತ್ತೇನೆ, ಹಾಗೆ ಮಾಡುವುದಾದರೆ we will have to defer the reply and take up that issue and the Hon'ble Speaker will have to revoke the weight. Therefore. . .

ಶ್ರೀ ಕೆ.ಜಿ. ಬೋಪಯ್ಯ:- ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದಾಗಲೇ ನಾನೂ ಸಹ Point of Order ಎತ್ತಿದೆ. ಆದರೆ ನನಗೆ ಅವಕಾಶವನ್ನೇ ಕೊಡಲಿಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್:- ಈ ಸದನದ ಗೌರವವನ್ನು ಎತ್ತಿ ಹಿಡಿಯುವ ಕಾರಣದಿಂದ ದಯಮಾಡಿ ಈ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಗೊಳಿಸಬೇಕು ಎಂದು ನಾನು ಮನವಿ ಮಾಡುತ್ತೇನೆ.

**ಶ್ರೀ ಕೆ.ಜಿ. ಬೋಪಯ್ಯ:**– ನೀವು ಹೇಳಬೇಕಾದುದನ್ನೆಲ್ಲ ಹೇಳಿ ಆಗಿದೆಯಲ್ಲ, ಇನ್ನೇನು ಬಾಕಿ ಇದೆ.

**ಅಧ್ಯಕ್ಷರು:**– ಸಾಕು ಬಿಡ್ರಿ.

**ಶ್ರೀ ಕೆ.ಜಿ. ಬೋಪಯ್ಯ:**– ಅವರು ಹೇಳಬೇಕಾದುದನ್ನೆಲ್ಲ ಹೇಳಿಯಾಗಿದೆ, ಇನ್ನೇನು ಬಾಕಿ ಇದೆ. ಹಾಗಾಗಿ ಅದಕ್ಕೆ ನಾವು ಸ್ಪಷ್ಟನೆ ಕೊಡಲು ನಮಗೆ ಅವಕಾಶ ಬೇಕು.

**ಶ್ರೀ ಸಿದ್ದರಾಮಯ್ಯ:**– ಆಯಿತು, ನಾನು ಅದನ್ನು ಬಿಟ್ಟುಬಿಟ್ಟಿದ್ದೇನೆ.

**ಶ್ರೀ ಕೆ.ಜಿ. ಬೋಪಯ್ಯ:**– ಈಗಾಗಲೇ ಎಲ್ಲವನ್ನೂ ಹೇಳಿಯಾಗಿದೆ. ಅರ್ಕಾವತಿ ಬಗ್ಗೆ ತಾವೇನು ಹೇಳಬೇಕೋ ಅದನ್ನು ಹೇಳಿದ್ದೀರಿ. One side ಆಗುತ್ತದೆ, ನೀವು ಹೇಳಿದಂಥಾದ್ದಕ್ಕೆ ಸ್ಪಷ್ಟನೆ ಕೊಡಲು ನಮಗೂ ಅವಕಾಶ ಕೊಡಿ.

**ಶ್ರೀ ಸಿದ್ದರಾಮಯ್ಯ:**– ನೀವು ಹೇಳಿದ್ದರಿಂದ ನಾನು ಹೇಳಿದೆ, ಇಲ್ಲದಿದ್ದರೆ ಹೇಳುತ್ತಿರಲಿಲ್ಲ.

(ಗೊಂದಲ)

**ಶ್ರೀ ಜಗದೀಶ ಶೆಟ್ಟರ್:**– De-notification, 54 ಎಕರೆ ಇತ್ಯಾದಿ ಎಲ್ಲವನ್ನೂ ಹೇಳಿದ್ದಾರೆ. Raise ಮಾಡಿದ್ದು ಅವರೇ, ಹೇಳುವುದು ಬೇಡವೆಂದು ಅವರಿಗೆ ಹೇಳಿ.

(ಗೊಂದಲ)

**ಶ್ರೀ ಜಗದೀಶ ಶೆಟ್ಟರ್:**– ಮಾನ್ಯ ಅಧ್ಯಕ್ಷರೆ, ಕುಮಾರಸ್ವಾಮಿಯವರಿಗೂ, ನಮಗೂ ನೀವು ಪ್ರಸ್ತಾಪ ಮಾಡುವುದು ಬೇಡವೆಂದು ಹೇಳಿದಿರಿ. ಆಮೇಲೆ ನಾವು ಸುಮ್ಮನೆ ಕುಳಿತುಕೊಂಡೆವು. ಆ ಬಗ್ಗೆ ನಾವು ಎಲ್ಲಿ fight ಮಾಡಬೇಕೋ, ಏನು ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ನೀವು ಬೇಡ ಎಂದು ಹೇಳಿದ ಮೇಲೆ ನಾವು ಆ ವಿಚಾರ ಬಿಟ್ಟೆವು. ಇಲ್ಲದಿದ್ದರೆ ಈ

ಸದನದಲ್ಲಿ ಚರ್ಚೆ ಮಾಡಲು ನಾವು ತಯಾರಿದ್ದೆವು. ಇನ್ನೂ ಹಲವಾರು ವಿಚಾರಗಳನ್ನು ಚರ್ಚೆ ಮಾಡಲು ನಾವು ತಯಾರಿದ್ದೇವೆ.

ಶ್ರೀ ಸಿದ್ದರಾಮಯ್ಯ:- ಚರ್ಚೆ ಮಾಡಲು ನಾವು ಯಾವತ್ತೂ ಹೆದರಿಕೊಳ್ಳುವುದೇ ಇಲ್ಲ. ಏಕೆಂದರೆ, ನಾವು ಯಾವ ತಪ್ಪನ್ನೂ ಕೂಡ ಮಾಡಿಲ್ಲ. My conscious is very clear. ನಾನು ಒಂದೇ ಒಂದು ತಪ್ಪನ್ನೂ ಕೂಡ ಮಾಡಿಲ್ಲ, ಅಕ್ರಮವಾಗಿ ಏನನ್ನೂ ಮಾಡಿಲ್ಲ, ಕಾನೂನು ಬಾಹಿರವಾಗಿ ಏನನ್ನೂ ಮಾಡಿಲ್ಲ ಮತ್ತು ಭ್ರಷ್ಟಾಚಾರವನ್ನು ಮಾಡಿಲ್ಲ. ನಾನು ಈ ಸದನಕ್ಕೆ ಬಂದು 32 ವರ್ಷಗಳಾಯಿತು. 1984 ರಲ್ಲೇ ನಾನು ಮಂತ್ರಿಯಾದೆ. ಅದಾದ ಮೇಲೆ, ನಾನು 9 ಬಜೆಟ್‌ಗಳನ್ನು ಮಂಡಿಸಿದ್ದೇನೆ. ಏಳು ವರ್ಷಗಳ ಕಾಲ ಅಂದರೆ ದೀರ್ಘಕಾಲ ಹಣಕಾಸಿನ ಮಂತ್ರಿಯಾಗಿದ್ದೆ. Transport Minister ಆಗಿದ್ದೆ, Sericulture Minister ಆಗಿದ್ದೆ, Animal Husbandry Minister ಆಗಿದ್ದೆ, Finance Minister ಆಗಿದ್ದೆ, Planning Minister ಆಗಿದ್ದೆ. ನನ್ನ ರಾಜಕೀಯ ಜೀವನದಲ್ಲಿ ಇವತ್ತಿನವರೆಗೆ ಒಂದೇ ಒಂದು ಕಪ್ಪು ಚುಕ್ಕೆಯನ್ನು ಮಾಡಿಕೊಂಡಿಲ್ಲ. ಒಂದೇ ಒಂದು ಕಪ್ಪು ಚುಕ್ಕೆಯಾಗಲು ಅವಕಾಶವನ್ನು ಕೊಟ್ಟಿಲ್ಲ. ಇವತ್ತಿನವರೆಗೆ ಯಾವುದೇ ಒಂದು ಭ್ರಷ್ಟಾಚಾರದ ಆರೋಪಗಳು ನನ್ನ ಮೇಲೆ ಇಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ಮುಖ್ಯಮಂತ್ರಿಗಳಾದ ಮೇಲೆಯೇ ಸ್ವಲ್ಪ ಸಮಸ್ಯೆಗಳು ಬರುತ್ತವೆ.

ಶ್ರೀ ಸಿದ್ದರಾಮಯ್ಯ:- ಸಮಸ್ಯೆಯೂ ಇಲ್ಲ, ಏನೂ ಇಲ್ಲ. ಈಗಲೂ ಹೇಳುತ್ತಿದ್ದೇನೆ, even today ನಾನು ಯಾವುದೇ ತನಿಖೆಗೆ ಸಿದ್ಧನಿದ್ದೇನೆ. ಇವತ್ತಿಗೂ ಕೂಡ ನನ್ನ ಆತ್ಮ ಬಹಳ ಶುದ್ಧವಾಗಿದೆ. ನನ್ನ ಕೈ ಬಹಳ ಪರಿಶುದ್ಧವಾಗಿದೆ. ಈಗಾಗಲೇ ನಾವು ಕೆಂಪಣ್ಣನವರ ಆಯೋಗವನ್ನು ರಚನೆ ಮಾಡಿದ್ದೇವೆ. ನಿಮ್ಮ ಬಳಿ ಏನು ದಾಖಲಾತಿಗಳಿವೆ, ಏನು ಹೇಳಿಕೆಗಳನ್ನು ಕೊಡಬೇಕೋ ಎಲ್ಲವನ್ನೂ ಅಲ್ಲಿಗೆ ಕೊಡಿ. ನೀವು ವಿಷಯವನ್ನು ಪ್ರಸ್ತಾಪಿಸಿದ ತಕ್ಷಣ ನಾವು ಆಯೋಗವನ್ನು ರಚನೆ ಮಾಡಿದ್ದೇವೆ. ಅರ್ಕಾವತಿ

ಬಡಾವಣೆಯಲ್ಲೇನಾದರೂ ಜಮೀನುಗಳನ್ನು ಬಿಟ್ಟಿದ್ದರೆ, ಅದೆಲ್ಲವೂ ನಿಮ್ಮ ಕಾಲದಲ್ಲಿ ಆಗಿರುವುದು ಎಂದು ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಾವು ಬಂದ ಮೇಲೆ ಉಳಿದಿರುವಂಥ ಜಮೀನಿಗೆ re-modified scheme ಮಾತ್ರ sign ಮಾಡಿರುವುದನ್ನು ಬಿಟ್ಟರೆ ಬೇರೆ ಯಾವುದೂ ಇಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಸ್ಪಷ್ಟಪಡಿಸಲು ಬಯಸುತ್ತಿದ್ದೇನೆ.

ಶ್ರೀ ಜಗದೀಶ ಶೆಟ್ಟರ್:- ಇವರ ಕಾಲದಲ್ಲಿ 700 ಎಕರೆ ಬಿಟ್ಟಿರುವುದು ಬಹುಶಃ ಈ ಶತಮಾನದ ದೊಡ್ಡ ಹಗರಣ. ಹಿಂದೆ ಯಾವ ಮುಖ್ಯಮಂತ್ರಿಯೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾಡಿರಲಿಲ್ಲ.

ಶ್ರೀ ಸಿದ್ದರಾಮಯ್ಯ:- ಈ ಶತಮಾನ ಅಲ್ಲ. ಇದೆಲ್ಲವೂ ನಿಮ್ಮ ಕಾಲದಲ್ಲಿ ಆಗಿರುವುದು, ನಾಚಿಕೆಯಾಗಬೇಕು.

ಶ್ರೀ ಜಗದೀಶ ಶೆಟ್ಟರ್:- 700 ಎಕರೆ ಜಮೀನು wholesale ಆಗಿ ಒಂದರಲ್ಲೇ ಮಾಡಿರುವ ಉದಾಹರಣೆ ಯಾವುದೂ ಇಲ್ಲ. High Court, Supreme Court guidelines ಎಲ್ಲವನ್ನೂ violate ಮಾಡಿ, ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ:- ನಾನು ಅರ್ಕಾವತಿ ಬಡಾವಣೆಯದು ಬಿಟ್ಟುಬಿಡುತ್ತೇನೆ. ಬೇರೆ ಕಡೆಗಳಲ್ಲಿ 2006 ರಿಂದ ಈ ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು de-notification ಆಗಿದೆ ಎನ್ನುವುದನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ನಾನು ಅಧಿಕಾರಕ್ಕೆ ಬಂದು ಒಂದು ವರ್ಷ, ಒಂಭತ್ತು ತಿಂಗಳಾಯಿತು. 2006 ರಿಂದ ರಾಜ್ಯದಲ್ಲಿ ಆರು ಜನ ಮುಖ್ಯಮಂತ್ರಿಗಳಾಗಿದ್ದರು. ಧರಂಸಿಂಗ್‌ರವರು ಒಂದು ವರ್ಷ, ಎಂಟು ತಿಂಗಳು ಮುಖ್ಯಮಂತ್ರಿಗಳಾಗಿದ್ದರು. ಕುಮಾರಸ್ವಾಮಿಯವರು ಒಂದು ವರ್ಷ, ಎಂಟು ತಿಂಗಳು ಮುಖ್ಯಮಂತ್ರಿಗಳಾಗಿದ್ದರು. ಎರಡು ಸಾರಿ President Rule ಇತ್ತು, ಒಂದು ಸಾರಿ ಒಂದು ತಿಂಗಳು ಎರಡು ದಿನ, ಮತ್ತೊಂದು ಸಾರಿ ಆರು ತಿಂಗಳು ಏಳು ದಿನ ಇತ್ತು. ಯಡಿಯೂರಪ್ಪನವರು ಮೂರು ವರ್ಷ, ಎರಡು ತಿಂಗಳು ಮುಖ್ಯಮಂತ್ರಿಗಳಾಗಿದ್ದರು. ಸದಾನಂದಗೌಡರು ಹನ್ನೊಂದು ತಿಂಗಳು, ಎಂಟು ದಿನ ಮುಖ್ಯಮಂತ್ರಿಗಳಾಗಿದ್ದರು. ಜಗದೀಶ ಶೆಟ್ಟರ್‌ರವರು

ಹತ್ತು ತಿಂಗಳು ಮುಖ್ಯಮಂತ್ರಿಯಾಗಿದ್ದರು. ನಾನು 13.05.2013 ರಿಂದ ಇಲ್ಲಿಯವರೆಗೆ ಮುಖ್ಯಮಂತ್ರಿಯಾಗಿದ್ದೇನೆ. 2006 ರಿಂದ ಇಲ್ಲಿಯವರೆಗೆ B.D.A. ನಲ್ಲಿ ಎಷ್ಟು de-notification ಗಳಾಗಿವೆ? Urban Development Authority ಗಳಲ್ಲಿ ಎಷ್ಟು de-notification ಗಳಾಗಿವೆ? K.I.A.D.B. ನಲ್ಲಿ ಎಷ್ಟು de-notification ಗಳಾಗಿವೆ? K.H.B. ನಲ್ಲಿ ಎಷ್ಟು de-notification ಗಳಾಗಿವೆ? ಎಂದು ಎಲ್ಲಾ ಅಂಕಿ ಅಂಶಗಳಿವೆ. De-notification ಮಾಡಲು Section 48, Clause-1 ನಲ್ಲಿ ಸರ್ಕಾರಕ್ಕೆ ಅಧಿಕಾರವಿದೆ ಎಂದು ಕುಮಾರಸ್ವಾಮಿಯವರು ಹೇಳುತ್ತಿದ್ದರು. ಇದೆ. ಆದರೆ, preliminary notification and final notification ಮಧ್ಯೆ ಭೂಸ್ವಾಧೀನಾಧಿಕಾರಿಗಳು ಅದನ್ನು ಮಾಡುತ್ತಾರೆ. ಅದರಲ್ಲೂ ಕೂಡ ದುರುದ್ದೇಶದಿಂದ ಅಥವಾ ಸರ್ಕಾರ interefere ಆಗಿ ಮಾಡಿದರೆ ಅದೂ ಕೂಡ ಅಕ್ರಮವಾಗುತ್ತದೆ. Final notification ಆದಮೇಲೆ de-notification ಮಾಡಬೇಕಾದರೆ ಅದಕ್ಕೆ ಸರ್ಕಾರದ ಆದೇಶಗಳಿರಬೇಕು. ಸರ್ಕಾರದ ಆದೇಶಗಳಿಲ್ಲದೇ, ಸಕಾರಣಗಳಿಲ್ಲದೇ de-notification ಆಗಿರುವಂಥಾದ್ದು ಬೇಕಾದಷ್ಟು ಇವೆ. 'De-notification ಆಗಿದೆ' ಎಂದು ನಮ್ಮ ಸರ್ಕಾರ ಬಂದ ಮೇಲೆ ಒಂದು ದೊಡ್ಡ ಅಪಪ್ರಚಾರ ನಡೆಯುತ್ತಿದೆ. ಧರಂಸಿಂಗ್‌ರವರ ಕಾಲದಲ್ಲಿ 17 ಎಕರೆ 7 ಗುಂಟೆ de-notification ಆಗಿದೆ. ಕುಮಾರಸ್ವಾಮಿಯವರ ಕಾಲದಲ್ಲಿ 401 ಎಕರೆ 31 ಗುಂಟೆ de-notification ಆಗಿದೆ. President Rule ಇದ್ದ ಸಂದರ್ಭದಲ್ಲಿ ಒಂದು ಬಾರಿ 105 ಎಕರೆ 16 ಗುಂಟೆ ಮತ್ತು ಇನ್ನೊಂದು ಬಾರಿ 167 ಎಕರೆ 225 ಗುಂಟೆ ಆಗಿದೆ. ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ 1961 ಎಕರೆ de-notify ಆಗಿದೆ. ಡಿ.ವಿ. ಸದಾನಂದಗೌಡರ ಕಾಲದಲ್ಲಿ 498 ಎಕರೆ 27 ಗುಂಟೆ de-notify ಆಗಿದೆ. ಜಗದೀಶ ಶೆಟ್ಟರ್‌ರವರ ಕಾಲದಲ್ಲಿ ಬರೀ 17 ಗುಂಟೆ ಆಗಿದೆ. ನನ್ನ ಕಾಲದಲ್ಲಿ ಅಂದರೆ ನಾನು ಮುಖ್ಯಮಂತ್ರಿಯಾಗಿರುವಾಗ 22 ಎಕರೆ 28 ಗುಂಟೆ de-notify ಆಗಿದೆ. ಇವಿಷ್ಟೂ ಕೂಡ ಕೋರ್ಟ್ ಆದೇಶದ ಮೇಲೆ ಆಗಿರತಕ್ಕಂಥವು. ಇದು ಅರ್ಕಾವತಿ ಬಡಾವಣೆಗೆ ಸಂಬಂಧಪಟ್ಟಿದ್ದಲ್ಲ. General ಆಗಿ ಇಷ್ಟು de-notification ಆಗಿದೆ. ಇವೆಲ್ಲ after preliminary

notification, after final notification, after possession ಯಾರ್‍ಯಾರು de-notification ಮಾಡಿದ್ದಾರೆ? ಎನ್ನುವ ಎಲ್ಲ ವಿವರಗಳಿವೆ. ಬೇಕಾದರೆ ಎಲ್ಲ ದಾಖಲಾತಿಗಳನ್ನು ಒದಗಿಸುತ್ತೇನೆ. ಇವೆಲ್ಲ ಸರ್ಕಾರದಲ್ಲಿರುವಂಥ ದಾಖಲಾತಿಗಳು. ಅವರೂ ಕೂಡ ಬೇಕಾದರೆ R.T.I. Act ಕೆಳಗೆ ಇವುಗಳನ್ನೆಲ್ಲ ತೆಗೆದುಕೊಂಡು ನೋಡಬಹುದು. ನಾನು ಹೇಳುವುದೇನೆಂದರೆ, ನಮ್ಮ ಕಾಲದಲ್ಲಿ illegal ಆಗಿ, ಅಕ್ರಮವಾಗಿ ಯಾವುದೇ de-notification ಅನ್ನು ನಾವು ಮಾಡಿಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ತಿಳಿಸಲು ಬಯಸುತ್ತಿದ್ದೇನೆ. ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂಥ ವಿಚಾರ ಈಗ ಕೆಂಪಣ್ಣಯ್ಯನವರ ಆಯೋಗದಲ್ಲಿ ತನಿಖೆಯಲ್ಲಿರುವುದರಿಂದ ನಾನು ಅದನ್ನು ಹೆಚ್ಚು ಲಂಬಿಸಲು ಹೋಗುವುದಿಲ್ಲ. ಈ ಸಂದರ್ಭದಲ್ಲಿ ಅದರ ಬಗ್ಗೆ ಹೆಚ್ಚಾಗಿ ವಿವರಗಳನ್ನೂ ಕೊಡಲು ಹೋಗುವುದಿಲ್ಲ. ಇನ್ನು, ಅನೇಕ ಜನ ಸದಸ್ಯರು 'ಸರ್ಕಾರದಲ್ಲಿ ಹಣವಿಲ್ಲ, ತೆರಿಗೆ ಸರಿಯಾಗಿ ವಸೂಲಾಗಿಲ್ಲ, ತೆರಿಗೆ ಹಣ ಸೋರಿ ಹೋಗುತ್ತಿದೆ' ಎಂದು ಸದನದಲ್ಲೂ ಹೇಳಿದ್ದಾರೆ, ಸದನದ ಹೊರಗಡೆಯೂ ಹೇಳಿದ್ದಾರೆ. ನಾನು ಈ ಸದನದ ಗಮನಕ್ಕೆ ತರುವಂಥಾದ್ದು ಏನೆಂದರೆ ಈ ವರ್ಷ ಅಂದರೆ 2014–15ರಲ್ಲಿ ರಾಜ್ಯದ ಸ್ವಂತ ತೆರಿಗೆಗಳು ಅಂದರೆ State's own taxes 69,870 ಕೋಟಿ ರೂ.ಗಳನ್ನು ಸಂಗ್ರಹ ಮಾಡಬೇಕಾಗಿತ್ತು. ಜನವರಿ ಕೊನೆಯವರೆಗೆ ನಾವು ಸಂಗ್ರಹಿಸಿರತಕ್ಕಂಥದ್ದು 55,726 ಕೋಟಿ ರೂಪಾಯಿಗಳು. ಅಂದರೆ ಸುಮಾರು 80% ತೆರಿಗೆಯನ್ನು ವಸೂಲಿ ಮಾಡಿದ್ದೇವೆ. ಕಳೆದ ವರ್ಷ ತೆರಿಗೆ ಸಂಗ್ರಹವಾಗಿ ಇರತಕ್ಕಂಥದ್ದು ಮತ್ತು ಈ ವರ್ಷ ತೆರಿಗೆ ಸಂಗ್ರಹವಾಗಬೇಕಾಗಿರತಕ್ಕಂಥದ್ದು ಹೋಲಿಕೆ ಮಾಡಿ ಸುಮಾರು 14.5% growth ಇರಬೇಕೆಂದು target ಇಟ್ಟುಕೊಂಡಿದ್ದೇವೆ. ಆದರೆ ಇಲ್ಲಿಯವರೆಗೆ ಅಂದರೆ January end ವರೆಗೆ 14.3% growth ನಾವು ಬಜೆಟ್‌ನಲ್ಲಿ ಏನು target ಇಟ್ಟುಕೊಂಡಿದ್ದೆವೋ ಹೆಚ್ಚುಕಡಿಮೆ ಅರ್ಧದಷ್ಟು ಅಂದರೆ 14.5% growth ಆಗಬೇಕು, ಆದರೆ, ಇಲ್ಲಿ growth ಆಗಿರತಕ್ಕಂಥದ್ದು 14.3%. It is almost about 14.5%. ಇನ್ನುಳಿದ 2 ತಿಂಗಳು ಫೆಬ್ರವರಿ ಮತ್ತು ಮಾರ್ಚ್‌ನಲ್ಲಿ ನಾವು target ಏನು ಇಟ್ಟುಕೊಂಡಿದ್ದೇವೆ ಅಷ್ಟೂ, target ಅನ್ನು

ಕೂಡ reach ಆಗುತ್ತೇವೆನ್ನುವುದನ್ನು ಬಹಳ ಸ್ಪಷ್ಟವಾಗಿ ಈ ಸದನಕ್ಕೆ ತಿಳಿಸಲಿಕ್ಕೆ ಬಯಸುತ್ತೇನೆ. ವಾಣಿಜ್ಯ ತೆರಿಗೆಯಲ್ಲಿ ಕಳೆದ ವರ್ಷ ಇದೇ ಜನವರಿ ಕೊನೆಗೆ 29426 ಕೋಟಿ ರೂಪಾಯಿಗಳ ತೆರಿಗೆ ವಸೂಲಿ ಆಗಿತ್ತು. ಈ ವರ್ಷ 34,362 ಕೋಟಿ ರೂಪಾಯಿಗಳಷ್ಟು ತೆರಿಗೆ ವಸೂಲಿ ಆಗಿದೆ. ಅಂದರೆ 16.8% growth ಆಗಿದೆ. 14.5% ಗಿಂತ ಜಾಸ್ತಿ growth ಆಗಿದೆ. ಅಬಕಾರಿಯಲ್ಲಿ ಕಳೆದ ವರ್ಷ 10,450 ಕೋಟಿ ರೂಪಾಯಿ ವಸೂಲಿ ಆಗಿದ್ದು ಈ ವರ್ಷ 11,223 ಕೋಟಿ ರೂಪಾಯಿಗಳು ಆಗಿದೆ. ಮುದ್ರಾಂಕ ಮತ್ತು ನೋಂದಣಿ ಶುಲ್ಕ, ಇದರಲ್ಲಿ ಕಳೆದ ವರ್ಷ 4,963 ಕೋಟಿ ರೂ. ಆಗಿತ್ತು. ಈ ವರ್ಷ 5,677 ಕೋಟಿ ರೂಪಾಯಿ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್:- ಈ ಬಜೆಟ್‌ನಲ್ಲಿ ನಿಮ್ಮ ಗುರಿ ಇಟ್ಟುಕೊಂಡಿದ್ದರಲ್ಲ, ಅದಕ್ಕೆ ನೀವು comparision ಮಾಡಿಕೊಳ್ಳಿ. Last year ಗುರಿ ಬೇರೆ ಇತ್ತು. ಈ ಬಜೆಟ್‌ನಲ್ಲಿ ಏನು ಗುರಿ ಇಟ್ಟಿದ್ದಿರಿ, ಅದಕ್ಕೆ compare ಮಾಡಿ ಹೇಳಿ.

ಶ್ರೀ ಸಿದ್ದರಾಮಯ್ಯ:- Compare ಮಾಡಿಯೇ ಹೇಳಿದ್ದು. ನೀವು ಕೇಳಿಸಿಕೊಳ್ಳಲಿಲ್ಲ. ಈ ವರ್ಷ ಗುರಿ ಇರತಕ್ಕಂಥದ್ದು ನಮ್ಮ ಸ್ವಂತ ತೆರಿಗೆಗಳು 69,870 ಕೋಟಿ ರೂಪಾಯಿಗಳು. That is the target. ನಾವು ವಸೂಲಿ ಮಾಡಿರತಕ್ಕಂಥದ್ದು 55,726 ಕೋಟಿ ರೂಪಾಯಿಗಳು. I hope I made myself very clear. ನಾವು target 14.5% ಇಟ್ಟುಕೊಂಡಿದ್ದೆವು. ಅದರಲ್ಲಿ 14.3% ಈಗಾಗಲೇ ನಾವು reach ಆಗಿದ್ದೇವೆ. ನಾವು target ಗೆ ಅನುಗುಣವಾಗಿ ತೆರಿಗೆ ವಸೂಲಿ ಮಾಡುತ್ತಿದ್ದೇವೆ. ಮೋಟಾರು ವಾಹನ ತೆರಿಗೆ ಕಳೆದ ವರ್ಷ ಜನವರಿ ತಿಂಗಳಲ್ಲಿ ಇದ್ದದ್ದು 3,068 ಕೋಟಿ ರೂಪಾಯಿಗಳು, ಈ ವರ್ಷ 3,459 ಕೋಟಿ ರೂಪಾಯಿಗಳು. ಇಡೀ ನಮ್ಮ State resources ನಲ್ಲಿ 60% ವಾಣಿಜ್ಯ ತೆರಿಗೆ ಇಲಾಖೆಯಿಂದ ಬರುತ್ತದೆ. Commercial Taxes ನಲ್ಲಿ ಈ ವರ್ಷ the growth is 16.47%. ನಮ್ಮ ದಕ್ಷಿಣ ಭಾರತ ಇದೆಯಲ್ಲ, ದಕ್ಷಿಣ ಭಾರತದ ರಾಜ್ಯಗಳು, ಕರ್ನಾಟಕ, ಕೇರಳ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಈ ರಾಜ್ಯಗಳಿಗೆ ಹೋಲಿಕೆ ಮಾಡಿದರೆ Karnataka stands No. 1 in

Southern India. Karntaka 16.47%; Kerala 11.54%; Maharastra 9.48%; Andhra Pradesh 8.18%; Tamıl Nadu 6.77; ನಮ್ಮದು 16.47%. ನಾನು ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಆಡಳಿತ ಕುಸಿದು ಬಿದ್ದು ಬಿಟ್ಟಿದೆ, ಸರ್ಕಾರದಲ್ಲಿ ಲವಲವಿಕೆಯೇ ಇಲ್ಲ, ಜೀವಂತಿಕೆಯೇ ಇಲ್ಲ ಎಂದು ಏನು ಹೇಳುತ್ತಿದ್ದಾರಲ್ಲ, ಈ ಜೀವಂತಿಕೆ ಇಲ್ಲದಿರುವಂಥ ಸರ್ಕಾರ ಈ ತರಹ achievement ಮಾಡುವುದಕ್ಕೆ ಸಾಧ್ಯವಾಗುತ್ತಿತ್ತೇ? ಇದು ನಿದ್ದೆ ಮಾಡುವ ಸರ್ಕಾರ ಮಾಡುವ ಕೆಲಸವೇ? ಸರ್ಕಾರ ನಿಷ್ಕ್ರೀಯವಾಗಿದೆ, ಏನೂ ಮಾಡುತ್ತಿಲ್ಲ ಎನ್ನುವುದು ತೆರಿಗೆ ಸಂಗ್ರಹ ನೋಡಿದರೆ ನಿಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಸರ್ಕಾರ ಲವಲವಿಕೆಯಿಂದ ಇದೆ. ಈ ಸರ್ಕಾರ ಬಹಳ ಲವಲವಿಕೆಯಿಂದ ಇದೆ. ಈ ಸರ್ಕಾರ ಬಹಳ active ಆಗಿ ಕೆಲಸ ಮಾಡುತ್ತಿದೆ. ಈ ಸರ್ಕಾರ ಜೀವಂತಿಕೆಯಿಂದ ಕೆಲಸ ಮಾಡುತ್ತಿದೆ. ಇವೆಲ್ಲವೂ ಇದೆ ಎನ್ನತಕ್ಕಂಥದ್ದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಮ್ಮ ಕಾರ್ಯಕ್ರಮಗಳು ಜಾರಿಯಾಗಿರತಕ್ಕಂಥದ್ದನ್ನು ಕೂಡ ನೋಡಿ. ನಿಮ್ಮ ಕಾಲದಲ್ಲಿ ಬಡವರಿಗೆ ಅಕ್ಕಿ ಕೊಡಲಿಕ್ಕೆ ಕೂಡ ನಿಮ್ಮ ಕೈಯಲ್ಲಿ ಆಗಿಲ್ಲ.

ಶ್ರೀ ಪ್ರಮೋದ್ ಮಧ್ವರಾಜ್:- ಅವರ ಕಾಲದಲ್ಲಿ ಸಂಧ್ಯಾ ಸುರಕ್ಷೆ ಯೋಜನೆಯನ್ನು ನಿಲ್ಲಿಸಿದ್ದರು.

ಶ್ರೀ ಸಿದ್ದರಾಮಯ್ಯ:- ಅಕ್ಕಿ ಕೊಡಲಿಕ್ಕೆ ಆಗಲಿಲ್ಲ. ಆ ಬಡವರು ಬಾಕಿ ಕೊಡಲಿಲ್ಲವೆಂದು 'ಭಾಗ್ಯಜ್ಯೋತಿ' ಮತ್ತು 'ಕುಟೀರ ಜ್ಯೋತಿ' light ಗಳನ್ನು ಆ ಕಡೆಗೆ ಕಿತ್ತುಹಾಕಿಬಿಟ್ಟಿದ್ದಿರಿ. ಅವರು ಬಾಕಿ ಕೊಡಬೇಕಾಗಿರತಕ್ಕಂಥದ್ದನ್ನು ಸಂಪೂರ್ಣ ಮನ್ನಾ ಮಾಡಿ ಮತ್ತೆ reconnection ಕೊಡುವಂಥದ್ದನ್ನು ಕೂಡ ನಾವು ಮಾಡಿದ್ದೇವೆ. ನೀವು ನಮಗೆ ಪಾಠ ಹೇಳುವುದಕ್ಕೆ ಶುರುಮಾಡಿಬಿಟ್ಟಿದ್ದೀರಿ.

ಶ್ರೀ ತನ್ವೀರ್ ಸೇಠ್:- ಇವರ ಸರ್ಕಾರ ಕೇಂದ್ರ ಸರ್ಕಾರದಿಂದ ಬರುವ pension ಅನ್ನು ಎರಡು ವರ್ಷ ನಿಲ್ಲಿಸಿದ್ದರು.

ಶ್ರೀ ಸಿ.ಟಿ. ರವಿ:- ಸುವರ್ಣಭೂಮಿ ಇಲ್ಲ, ಸುವರ್ಣ ಗ್ರಾಮ ಯೋಜನೆ ನಿಮ್ಮ ಕಾಲದಲ್ಲಿ ಯಾವುದಕ್ಕೂ ಹಣ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಅದಕ್ಕೂ ಬರುತ್ತೇನೆ, ಕುಳಿತುಕೊಳ್ಳಿ. Clarification ಕೇಳುವಿರಂತೆ.

ಶ್ರೀ ಸಿ.ಟಿ. ರವಿ:- 'ನಮ್ಮ ಗ್ರಾಮ ನಮ್ಮ ರಸ್ತೆ' ಇಲ್ಲ. ಭಾಗ್ಯಲಕ್ಷ್ಮಿಗೆ ಹಣ ಕೊಡಲಿಲ್ಲ. ಇದನ್ನೂ ಹೇಳಬೇಕಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಕುಮಾರಸ್ವಾಮಿಯವರು ಒಂದು ವಿಚಾರವನ್ನು ಅಂದರೆ ಲೋಕಸೇವಾ ಆಯೋಗದ್ದು ಇಲ್ಲಿ ಬಹಳ ದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ. ರವಿ:- ಕೇಂದ್ರ ಸರ್ಕಾರದ Rashtriya Swasthya Bima Yojana ಗೆ photo ಹಾಕಿಕೊಂಡಿರಿ ಅಷ್ಟೆ ನೀವು. ಇನ್ನೇನು ಮಾಡಿದಿರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ:- ರವಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಕುಮಾರಸ್ವಾಮಿಯವರು ಬಹಳ ದೀರ್ಘವಾಗಿ ಲೋಕಸೇವಾ ಆಯೋಗದ್ದು ಪ್ರಸ್ತಾಪ ಮಾಡಿದ್ದಾರೆ. 2011ನೇ ವರ್ಷದ Gazetted Probationers ನಲ್ಲಿ ಸುಮಾರು 362 ಜನರು ಏನು ಆಯ್ಕೆಯಾಗಿತ್ತು ಎಂದು ಹೇಳಿದ್ದರು, ಅದರ ಬಗ್ಗೆ ಬಹಳ ಸುದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ. ವ್ಯಾಪಕವಾಗಿ ಇದರ ಬಗ್ಗೆ ಎಲ್ಲಾ ಚರ್ಚೆಯಾಯಿತು. ಪತ್ರಿಕೆಗಳಲ್ಲಿ, ಬೇರೆ ಬೇರೆ ಕಡೆ ಚರ್ಚೆಯಾಗಿ, ಇದೆಲ್ಲಾ ಆಯಿತು. ಅದರಲ್ಲಿ

ಭ್ರಷ್ಟಾಚಾರ ನಡೆದಿದೆ, ಸ್ವಜನಪಕ್ಷಪಾತ ನಡೆದಿದೆ, ಅನ್ಯಾಯವಾಗಿವೆ ಇವೆಲ್ಲವೂ ಚರ್ಚೆಯಾಗಿದೆ. ಫಿರ್ಯಾದು ಕೂಡ ಕೊಟ್ಟಿದ್ದರು. ಅದರ ಮೇಲೆ ನಾವು Advocate General ರವರಿಂದ ಅಭಿಪ್ರಾಯ ಪಡೆದು, ಅದನ್ನು CID enquiry ಗೆ ವಹಿಸಿದ್ದೆವು. CID ಯವರು ತನಿಖೆ ಮಾಡಿ ಒಂದು ವರದಿ ಕೊಟ್ಟಿದ್ದಾರೆ. ಆ ವರದಿಯಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತ ಇವೆಲ್ಲ ಆಗಿವೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಅವರ ವರದಿಯಲ್ಲಿ ಅನೇಕ ಶಿಫಾರಸ್ಸುಗಳನ್ನು ಅವರು ಮಾಡಿದ್ದಾರೆ. ಅದರ ಆಧಾರದ ಮೇಲೆ ನಮ್ಮ Cabinet ನಲ್ಲಿ ಬಹಳ ದೀರ್ಘವಾಗಿ ಚರ್ಚೆ ಮಾಡಿ ಲೋಕಸೇವಾ ಆಯೋಗದಲ್ಲಿ ಕಾಯಕಲ್ಪವೂ ಕೂಡ ಬರಬೇಕೆಂದು ಯೋಚನೆ ಮಾಡಿ Hota, Former Chairman of the Union Public Service Commission ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನೂ ಕೂಡ ಮಾಡಿ ಅವರಿಂದ ವರದಿಗಳನ್ನು ತರಿಸಿಕೊಂಡು, ಅಲ್ಲಿ reforms ಮಾಡುವುದನ್ನು ಕೂಡ ಮಾಡಿದ್ದೇವೆ. ಉದ್ದೇಶ ಏನು ಎಂದರೆ, ಆಗ್ಗಿಂದಾಗ್ಗೆ ಚರ್ಚೆಗಳು ನಡೆಯುತ್ತಲೇ ಇವೆ, ಅಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ, ಸ್ವಜನಪಕ್ಷಪಾತ ನಡೆಯುತ್ತಿದೆ ಎನ್ನುವಂಥ ದೂರುಗಳು ಬರುತ್ತವೆ. ಅದಕ್ಕೋಸ್ಕರವೇ ನಾವು enquiry ಮಾಡಿಸಿದ್ದು. ಆ enquiry ಯನ್ನೂ ಕೂಡ Advocate General ಅಭಿಪ್ರಾಯದ ಮೇಲೆಯೇ ಮಾಡಿಸಿದ್ದು. ಅದು ಬಂದ ಮೇಲೆ ಅವರು ಕೆಲವೆಲ್ಲಾ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಆ ಶಿಫಾರಸ್ಸುಗಳ ಆಧಾರದ ಮೇಲೆ ನಾವು 362 ಜನರ ಪಟ್ಟಿಯನ್ನು ರದ್ದು ಮಾಡಿದ್ದೇವೆ. ಕುಮಾರಸ್ವಾಮಿಯವರು, ಅದರಲ್ಲಿ ಬಹಳ ಜನ ದಲಿತರಿದ್ದಾರೆ, ಹಿಂದುಳಿದವರಿದ್ದಾರೆ, ಒಬ್ಬರು ಕಣ್ಣಿಲ್ಲದೇ ಇದ್ದವರು ಆಯ್ಕೆಯಾಗಿದ್ದಾರೆ, ಈ ತರಹದವರ ಬಗ್ಗೆ ಅನುಕಂಪ ಇರಲಿ ಎಂದು ಹೇಳಿದರು. ನಮಗೂ ಅನುಕಂಪ ಇದೆ. ದಲಿತರ ಬಗ್ಗೆ, ಹಿಂದುಳಿದವರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ, ಅಂಗವಿಕಲರ ಬಗ್ಗೆ ಎಲ್ಲರ ಬಗ್ಗೆಯೂ ಕೂಡ ನಮಗೂ ಅನುಕಂಪ ಇದೆ. ಆದರೆ, ಅನ್ಯಾಯ, ಅಕ್ರಮಗಳು ನಡೆದಾಗ, ಭ್ರಷ್ಟಾಚಾರ ನಡೆದಾಗ, ಸ್ವಜನಪಕ್ಷಪಾತ ನಡೆದಾಗ, ಆ ತರಹದ ವರದಿಗಳಿದ್ದಾಗ ನಾವು ಅದನ್ನು

ರದ್ದು ಮಾಡದೇ ಇರಲಿಕ್ಕೆ ಸಾಧ್ಯವೇ ಇಲ್ಲ. ಆ ತರಹದ ಪರಿಸ್ಥಿತಿ ಅವತ್ತು ನಿರ್ಮಾಣವಾಗಿತ್ತು. ಅದನ್ನೂ ಕೂಡ ಮಾಡಿದ್ದೇವೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಮಾನ್ಯ ಮುಖ್ಯಮಂತ್ರಿಯವರೆ, ಆ ವರದಿಯಲ್ಲಿ ಯಾರೋ ಗಂಗಾಧರಯ್ಯ ಎಂದು complaint ಕೊಟ್ಟರಲ್ಲ, ಇವತ್ತಿನವರೆಗೆ ನಿಮ್ಮ COD ಯವರು ಆ ಗಂಗಾಧರಯ್ಯರವರನ್ನು trace out ಮಾಡಿದ್ದಾರೆಯೇ?

**ಶ್ರೀ ಸಿದ್ದರಾಮಯ್ಯ:-** Interim report ಕೊಟ್ಟಿರುವುದು, ಇನ್ನೂ ತನಿಖೆ ನಡೆಯುತ್ತಿದೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಯಾವ ತನಿಖೆ? ಹಾಗಿದ್ದರೆ, interim report ಮೇಲೆ ನೀವು ಆ entire list ಅನ್ನು quash ಮಾಡತಕ್ಕಂಥ points ಅದರಲ್ಲೇನಿದೆ? ದಯವಿಟ್ಟು ಹೇಳಬೇಕು. ಹೋಗಲಿ. 54 ಬ್ಯಾಂಕುಗಳಿಗೆ ಹೋಗಿ search ಮಾಡಿ 74 Bank accounts ಅನ್ನು seize ಮಾಡಿದ್ದೇವೆಂದರು. ಆ 74 Bank accounts ನಲ್ಲಿ ಎಲ್ಲಾದರೂ ಭ್ರಷ್ಟಾಚಾರದ ಹಣ ಸಿಕ್ಕಿರತಕ್ಕಂಥದ್ದನ್ನು prove ಮಾಡಿರತಕ್ಕಂಥದ್ದು ಇದೆಯೇ? ಈಗ ಅದೇ member ಗಳ ಕೈಯಲ್ಲಿ 2,800 ಹೊಸದಾಗಿ appointment ಗೆ interview ಮಾಡಿಸುತ್ತಿದ್ದೀರಿ. ಅವರು ಭ್ರಷ್ಟರಿದ್ದ ಮೇಲೆ ಏಕೆ ಇದನ್ನು ಮಾಡುತ್ತಿದ್ದಿರಿ? ಮೊನ್ನೆ ನಿಮ್ಮ Cabinet ನಲ್ಲಿ subject ತಂದಿರಿ. ಈಗಿರತಕ್ಕಂಥ (ಹಾಲಿ) member ಗಳನ್ನು ಅಮಾನತ್ತುಗೊಳಿಸಲಿಕ್ಕೆ ರಾಷ್ಟ್ರಪತಿಗಳಿಗೆ ಕಳುಹಿಸತಕ್ಕಂಥ ವಿಷಯ ಚರ್ಚಿಸಿದಿರಿ. ಅಂಥ member ಗಳ ಕೈಯಲ್ಲಿ ನೀವು interview ನಡೆಸುತ್ತಿದ್ದೀರಿ. 460 ಹೊಸದಾಗಿ 2014ಕ್ಕೆ notification issue ಮಾಡಿದ್ದೀರಲ್ಲಾ, ಈಗ ನೀವು ಅವರನ್ನು ಅಮಾನತ್ತುಗೊಳಿಸದೇ ಇದ್ದರೆ, ಅದೇ member ಗಳ ಕೈಯಲ್ಲಿ ಮಾಡಿಸಲಿಕ್ಕೆ ಹೊರಟಿದ್ದೀರಿ. ನಿಮಗೆ 362 ಜನ ಏನು ಅನ್ಯಾಯ ಮಾಡಿದ್ದರು? Appointment ಆಗಿರತಕ್ಕಂಥವರು ಹಣ ಕೊಟ್ಟಿರತಕ್ಕಂಥದ್ದೇನಾದರೂ prove ಮಾಡಿಕೊಂಡಿದ್ದೀರಾ? ಇದು ಹಲವಾರು

ರೀತಿಯಲ್ಲಿ ತೆಗೆದುಕೊಂಡಂಥ ನಿರ್ಧಾರ ಏನಿದೆ, ಅತ್ಯಂತ xxxxxx decision ತೆಗೆದುಕೊಂಡಿದ್ದೀರಿ. ಏಕೆ ಹೇಳುತ್ತೇನೆಂದರೆ ನಾನು ಅದನ್ನು prove ಮಾಡುತ್ತೇನೆ.

(x x ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆಯಲಾಗಿದೆ)

ಶ್ರೀ ಸಿದ್ದರಾಮಯ್ಯ:– No.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇದೊಂದು list ನಲ್ಲಿ ನೀವು . . . .

ಶ್ರೀ ಸಿದ್ದರಾಮಯ್ಯ:– Prove ಮಾಡುವುದಿದ್ದರೆ ಮಾಡಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇಂಥ ತೀರ್ಮಾನ ಮಾಡಿರುವುದೇನಿದೆ, . . .

ಶ್ರೀ ಸಿದ್ದರಾಮಯ್ಯ:– xxxx ಎಂದು ಬಳಸುವುದು ಸರಿ ಇಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇದು beginning ನಿಂದ ಪ್ರಾರಂಭವಾಯಿತು.

(ಗೊಂದಲ)

ಶ್ರೀ ಸಿದ್ದರಾಮಯ್ಯ:– It is not correct.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):– xxxx ಎಂದು ಹೇಳಿದ್ದು ಸರಿಯಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಈಗ ನೀವು member . . .

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಾನೇಕೆ ಹೇಳುತ್ತೇನೆಂದರೆ, . . .

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನೀವು ಮಾಡುವುದು xxxx ಎಂದು ಹೇಳಬೇಕಾಗುತ್ತದೆ ಅಷ್ಟೇ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನೀವು ಮಾತನಾಡುವುದು, ನೀವು xxxxxxx ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಇದು Court ಗೆ ಹೋಗಿದೆ. Court ನಲ್ಲಿ ಇತ್ಯರ್ಥ ಆಗಲಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- Court ನಲ್ಲಿ ಯಾವಾಗ ಇತ್ಯರ್ಥ ಮಾಡಿಸುತ್ತೀರಿ? ಅವನ್ಯಾರೋ KAT ಯಲ್ಲಿ ನಮ್ಮ ಮುಂದೆ ಇಲ್ಲ . . . .

(x x ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆಯಲಾಗಿದೆ)

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಾನು yield ಆಗುವುದಿಲ್ಲ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ನಮ್ಮ ಮುಂದೆ ಇಲ್ಲ, ವಾಪಸ್ ಕೇಸ್ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿ. . . .

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** KAT ಯಲ್ಲಿ ಎಲ್ಲಿದೆ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** In such case you can challenge it.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಯಾವ ಪ್ರಾಮಾಣಿಕ ಅಧಿಕಾರ ಕೊಡುತ್ತಾರೆ?

(ಗೊಂದಲ)

**ಅಧ್ಯಕ್ಷರು:–** ಅವರು ಹೇಳುತ್ತಾರೆ, ಆಮೇಲೆ ನೀವು ಮಾತನಾಡಿ.

(ಗೊಂದಲ)

**ಅಧ್ಯಕ್ಷರು:–** ಕುಮಾರಸ್ವಾಮಿಯವರೆ, . . . .

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** Member ಗಳು ಭ್ರಷ್ಟರು ಎಂದಾದ ಮೇಲೆ ಅವರ ಕೈಯಲ್ಲಿ 2008 . .. . .

(ಗೊಂದಲ)

**ಡಾ: ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):–** Cabinet decision ಮಾಡಿದೆ. . . .

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:-** ಸರ್ಕಾರ ನಿರ್ಣಯ ತೆಗೆದುಕೊಂಡಿತು ಎಂದು ತಾವು ಹೇಳಿದ್ದು, . . . .

(ಗೊಂದಲ)

**ಡಾ: ಹೆಚ್.ಸಿ. ಮಹದೇವಪ್ಪ:-** Court ನಲ್ಲಿದೆಯಲ್ಲ, court ನಲ್ಲಿ let it be challenged. It is already being challenged in the court.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಈಗ ಅರ್ಕಾವತಿಯದ್ದು ಹೇಳಿದಿರಲ್ಲ. ನಾನು book ಅನ್ನು ತೆವಲಿಗೆ ಬರೆದಿಲ್ಲ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಅಲ್ಲಿ ಆ ದಾಖಲೆಗಳನ್ನು ಇಟ್ಟಿರುವುದು.

(ಗೊಂದಲ)

**ಡಾ: ಹೆಚ್.ಸಿ. ಮಹದೇವಪ್ಪ:-** Let all those things be enquired in the court of law.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಅಲ್ಲಿ ಕೊಡಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ನಿಮ್ಮ ಹಣೆಬರಹ ಹೇಳುವುದಕ್ಕೆ . . .

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಅಲ್ಲಿ ತೆಗೆದುಕೊಂಡು ಹೋಗಿ ಕೊಡಿ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** Commission ಮುಂದೆ ಹೋಗಿ, ಕಾಗದ ಪತ್ರ ಕೊಡುವುದಕ್ಕೆ ಎಲ್ಲರಿಗೂ ಅವಕಾಶವಿದೆ.

(ಗೊಂದಲ)

**ಡಾ: ಹೆಚ್.ಸಿ. ಮಹದೇವಪ್ಪ:–** ಬೇಡವೆಂದು ಹೇಳುವುದಿಲ್ಲವಲ್ಲ. ಈಗ ಕೊಟ್ಟಿದ್ದೀರಲ್ಲ, let it be enquired.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** ಇಲ್ಲಿ ಅನಾವಶ್ಯಕವಾಗಿ ಚರ್ಚೆ ಮಾಡುವ ಅಗತ್ಯವಿಲ್ಲ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** ಗೌರವಾನ್ವಿತ ಕುಮಾರಸ್ವಾಮಿಯವರು ಹೇಳಿರುವುದು ಸರಿಯಲ್ಲ.

(ಗೊಂದಲ)

**ಅಧ್ಯಕ್ಷರು:–** ಕಿತ್ತು ಹಾಕಿಸಿದ್ದೇವೆ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** ಅದನ್ನು ಕಡತದಿಂದ ತೆಗೆಯಬೇಕು ಎಂದು ಒತ್ತಾಯಿಸುತ್ತೇನೆ.

(ಗೊಂದಲ)

**ಅಧ್ಯಕ್ಷರು:–** ತೆಗೆದು ಹಾಕಿದ್ದೇನೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಕಡತದಿಂದ ತೆಗೆದು ಹಾಕುವಂಥ ಪದವನ್ನೇನೂ ಹೇಳಿಲ್ಲ.

(ಗೊಂದಲ)

**ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):-** ನೀವು ಒಬ್ಬ ಮುಖ್ಯಮಂತ್ರಿಯನ್ನು xxxxxx ಎಂದು ಹೇಳುವುದಕ್ಕಾಗುತ್ತದೆಯೇ?

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಯಾವ ಮುಖ್ಯಮಂತ್ರಿ xxxx ಎಂಬ ಪದ ಹೇಳಲಿಲ್ಲ ನಾನು. ನಾನು ಇಲ್ಲಿ ಅಂಥ ಪದಗಳನ್ನು ಉಪಯೋಗ ಮಾಡುವುದಿಲ್ಲ.

(ಗೊಂದಲ)

**ಶ್ರೀ ಡಿ.ಕೆ. ಶಿವಕುಮಾರ್:-** ಇನ್ನೇನು ನೀವು ಉಪಯೋಗಿಸಿದ್ದು? xxxx ಎಂದು ಹೇಳಿದಿರಿ ನೀವು.

(x x ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆಯಲಾಗಿದೆ)

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಏತಕ್ಕೆ ಹೇಳುತ್ತಿದ್ದೇನೆಂದರೆ. . . .

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಒಬ್ಬ member ಅನ್ನು suspend ಮಾಡಿದರು.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಸರ್ಕಾರ ಉತ್ತರ ಕೊಡಬೇಕು.

(ಗೊಂದಲ)

**ಅಧ್ಯಕ್ಷರು:-** ನೀವು ಹೇಳಿದ ಹಾಗೆ ಉತ್ತರ ಕೊಡಬೇಕು ಎನ್ನುವುದು ಕಡ್ಡಾಯ ಅಲ್ಲ. . .

(ಗೊಂದಲ)

**ಅಧ್ಯಕ್ಷರು:–** Clarifiction ಕೇಳಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** . . . .ಇವರ Advocatte General ಕೊಟ್ಟಿರತಕ್ಕಂಥ report ಏನಿದೆ. . . .

(ಗೊಂದಲ)

**ಅಧ್ಯಕ್ಷರು:–** ಇದೇನಿದು?

(ಗೊಂದಲ)

**ಅಧ್ಯಕ್ಷರು:–** Please resume.

(ಗೊಂದಲ)

**ಡಾ: ಹೆಚ್.ಸಿ. ಮಹದೇವಪ್ಪ:–** ದಾಖಲೆಗಳಿದ್ದರೆ Court ಗೆ ಹೋಗಲಿ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** ಅವರು ಉತ್ತರ ಕೊಡಲಿ. ಆಮೇಲೆ ಬೇಕಾದರೆ ಪ್ರಶ್ನೆ ಕೇಳಲಿ.

**ಅಧ್ಯಕ್ಷರು:–** ಆಮೇಲೆ ಹೇಳಲಿ.

(ಗೊಂದಲ)

**ಅಧ್ಯಕ್ಷರು:–** ಉತ್ತರ ಹೇಳಿ.

**ಶ್ರೀ ಡಿ.ಕೆ. ಶಿವಕುಮಾರ್:–** ಅವರು ಏನು ಬೇಕಾದರೂ ಮಾತನಾಡಲಿ. xxxx ನಿರ್ಧಾರ ಎಂದು ಹೇಳಿದರು. That has to be withdrawn. That's all.

(x x ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆಯಲಾಗಿದೆ)

**ಅಧ್ಯಕ್ಷರು:–** ತೆಗೆದುಹಾಕಿದ್ದೇನೆ.

(ಗೊಂದಲ)

**ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):–** ಅದು cabinet decision ಇದೆ. ಈ ರೀತಿ ಒಬ್ಬ ಮುಖ್ಯಮಂತ್ರಿಯಾಗಿದ್ದವರು, ಆ ರೀತಿ ಪದ ಬಳಸತಕ್ಕಂಥದ್ದು ಸರಿಯಲ್ಲ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** Withdraw ಮಾಡತಕ್ಕಂಥದ್ದಕ್ಕೇನೂ ಇಲ್ಲ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** Withdraw ಮಾಡತಕ್ಕಂಥ ಪ್ರಶ್ನೆ ಇಲ್ಲ. ನಾನು prove ಮಾಡುತ್ತೇನೆ.

(ಗೊಂದಲ)

**ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:–** ಅದನ್ನು ಕಡತದಿಂದ ತೆಗೆದುಹಾಕಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ನೀವು ತೆಗೆದುಕೊಂಡಂಥ ನಿರ್ಧಾರ ನಾನು prove ಮಾಡುತ್ತೇನೆ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** . . . .ವಾಪಸ್ ತೆಗೆಯುವ ಪ್ರಶ್ನೆ ಇಲ್ಲ.

(ಗೊಂದಲ)

**ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):-** ಇಲ್ಲೇನು prove ಮಾಡುವುದು?

(ಗೊಂದಲ)

**ಅಧ್ಯಕ್ಷರು:-** ಆಯಿತು ಬಿಡಿ, ಹೇಳಿ.

**ಶ್ರೀ ಸಿದ್ದರಾಮಯ್ಯ:-** ನಮ್ಮ ಸರ್ಕಾರ ಅತ್ಯಂತ ವಿವೇಚನೆಯಿಂದ ತೀರ್ಮಾನ ಮಾಡಿದೆ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು ಎನ್ನುವ ಕಾರಣಕ್ಕೋಸ್ಕರ ತೀರ್ಮಾನ ಮಾಡಿದ್ದೇವೆ. (ಗೊಂದಲ) I am not yielding

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಭ್ರಷ್ಟಾಚಾರ ನಿಲ್ಲಿಸಲಿಕ್ಕೆ ಲೋಕಾಯುಕ್ತದಲ್ಲಿ trap ಆಗಿರುವವರನ್ನು ಈಗ member ಮಾಡುವುದಕ್ಕೆ ಹೊರಟಿರುವುದು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಅದು ನೋಡೋಣ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಯಾರು ಲೋಕಾಯುಕ್ತದಲ್ಲಿ ಆಗಿದ್ದಾರೆ ಎನ್ನುವುದು ಗೊತ್ತಾಗಲಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನಾವು ಯಾವುದೇ ವಿಚಾರವನ್ನು ವಿವೇಚನೆ ಇಲ್ಲದೆ ಅದರ pros and cons ಅನ್ನು ಯೋಚನೆ ಮಾಡದೇ ಕಾನೂನನ್ನು ಬಿಟ್ಟು ಯಾವುದನ್ನೇ ಮಾಡಲಿಕ್ಕೆ ಹೋಗುವುದಿಲ್ಲ. ಕುಮಾರಸ್ವಾಮಿಯವರು ವೈಯಕ್ತಿಕವಾಗಿ ಅದನ್ನು ಬಹಳ ದೊಡ್ಡದಾಗಿ defend ಮಾಡುತ್ತಿದ್ದಾರೆ. ಮಾಡಲಿ, ನನ್ನದೇನೂ ತಕರಾರಿಲ್ಲ. ಆದರೆ, xxxxx ಮಾಡಿದ್ದೀರಿ ಎನ್ನುವಂಥ

ಪದ ಇದೆಯಲ್ಲ, ಅದು Parliamentary system ನಲ್ಲಿ ಬಳಸತಕ್ಕಂಥ ಪದ ಅಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನೀವು ಮುಖ್ಯಮಂತ್ರಿಯಾಗಿದ್ದವರು. ನಾನೂ ಕೂಡ ಅದನ್ನು ಹೇಳಬಹುದು. ಕುಮಾರಸ್ವಾಮಿಯವರಿಗೆ xxx ಇಲ್ಲವೆಂದು ಹೇಳಬಹುದು. xxxxx ಮಾತನಾಡುತ್ತಾರೆಂದು ಹೇಳಬಹುದು. ಅದನ್ನು ಬಳಸಬಾರದು.

(ಗೊಂದಲ)

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಎಲ್ಲಾ ಬಳಸಿ ಆಮೇಲೆ ಅದು ಬಳಸಬಾರದು ಎಂದು ನೀವು ಹೇಳಿದರೆ ಹೇಗೆ?

**ಶ್ರೀ ಕೆ.ಆರ್. ರಮೇಶ್‌ಕುಮಾರ್:-** ಇದೇ ಸದನದಲ್ಲಿ ಶಾಂತವೇರಿ ಗೋಪಾಲಗೌಡರವರು ನಿಜಲಿಂಗಪ್ಪರವರು ಮುಖ್ಯಮಂತ್ರಿಗಳಾಗಿದ್ದಾಗ ಮಾತನಾಡುತ್ತಾರೆ. ನಿಮ್ಮ ಸರ್ಕಾರವನ್ನು 'ಮುಂಡೇಮಕ್ಕಳ ಸರ್ಕಾರ' ಎಂದು ಅನ್ನಬೇಕು ಎನ್ನಿಸುತ್ತದೆ, ಹಾಗೆ ಅನ್ನುವುದಕ್ಕಾಗುತ್ತದೆಯೇ? ಆಗುವುದಿಲ್ಲ. ಆದರೆ, ಮುತ್ತೈದೆಯರಿಗೆ ಇಂಥ ಮಕ್ಕಳು ಇರುತ್ತಾರೇನ್ರಿ? ಎಂದು ಹೇಳುತ್ತಾರೆ. ಕುಮಾರಸ್ವಾಮಿಯವರಿಗೆ ನಾನು ಏನು ಹೇಳುವುದು ಎಂದರೆ, ಇದು xxxx ಎಂದು ಹೇಳುವ ಬದಲು ಇದು ವಿವೇಚನೆಯುತ ನಿರ್ಣಯವೇ ನೀವೇ ಹೇಳಿ ಎಂದು ಹೇಳಬಹುದಾಗಿತ್ತು. ಸಂಸದೀಯ ಭಾಷೆ ಅಷ್ಟೇ.

(x x ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆಯಲಾಗಿದೆ)

**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಮುಖ್ಯಮಂತ್ರಿಯವರೆ, ತಾವು KPSC HOTA Committee report ಬಗ್ಗೆ ಪ್ರಸ್ತಾಪ ಮಾಡಿದಿರಿ.

ಶ್ರೀ ಸಿದ್ದರಾಮಯ್ಯ:- ಬಹುತೇಕ implement ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ತಮ್ಮ ಸರ್ಕಾರ ಬಂದಮೇಲೆ ಅದು ನೇಮಕವಾದಂಥದ್ದು, KPSC ನೇಮಕಾತಿಯಲ್ಲಿ ಬಹಳಷ್ಟು ಹಗರಣ, interview ನಲ್ಲಿ, ಎಂದು ಹೇಳಿದರಿಲ್ಲ, ಅದಾದಮೇಲೆ Hota Committee ಮಾಡಿದಿರಿ. ತಮ್ಮ ಮುಂದೆ Hota Committee report ಇದೆ. Search Committee and Panel, selection of the Member and Chairman, ಯಾರನ್ನು ಅಲ್ಲಿ member ಮಾಡುತ್ತೀರಿ, ಯಾರನ್ನು Chairman ಮಾಡುತ್ತೀರಿ, ಅದಕ್ಕೆ guidelines fix ಮಾಡಬೇಕು, Chief Secretary ಅಧ್ಯಕ್ಷತೆಯಲ್ಲಿ search committee ಮಾಡಬೇಕೆನ್ನುವಂಥದ್ದು ಇದೆ. ಅದನ್ನು ಬಿಟ್ಟು ಉಳಿದೆಲ್ಲವನ್ನೂ. ನೀವು ಒಪ್ಪಿಕೊಂಡಿರಿ. ಆದರೆ, ಅದನ್ನು ಮಾತ್ರ ಒಪ್ಪಿಕೊಳ್ಳಲಿಲ್ಲ. Guidelines ಮಾಡಿ ಎಂದು ಇವತ್ತು Supreme Court, High Court ruling ಇದೆ. ಆ ಮಾರ್ಗದರ್ಶಿಗಳನ್ನು ನೀವು follow ಮಾಡದಿದ್ದರೆ ಮತ್ತೆ ನೀವು ನೇಮಕಾತಿ ಮಾಡಲಿಕ್ಕೆ ಹೋಗುತ್ತೀರಲ್ಲ, ಅಧ್ಯಕ್ಷರನ್ನೋ, ಮತ್ತೊಬ್ಬರನ್ನೋ ಆಗೇನಾಗುತ್ತದೆಂದರೆ, ಭ್ರಷ್ಟಾಚಾರದ್ದು ಹಿಂದೆ ಏನು ಪ್ರಕರಣಗಳಾದವು ಅದೇ repeat ಆಗುತ್ತದೆ ಅಷ್ಟೇ. ಅದಕ್ಕೆ ಪ್ರಾಮಾಣಿಕತೆ ಏನು? ನೀವೇ ನೇಮಕ ಮಾಡಿದಂಥ Hota committee report 100% ಅನುಷ್ಠಾನ ಮಾಡಿ. ಆಗ ನಾವು ನಿಮ್ಮ ಪ್ರಾಮಾಣಿಕತೆ ಬಗ್ಗೆ ಒಪ್ಪಬಹುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- KPSC exam ಬಗ್ಗೆ Para No 24 ರಲ್ಲಿ ಏನು ಹೇಳುತ್ತಾರೆ? ನಿಮ್ಮ Hota Committee ಯವರು ನಿಮ್ಮ Chief Secretary ಗೆ ಕೊಟ್ಟಿರತಕ್ಕಂಥ report ಏನಿದೆ, Para No. 24 ರಲ್ಲಿ ಹೇಳುತ್ತಾರೆ, ನಿಮ್ಮ question paper ಗಳನ್ನು ಆ barcode system ಏನು ತಂದರು, ಅದು ತಂದಮೇಲೆ ಯಾವುದೇ ಕಾರಣಕ್ಕೂ question paper ಗಳನ್ನು ಯಾರೂ trace out ಮಾಡುವುದಕ್ಕಾಗುವುದಿಲ್ಲ ಎಂದು ಅವರೇ report ಕೊಟ್ಟುಕೊಂಡಿದ್ದಾರೆ. ಅದಕ್ಕಿಂತ ಬೇಕಾ ನಿಮಗೆ report. ಯಾರೋ ಕೊಟ್ಟು ಬಿಟ್ಟರಂತೆ COD ಯವರು, ನ್ಯಾಯಯುತವಾಗಿ ಭ್ರಷ್ಟಾಚಾರ ನಿಲ್ಲಿಸಲಿಕ್ಕೆ ಇದನ್ನು ನಿಲ್ಲಿಸಿ ಬಿಟ್ಟಿದ್ದರಂತೆ.

ಶ್ರೀ ಸಿದ್ದರಾಮಯ್ಯ:- ಹೌದು, ನಿಲ್ಲಿಸಿಯೇ ನಿಲ್ಲಿಸುತ್ತೇವೆ.

(ಗೊಂದಲ)

ಶ್ರೀ **ಹೆಚ್.ಡಿ. ಕುಮಾರಸ್ವಾಮಿ:-** ನಿಲ್ಲಿಸಿಕೊಳ್ಳಿ, ನಿಮಗೆ ಅಧಿಕಾರ ಕೊಟ್ಟಿದ್ದಾರೆ, ನಡೆಸಿ, ನೋಡೋಣ, ಎಷ್ಟು ದಿವಸ ನಡೆಸುತ್ತೀರಿ?

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, Hota Committee ವರದಿ ಬಹುತೇಕವಾಗಿ ನಾವು ಎಲ್ಲವನ್ನೂ ಕೂಡ ಜಾರಿ ಮಾಡಿದ್ದೇವೆ. ಆ ವರದಿಯನ್ನು ಈಗಾಗಲೇ ಜಾರಿ ಕೊಟ್ಟಾಗಿದೆ. ಈಗಾಗಲೇ ಲೋಕಸೇವಾ ಆಯೋಗದಲ್ಲಿರತಕ್ಕಂಥ ಕೆಲವು ಸದಸ್ಯರುಗಳೇನಿದ್ದಾರೆ, ಅವರ ಮೇಲೂ ಕೂಡ ನಾವು ಕ್ರಮ ತೆಗೆದುಕೊಳ್ಳಬೇಕೆನ್ನುವಂಥದ್ದು ಪರಿಶೀಲನೆಯಲ್ಲಿದೆ. ಈಗಾಗಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಪಟ್ಟಿ ತಯಾರು ಮಾಡಿ ರಾಜ್ಯಪಾಲರಿಗೆ ಕೊಟ್ಟಿದ್ದೇವೆ, ಅದು ಇನ್ನು ಇತ್ಯರ್ಥವಾಗಿಲ್ಲ. ಅದು ಇತ್ಯರ್ಥವಾದ ಮೇಲೆ ನಾವು ಮುಂದಿನ Gazetted Probationers ಆಯ್ಕೆ ಮಾಡುವಂಥ ಕೆಲಸ ಮಾಡುತ್ತೇವೆ ಎನ್ನುವಂಥ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾವು CID ವರದಿಯಾಧಾರದ ಮೇಲೆ, ಅದನ್ನು ಗಮನದಲ್ಲಿಟ್ಟುಕೊಂಡು Advocate General ರವರ ಅಭಿಪ್ರಾಯ, ಕಾನೂನು ಇಲಾಖೆಯ ಅಭಿಪ್ರಾಯ, ಆ ಎಲ್ಲಾ ಅಭಿಪ್ರಾಯಗಳನ್ನು ತೆಗೆದುಕೊಂಡೇ 362 ಜನ ಏನು Gazetted Probationers ಇದ್ದರು, ಆ ಪಟ್ಟಿಯನ್ನು ನಾವು ರದ್ದು ಮಾಡಿದ್ದೇವೆ. Reservation ಏನೂ ಬದಲಾವಣೆಯಾಗುವುದಿಲ್ಲ. ಹೊಸದಾಗಿ ಆಯ್ಕೆಯಾದ ಮೇಲೂ ಕೂಡ ಅದೇ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ, ಅಂಗವಿಕಲರಿಗೆ, ಆ reservation ಮುಂದುವರೆಯುತ್ತದೆ. ಅಲ್ಲಿ ಲೋಕಸೇವ ಆಯೋಗದಲ್ಲಿ ನಡೆಯತಕ್ಕಂಥ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕೆನ್ನುವ ಸದುದ್ದೇಶದಿಂದಲೇ ಈ ನಿರ್ಣಯ ಮಾಡಿದ್ದು ಎನ್ನುವಂಥದ್ದು ಸ್ಪಷ್ಟಪಡಿಸಲಿಕ್ಕೆ ಬಯಸುತ್ತೇನೆ. ಅಲ್ಲಿರತಕ್ಕಂಥ ಕೆ.ಆರ್. ಸುಂದರ್ ಎನ್ನತಕ್ಕಂಥ IAS ನವರಿದ್ದರು. ಅವರು ಕಾರ್ಯದರ್ಶಿ..

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ನಾವು ಕೇಳತಕ್ಕಂಥದ್ದು, ಒಂದು ನಿಮಿಷ ಮಾನ್ಯ ಮುಖ್ಯಮಂತ್ರಿಗಳೆ. ಈಗ ಭ್ರಷ್ಟಾಚಾರ ನಿಲ್ಲಿಸುವುದಕ್ಕೆ ನಾವು ಸಂಪೂರ್ಣ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ಭ್ರಷ್ಟಾಚಾರ ನಿಲ್ಲಿಸಬೇಡಿ ಎಂದು ಹೇಳುವುದಿಲ್ಲ. ಭ್ರಷ್ಟಾಚಾರ ನಿಲ್ಲಿಸಲಿಕ್ಕೆ ಆ 362 ಜನ ತೆಗೆದಿದ್ದೇವೆಂದು ಹೇಳುತ್ತಿದ್ದೀರಲ್ಲ, ನಿಮ್ಮ CID report ಕೊಟ್ಟಿರುವ 10 charges ನಲ್ಲಿ 9 charges ನಿಮ್ಮ Secretary ತಪ್ಪುಗಳು. ನಿಮ್ಮ Secretary ಗೆ postings ಎಲ್ಲಿ ಕೊಟ್ಟಿದ್ದೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಅವನನ್ನು ಅಲ್ಲಿಂದ ತೆಗೆದು ಹಾಕಿದ್ದೇವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ, ಅವರ ಮೇಲೆ notice ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಎಲ್ಲಿ ತೆಗೆದು ಹಾಕಿದ್ದೀರಿ? ಏನು action ತೆಗೆದುಕೊಂಡಿದ್ದೀರಿ? ಇಲ್ಲಿ ನಿಮ್ಮ Hota Committee ಯಲ್ಲಿ ಹೇಳಿದ್ದೀರಲ್ಲ. ಭ್ರಷ್ಟಾಚಾರದ ಬಗ್ಗೆ ನಿಮ್ಮ COD ಯವರು report ಕೊಡುತ್ತಾರಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಕುಮಾರಸ್ವಾಮಿಯವರೆ, ಅದನ್ನೆಲ್ಲಾ ಹೇಳಿದಿರಿ ಬಿಡಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಹೇಳಿದ್ದೇವೆ. ಇದಕ್ಕೆ ಉತ್ತರ ಕೊಡಿ.

(ಗೊಂದಲ)

ಅಧ್ಯಕ್ಷರು:- ರೀ ಕುಮಾರಸ್ವಾಮಿ ಬಿಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನೀವು ಅದನ್ನು ದೀರ್ಘವಾಗಿ ಹೇಳಿದ್ದೀರಿ ಬಿಡಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- COD report ನಲ್ಲಿ ಏನಿದೆ?

ಅಧ್ಯಕ್ಷರು:- ನೋಡಿ, ನೀವೇನು ಹೇಳಬೇಕೋ ಹೇಳಿದಿರಿ, ಅವರು ಏನು ತೀರ್ಮಾನ ಮಾಡಿದ್ದಾರೆ, ಅವರಿಗೆ ಏನು ಅಧಿಕಾರ ಇದೆ, ಅದರಂತೆ ಅವರು ತೀರ್ಮಾನ ತೆಗೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮುಖ್ಯಮಂತ್ರಿಗಳಿಂದ ಈ ರೀತಿಯ ಉತ್ತರ ಬಯಸಿರಲಿಲ್ಲ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ:- ಒಂದು ವ್ಯವಸ್ಥೆಯನ್ನು streamline ಮಾಡಬೇಕಲ್ಲ?

(ಗೊಂದಲ)

ಅಧ್ಯಕ್ಷರು:- ರೀ ಮಹದೇವಪ್ಪನವರೆ..

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಸುಳ್ಳು certificate ಕೊಟ್ಟವರನ್ನೆಲ್ಲಾ member ಮಾಡುವುದು. ಯಾವುದನ್ನು ನೀವು ಉಳಿಸುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಯಾರ್ಯಾರ ಕಾಲದಲ್ಲಿ ಯಾರ್ಯಾರನ್ನು ಮಾಡಿದ್ದಾರೆಂದು ಇಲ್ಲಿ ಚರ್ಚೆ ಮಾಡೋಣವೇ? ಯಾವ್ಯಾವ ಕಾರಣಕ್ಕೆ ಯಾರ್ಯಾರನ್ನು ಮಾಡಿದ್ದಾರೆಂದು ಇಲ್ಲಿ ಚರ್ಚೆ ಮಾಡೋಣವೇ?

**ಶ್ರೀ ಜಗದೀಶ ಶೆಟ್ಟರ್:–** (ಗೊಂದಲ) ... Committee report ಚರ್ಚೆ ಮಾಡುವುದಕ್ಕೆ ತಯಾರಿಲ್ಲ.

(ಗೊಂದಲ)

**ಅಧ್ಯಕ್ಷರು:–** ರೀ ಶೆಟ್ಟರೆ, ಇದೇನಿದು? ಸರ್ಕಾರದವರು ಉತ್ತರ ಹೇಳಲಿಕ್ಕೆ ಬಿಡಿ.

**ಶ್ರೀ ಸಿದ್ದರಾಮಯ್ಯ:–** ಈಗ ಅಲ್ಲಿ ಕೊಟ್ಟಿದ್ದೇವೆ, scrutiny ಆಗುತ್ತಿದೆ ನೋಡೋಣ. ನಮ್ಮ ವಿವೇಚನೆಯಲ್ಲಿ ಅವರ ಮೇಲೆ ಯಾವುದೇ ಆಪಾದನೆಗಳಿಲ್ಲ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಅಲ್ಲಿ ಏನು ಹೇಳಿದರು, ಇಡೀ ಚರಿತ್ರೆಯನ್ನು ಹೇಳಿದ್ದಾರೆ.

**ಶ್ರೀ ಜಗದೀಶ ಶೆಟ್ಟರ್:–** ಈಗ tentative list ಅನ್ನು ಅವರಿಗೆ ಕಳುಹಿಸಿದ್ದೀರಲ್ಲಾ...

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನಮಗೆ ಇರತಕ್ಕಂಥ information ಪ್ರಕಾರ ನಾವು ಸಂಗ್ರಹಿಸಿರುವ ಮಾಹಿತಿಯಲ್ಲಿ ಅವರ ಮೇಲೆ ಯಾವುದೇ ಆಪಾದನೆಗಳಿಲ್ಲ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಬೀದಿ ಬೀದಿಯಲ್ಲಿ ಆ member ಗಳ ಚರಿತ್ರೆ ಚರ್ಚೆಯಾಗುತ್ತಿದೆ, ನೀವು Governor ಗೆ ಕಳುಹಿಸಿರುವ member ಗಳ list ಬಗ್ಗೆ ಬೀದಿ ಬೀದಿಯಲ್ಲಿ ಚರ್ಚೆ ನಡೆಯುತ್ತಿದೆ.

**ಅಧ್ಯಕ್ಷರು:–** ರೀ ಕುಮಾರಸ್ವಾಮಿ. Please.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಆ 362 ಜನ ಹುಡುಗರನ್ನು ತೆಗೆದು ಭ್ರಷ್ಟಾಚಾರ..

ಶ್ರೀ ಜಗದೀಶ ಶೆಟ್ಟರ್:- ಆ Hota Committee report, ಆ Search Committee ಮಾಡುವುದಕ್ಕೆ ತಯಾರಿಲ್ಲ. Governor ಗೆ tentative ವ್ಯಕ್ತಿಗಳನ್ನು members ಮಾಡಲಿಕ್ಕೆ ಕಳುಹಿಸಿದ್ದೀರಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನೀವು ತೆಗೆದುಕೊಂಡಿರುವ ನಿರ್ಧಾರಗಳು..

ಶ್ರೀ ಸಿದ್ದರಾಮಯ್ಯ:- ನೀವು ಮಂಗಳಾ ಶ್ರೀಧರ ನ್ನು ಮಾಡಿದ್ದೀರಲ್ಲ ಯಾರು ಮಾಡಿದ್ದು?

ಶ್ರೀ ಜಗದೀಶ ಶೆಟ್ಟರ್:- ಯಾವುದು?

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಂಗಳಾ ಶ್ರೀಧರ್.

ಶ್ರೀ ಜಗದೀಶ ಶೆಟ್ಟರ್:- ಆಯಿತು, ನೀವು ಮತ್ತೆ ಅಂಥವರನ್ನು ಮಾಡುವುದಕ್ಕೆ ಹೊರಟಿದ್ದೀರಾ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ದುಡ್ಡಿನದು prove ಆಗಿದೆಯೇ?

ಶ್ರೀ ಸಿದ್ದರಾಮಯ್ಯ:- ಈಗ ಅವರು suspen ಆಗಿದ್ದಾರಲ್ಲ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:- ಅಂಥ tentative ವ್ಯಕ್ತಿಗಳನ್ನು ಮಾಡಿಸಲಿಕ್ಕೆ ಹೊರಟಿದ್ದೀರಾ? Hota committee ಪ್ರಕಾರ search committee ಮಾಡಿ.

**ಶ್ರೀ ಸಿದ್ದರಾಮಯ್ಯ:–** Governor ಅವರನ್ನು suspend ಮಾಡಿದ್ದಾರಲ್ಲ. ನೀವು ನಮಗೆ ಪಾಠ ಹೇಳುವುದಕ್ಕೆ ಹೊರಟಿದ್ದೀರಿ.

**ಶ್ರೀ ಜಗದೀಶ ಶೆಟ್ಟರ್:–** Supreme Court ನ direction ಇದೆ. High Court ನವರು observe ಮಾಡಿದ್ದಾರೆ. ಮಾರ್ಗಸೂಚಿಗಳನ್ನು ಮಾಡಿ ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ನೀವು ಮಾಡಿದ್ದರಲ್ಲ, ಮಂಗಳಾ ಶ್ರೀಧರ್‌ನ್ನು ಯಾರು ಮಾಡಿದವರು?

(ಗೊಂದಲ)

**ಶ್ರೀ ಜಗದೀಶ ಶೆಟ್ಟರ್:–** Hota Committee ಪ್ರಕಾರ Search Committee ಮಾಡಿ, ಇವರು Search Committee ಮಾಡುವುದಕ್ಕೆ ತಯಾರಿಲ್ಲ. ಅದು ಭ್ರಷ್ಟಾಚಾರ ತಡೆಯುತ್ತದೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಜಗದೀಶ ಶೆಟ್ಟರ್‌ರವರೆ, ಒಂದು ನಿಮಿಷ. ಈಗ ಇವರು ಮಂಗಳಾ ಶ್ರೀಧರ್ ಎಂದು ಹೆಸರು ಹೇಳಿದರಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಒಂದು committee ಎಲ್ಲಾ report ಗಳನ್ನು ಒಪ್ಪಬೇಕೆಂದೇನೂ ಇಲ್ಲ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ನಿಮ್ಮ COD ಯವರು ಯಾವುದು prove ಮಾಡಿದ್ದಾರೆ. Proof ಎಲ್ಲಿದೆ? ದುಡ್ಡು ತೆಗೆದುಕೊಂಡಿರುವುದಕ್ಕೆ ಏನು prove ಮಾಡಿದಿರಿ?

(ಗೊಂದಲ)

**ಅಧ್ಯಕ್ಷರು:–** ರೀ ಕುಮಾರಸ್ವಾಮಿಯವರೆ, ಇದು ಚರ್ಚೆಯಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಯಾರೋ ಕೊಟ್ಟರಲ್ಲ Assistant Commissioner ದ್ದು ತಂದು ಕಡತ ಇಲ್ಲಿ ಇಟ್ಟರು, ಇಲ್ಲಿಯವರೆಗೆ action ತೆಗೆದುಕೊಂಡಿದ್ದೀರಾ?

ಶ್ರೀ ಸಿದ್ದರಾಮಯ್ಯ:- ಯಾರು?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- Assistant Commissioner ಒಬ್ಬ ಮಾಡಿ ಹೋಗಿದ್ದಾನಲ್ಲ, ಅಂತವರ ಮಗಳು ಅರ್ಜಿ ಕೊಟ್ಟಳು ಎಂದು 362 ಜನರ ಜೀವ ಕಿತ್ತುಕೊಳ್ಳುವುದಕ್ಕೆ ಹೋದರಲ್ಲ, ಅವರು ಕೊಟ್ಟಿರತಕ್ಕಂಥ background ನಿಮಗೆ ಗೊತ್ತೆ?

ಶ್ರೀ ಸಿದ್ದರಾಮಯ್ಯ:- ಅವರು ಕೊಟ್ಟಿರುವ ವರದಿ ಮೇಲೂ action ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ರಾಮನಗರದಲ್ಲಿ ಅವರು ಏನು ಮಾಡಿದ್ದಾರೆ, ಆ Assistant Commissioner ಕೊಟ್ಟ ವರದಿಯ ಮೇಲೆ ನನ್ನ ಮೇಲೆ ತನಿಖೆ ನಡೆಸುತ್ತೀರಾ?

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಅವರ್‍ಯಾರು ಅಭ್ಯರ್ಥಿ ತಂದೆ ಸಿದ್ದಪ್ಪ ಎನ್ನುವವರು ಏನು ಹೇಳಿದ್ದಾರೆ ಅವರು ಕೊಟ್ಟಿರುವ ವರದಿಯ ಮೇಲೂ ಕ್ರಮ ತೆಗೆದುಕೊಳ್ಳುತ್ತೇವೆ. ಸಿದ್ದಪ್ಪ ಕೊಟ್ಟಿರುವ ವರದಿಯ ಮೇಲೂ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನನ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಅವನು ಮಾಡಿರತಕ್ಕಂಥದ್ದರ ಬಗ್ಗೆ ನಿಮಗೆ ಒಂದು ಲಾರಿ ಲೋಡು ದಾಖಲೆ ಕೊಡುತ್ತೇನೆ. ಅಂಥ ಕುಟುಂಬ ರಕ್ಷಣೆ ಮಾಡಲಿಕ್ಕೆ ನೀವು..

(ಗೊಂದಲ)

**ಅಧ್ಯಕ್ಷರು:-** ರೀ ಕುಮಾರಸ್ವಾಮಿಯವರೆ, ಇದೇನಿದು ಅವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ ಮಾರಾಯ್ರೆ. ಇದೇನಿದು?

**ಶ್ರೀ ಆರ್.ವಿ. ದೇಶಪಾಂಡೆ:-** ಅವರು ಉತ್ತರ ಮುಗಿಸಬೇಕೋ ಬೇಡವೋ, ಗೌರವಾನ್ವಿತ ಕುಮಾರಸ್ವಾಮಿಯವರೆ, ಮುಖ್ಯವಾದ ಮಾಹಿತಿಗಳಿರಬಹುದು. ಅವರು ಮಾತನಾಡುವಾಗ ಹೇಳಲಿ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ದುಡ್ಡು ಹೊಡೆದಿರುವುದಕ್ಕೆ proof ಎಲ್ಲಿದೆ?

(ಗೊಂದಲ)

**HON'BLE SPEAKER:-** Please resume. I don't like this. There must be a limit for all these things.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ದುಡ್ಡು ಹೊಡೆದಿರುವುದಕ್ಕೆ ಇವರ ಹತ್ತಿರ proof ಎಲ್ಲಿದೆ?

**ಶ್ರೀ ಸಿದ್ದರಾಮಯ್ಯ:-** ಅದು ನಿಮ್ಮ ಪ್ರಕಾರ. ನಮ್ಮ ಪ್ರಕಾರ ಅವರು ದುಡ್ಡು ಹೊಡೆದಿರುವುದಕ್ಕೆ ಬೇರೆ ಬೇರೆ ಸಬೂಬುಗಳಿವೆ. ಅದಕ್ಕೋಸ್ಕರ ನಾವು ಅದನ್ನು ರದ್ದು ಮಾಡಿದ್ದೇವೆ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ನಿಮ್ಮ COD ಪ್ರಕಾರ.. ದುಡ್ಡು ಹೊಡೆದಿರುವುದಕ್ಕೆ proof ಅದರಲ್ಲಿ ಇಲ್ಲ. ಎಲ್ಲೂ prove ಮಾಡಲಿಕ್ಕೆ ಆಗಿಲ್ಲ.

**ಶ್ರೀ ಸಿದ್ದರಾಮಯ್ಯ:-** ನೀವು ಹೇಳುತ್ತಿರುವುದು. ಹಾಗಾದರೆ ನೀವು ಅಲ್ಲಿ ಹೋಗಿ ಸಾಕ್ಷಿ ಕೊಡಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ನಾನು ಹೇಳುತ್ತಿಲ್ಲ, ನಂದಲ್ಲ ಅದು COD report.

**ಶ್ರೀ ಸಿದ್ದರಾಮಯ್ಯ:-** You go and give evidence. Court ನಲ್ಲಿ ಹೋಗಿ evidence ಕೊಡಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** KAT ಯಲ್ಲಿ 6 ತಿಂಗಳು ಎಳೆದು, ನಿಮ್ಮ ಸರ್ಕಾರಕ್ಕೆ ನಿಮ್ಮ advocate general ಗೆ ದಾಖಲೆ ಕೊಡಲಿಕ್ಕೆ ಯೋಗ್ಯತೆ ಇಲ್ಲದೆ ಮುಂದಕ್ಕೆ ಹಾಕಿಸಿಕೊಂಡಿದ್ದೀರಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನಿಮ್ಮ ಹತ್ತಿರ ದಾಖಲಾತಿ ಇದ್ದರೆ ಅಲ್ಲಿ ಹೋಗಿ ಕೊಡಿ. ಸಾಕ್ಷಿ ಕೊಡಿ. Go and become a witness there. ಅಲ್ಲಿಗೆ ನೀವು witness ಆಗಿ ಹೋಗಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಅಲ್ಲಿ case admit ಮಾಡಿ..

**ಶ್ರೀ ಸಿದ್ದರಾಮಯ್ಯ:-** ನೀವು ಅಲ್ಲಿಗೆ ಹೋಗಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಇಲ್ಲಿ ನಡೆಸಿರುವ ಕುತಂತ್ರ ರಾಜಕಾರಣ.

**ಶ್ರೀ ಸಿದ್ದರಾಮಯ್ಯ:-** Witness ಆಗಿ ಅಲ್ಲಿಗೆ ಹೋಗಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಆಯಿತು, I will fight for those innocent people.

**SRI SIDDARAMAIAH:-** You fight it out. Who cares for it?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಾನು ನ್ಯಾಯಕ್ಕೋಸ್ಕರ ಹೋರಾಟ ಮಾಡುವುದು.

**SRI SIDDARAMAIAH:-** We will not care.

(ಗೊಂದಲ)

ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ:- ಸನ್ಮಾನ್ಯ ಅಧ್ಯಕ್ಷರೆ, ವೈಯಕ್ತಿಕವಾದ ವಿಚಾರಗಳನ್ನು ಕೇಳಲಿಕ್ಕಾಗಿಯೇ ನ್ಯಾಯಾಲಯ ಇದೆ, ಬೇಕಿದ್ದರೆ ಅಲ್ಲಿಗೆ ಹೋಗಲಿ. ಇಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿ ಮಾಡಿ ನಮ್ಮನ್ನೆಲ್ಲರನ್ನು.. ಅವರಿಂದ ಮೊದಲು reply ಕೊಡಿಸಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇದು ವೈಯಕ್ತಿಕ ವಿಚಾರ ಅಲ್ಲ.

**SRI SIDDARAMAIAH:-** It is your opinion.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- 362 ಜನ ಹುಡುಗಗರ ಭವಿಷ್ಯದ ಪ್ರಶ್ನೆ.

**SRI SIDDARAMAIAH:-** It is his opinion.

ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ:- ಅದರ ಜೊತೆ..

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಕೋರ್ಟಿಗೆ ಹೋಗಿ ಸಾಕ್ಷ್ಯ ಕೊಡಲಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- COD report ಇಡಿಸಿ.

(ಗೊಂದಲ)

**ಅಧ್ಯಕ್ಷರು:-** ನೋಡ್ರಿ ಕುಮಾರಸ್ವಾಮಿಯವರೆ, ನೀವು ಒಂದು ಸಲಹೆ ಕೊಡಬಹುದು, ಒಪ್ಪುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟಂಥ ವಿಚಾರ. ಸರ್ಕಾರ ನಡೆಸಿದಂಥವರು ನೀವೂ ಇದ್ದೀರಿ, ಅವರೂ ಇದ್ದಾರೆ, ಇವರೂ ಇದ್ದಾರೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ವಿಧಾನ ಸೌಧದಲ್ಲಿ ಭ್ರಷ್ಟಾಚಾರ ನಿಲ್ಲಿಸಿ ಏನು ತೊಳೆಯುತ್ತೀದ್ದೀರಿ, ನೋಡುತ್ತಿದ್ದೇವೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಓಹೋ! ನಿಮ್ಮ ಕಾಲದಲ್ಲಿ ಎಲ್ಲಾ ತೊಳೆದು ಬಿಟ್ಟಿದ್ದೀರಿ. ನಿಮ್ಮ ಕಾಲದಲ್ಲಿ ಭ್ರಷ್ಟಾಚಾರ ಇರಲಿಲ್ಲವೇ?

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ನಾವು ಭ್ರಷ್ಟಾಚಾರ ಇರಲಿಲ್ಲವೆಂದು ಹೇಳಿಲ್ಲ, ನಾವು ಹರಿಶ್ಚಂದ್ರರು ಎಂದು ಹೇಳಿಲ್ಲ. ಪ್ರಾಮಾಣಿಕ ದಕ್ಷ ಸರಕಾರ ಕೊಡುತ್ತೇವೆಂದು ಹೇಳಿರುವುದು ನೀವು.

**ಶ್ರೀ ಸಿದ್ದರಾಮಯ್ಯ:-** ಅದೆಲ್ಲಾ ನಿಮ್ಮ ಕಾಲದಲ್ಲಿ ಆಗಿರುವುದು.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:-** ಚರ್ಚೆ ಎಲ್ಲಿಂದ ಎಲ್ಲಿಗೋ ಹೋಗುತ್ತಿದೆ, ನಾನೇನು ಹೇಳುತ್ತೇನೆಂದರೆ, ಸರಕಾರ ತನ್ನ ವಿವೇಚನೆಯಿಂದ ನಿರ್ಣಯ ಮಾಡಿದೆ. ಅವರಿಗೆ ಸಲಹೆ ಕೊಡುವುದಕ್ಕೆ ಅಧಿಕಾರ ಇದೆ. ಹೀಗೆ ಮಾಡಿ ಎಂದು ಸರಕಾರಕ್ಕೆ ಹೇಳುವ ಅಧಿಕಾರವಿಲ್ಲ. ಒಂದು ನಿರ್ಣಯ ನಾವು ಮಾಡಿದ್ದೇವೆ. Court ಗೆ ಹೋಗಿದ್ದಾರೆ, ಅವರು ಅಲ್ಲಿ ಹೋಗಿ challenge ಮಾಡಬಹುದಲ್ಲ.

**ಅಧ್ಯಕ್ಷರು:-** ರೀ ಕುಮಾರಸ್ವಾಮಿ ಇಲ್ಲಿ ಕೇಳಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- COD report ಇಲ್ಲಿ ಇಡಲಿ.

ಅಧ್ಯಕ್ಷರು:- (ಗೊಂದಲ)..ನೀವು ಹೇಳಿದ ಹಾಗೆ ಕೇಳುವುದಕ್ಕೆ ಆಗುತ್ತದೆಯೇ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಸದನದ ಮುಂದೆ ಇಡಿಸಿ, ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಚರ್ಚೆ ಮಾಡಲಿಕ್ಕೆ ಅದು ಇದೆ. ನಾನು ಬಾಯಿ ಮುಚ್ಚಿಕೊಂಡು ಹೋಗಲಿಕ್ಕೆ ಇಲ್ಲಿಗೆ ಬಂದಿಲ್ಲ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಭ್ರಷ್ಟಾಚಾರ ಸಮರ್ಥನೆ ಮಾಡತಕ್ಕಂಥದ್ದು ಅದು opposition ನಿಂದ. ಎಂಥ ವಿಪರ್ಯಾಸ ಇದು!

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಸದನದಲ್ಲಿ ಚರ್ಚೆಯಾಗಲಿ.

**SRI SIDDARAMAIAH:-** You can't dictate the Government. You can gie only suggestions.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಾನು dictate ಮಾಡುತ್ತಿಲ್ಲ. ಧ್ವನಿ ಇಲ್ಲದವರ ಪರವಾಗಿ ಧ್ವನಿ ಎತ್ತಿದ್ದೇನೆ ಅಷ್ಟೆ.

(ಗೊಂದಲ)

**SRI SIDDARAMAIAH:-** It is for the government to accept or reject.

**ಅಧ್ಯಕ್ಷರು:-** ನಿಮಗೆ ತೃಪ್ತಿಯಾಗದೆ ಹೋದರೆ ಬೇರೆ ರೂಪದಲ್ಲಿ ತನ್ನಿ. ಬಿಡ್ರಿ. No, No.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಇಲ್ಲಿ selection of 197 law officials, ನಿಮ್ಮ ಬಂಡವಾಳ ಇಲ್ಲಿದೆ.

**ಅಧ್ಯಕ್ಷರು:-** Please, no no.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:-** (ಗೊಂದಲ).. join the litigation, ಸರ್ಕಾರ ನಿರ್ಣಯ ಮಾಡಿದೆ. ನಿಮ್ಮ ಸರ್ಕಾರ ಇದ್ದಾಗ ನೀವು ನಿರ್ಣಯ ಮಾಡಿದಿರಿ. ನಾವು ಹೇಳಿರಬಹುದು. ನೀವು ಕೇಳಿರಬಹುದು, ಕೇಳದೇ ಇರಬಹುದು, It is going on in the court, if you are not satisfied, you can try before the Court.

(ಗೊಂದಲ)

**ಅಧ್ಯಕ್ಷರು:-** ನೀವು ಬೇರೆ ರೂಪದಲ್ಲಿ ತನ್ನಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಈ ನಿರ್ಣಯದ ಮೇಲೆ ತರದೆ ಇನ್ನ್ಯಾವುದರ ಮೇಲೆ ತರಬೇಕು ಹೇಳಿ.

**ಅಧ್ಯಕ್ಷರು:-** ನೋಡಿ ನಿಮಗೆ ಒಂದು ಮಾತು ಹೇಳುತ್ತೇನೆ. ಉತ್ತರ ಕೊಡುವುದಕ್ಕೆ ಅವಕಾಶ ಕೊಡ್ರಿ. ನಿಮ್ಮದೇನಾದರೂ ಇದ್ದರೆ ಕೊನೆಯಲ್ಲಿ ಕೇಳಿ, ಇಲ್ಲ ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಾವು ನಮ್ಮ ವಿವೇಚನೆಯಲ್ಲಿ ಒಂದು ತೀರ್ಮಾನ ಮಾಡಿದ್ದೇವೆ. ಅದು ಕಾನೂನು ರೀತಿ ಮಾಡಿದ್ದೇವೆ. Advocate general, law department opinion ತೆಗೆದುಕೊಂಡು ಮಾಡಿದ್ದೇವೆ. ಯಾರಿಗೆ ಅಸಮಾಧಾನ ಇದೆ, ಅವರು court ನಲ್ಲಿ ಬೇಕಾದರೆ ಹೋಗಿ challenge ಮಾಡಲಿ. ಯಾರು court ಗೆ ಹೋಗಿದ್ದಾರೆ, ಬೇಕಾದರೆ ಅಲ್ಲಿ ಹೋಗಿ ಸಾಕ್ಷ್ಯ ಕೊಡಲಿ. ಅದು ಬಿಟ್ಟು, ಹೀಗೆ ಮಾಡಬೇಕೆಂದರೆ, ಇವರು ಹೇಳಿದ ಹಾಗೆ ನಾವು ಕೇಳುವುದಕ್ಕೆ ಆಗುವುದಿಲ್ಲ. ಈ Gazetted Probationers ಹುದ್ದೆಗಳೇನು 2011 ರಲ್ಲಿ ಆಯಿತು, ಅದು ಕಾನೂನು ಬಾಹಿರವಾಗಿ ಆಗಿದೆ. ಅದರಲ್ಲಿ ಭ್ರಷ್ಟಾಚಾರ ನಡೆದಿದೆ, ಸ್ವಜನ ಪಕ್ಷಪಾತ ಮಾಡಿದೆ ಎಂದು ನಾವು ರದ್ದು ಮಾಡಿದ್ದೇವೆ. ಅದು ನಾವು ಅತ್ಯಂತ ವಿವೇಚನೆಯಿಂದ, ಕಾನೂನು ರೀತಿಯಿಂದ ತೆಗೆದುಕಂಡಿರತಕ್ಕಂಥ ನಿರ್ಣಯ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಮತ್ತು ಬೆಂಗಳೂರು ಸಿಟಿ ಇವತ್ತಿನ ದಿವಸ 'ರೇಪ್ ಸಿಟಿ' ಆಗುತ್ತಿದೆ ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಎಲ್ಲರ ಕಾಲದಲ್ಲಿಯೂ ಆಗಿವೆ. ನಮ್ಮ ಕಾಲದಲ್ಲಿ ಆಗಿವೆ, ಇನ್ನೊಬ್ಬರ ಕಾಲದಲ್ಲಿ ಆಗಿಲ್ಲ ಎಂದು ಮತ್ತು ಇನ್ನೊಬ್ಬರ ಕಾಲದಲ್ಲಿ ಆಗಿವೆ, ನಮ್ಮ ಕಾಲದಲ್ಲಿ ಆಗಿಲ್ಲ ಎಂಬ ಮಾತನ್ನು ನಾನು ಹೇಳುವುದಕ್ಕೆ ತಯಾರಿಲ್ಲ. ಆದರೆ, ನಾವು ಬಂದ ಮೇಲೆ ಕಾನೂನು ಸುವ್ಯವಸ್ಥೆ ಹಾಳಾಗಿದೆ, ಹದಗೆಟ್ಟಿದೆ, ಮಹಿಳೆಯರಿಗೆ, ಮಕ್ಕಳಿಗೆ ರಕ್ಷಣೆ ಇಲ್ಲ ಎನ್ನತಕ್ಕಂಥ ವಿಚಾರವನ್ನು ವಿರೋಧಪಕ್ಷದ ಬಹಳ ಜನರು ಪ್ರಸ್ತಾಪ ಮಾಡಿದ್ದಾರೆ. ದೆಹಲಿಯಲ್ಲಿ ನಿರ್ಭಯ ಪ್ರಕರಣವಾದ ಮೇಲೆ Indian Penal Code Sections 375, 376 ಗೆ ತಿದ್ದುಪಡಿ ಆದವು. ತಿದ್ದುಪಡಿ ಆದ ಮೇಲೆ ಆ definition ಗೆ ಇನ್ನೂ ಸ್ವಲ್ಪ ವ್ಯಾಪಕವಾದಂಥ ಅರ್ಥವನ್ನು ಕಲ್ಪಿಸಿಕೊಟ್ಟಿದ್ದಾರೆ. 2012 ರಲ್ಲಿ POCSO ಕಾಯಿದೆ ಕೂಡ ಜಾರಿಗೆ ಬಂದಿದೆ. ಇದು ತಿದ್ದುಪಡಿ ಆದ ಮೇಲೆ ಮತ್ತು POCSO ಕಾಯಿದೆ ಬಂದ ಮೇಲೆ, ಜನರಿಗೆ ಹೆಚ್ಚು ಜಾಗೃತಿ ಬರುವುದಕ್ಕೆ ಪ್ರಾರಂಭವಾಯಿತು. ರೇಪ್‌ಗೆ

ಸಂಬಂಧಪಟ್ಟಂತೆ, Sections 375, 376 ರಲ್ಲಿ ಏನು definition ಇತ್ತೋ, ಅದು ವಿಸ್ತಾರವಾಗಿದೆ. ಹಾಗೆಯೇ POCSO ಕಾಯಿದೆ ಸಹ ಬಂದಿದೆ. ಈ ಒಂದು ಹಿನ್ನಲೆಯಿಂದ ಇವತ್ತಿನ ದಿವಸ ಹೆಚ್ಚು ಜನರು ಮೊಕದ್ದಮೆಯನ್ನು ದಾಖಲು ಮಾಡುತ್ತಿದ್ದಾರೆ. ಅಂದರೆ, ಅವರ ಮೇಲೆ ಆದ ದೌರ್ಜನ್ಯಗಳ ಬಗ್ಗೆ ಪೊಲೀಸ್ ಠಾಣೆಗಳಿಗೆ ಹೋಗಿ ದೂರು ಕೊಡತಕ್ಕಂಥದ್ದು ಹೆಚ್ಚಾಗಿದೆ. ದೂರುಗಳನ್ನು ಹೆಚ್ಚಾಗಿ ಕೊಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಕಳೆದ ಎರಡು ವರ್ಷಗಳಲ್ಲೀ ಕರ್ನಾಟಕ ರಾಜ್ಯ ಒಂದೇ ಅಲ್ಲದೆ ಇಡೀ ದೇಶದಲ್ಲಿ ಅಂದರೆ..

**ಅಧ್ಯಕ್ಷರು:–** ಮನುಷ್ಯ ಸಮಾಜ ಎಲ್ಲೆಲ್ಲಿ ಇದೆಯೋ ಅಲ್ಲೆಲ್ಲ ಆಗಿದೆ.

**ಶ್ರೀ ಸಿದ್ದರಾಮಯ್ಯ:–** ಮನುಷ್ಯ ಸಮಾಜ ಎಲ್ಲಿದೆಯೋ ಅಲ್ಲೆಲ್ಲಾ ಕಡೆ, ಪೊಲೀಸ್ ಸ್ಟೇಷನ್‌ಗಳಲ್ಲಿ ದೂರುಗಳು ಜಾಸ್ತಿ ಆಗುತ್ತಿವೆ. ಕರ್ನಾಟಕದಲ್ಲಿಯೂ ಸಹ ಆಗಿವೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರು ಇಲ್ಲಿ ಮತ್ತು ವಿಧಾನಪರಿಷತ್‌ನಲ್ಲಿ ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಅಂಕಿ–ಅಂಶಗಳಿವೆ, ಎಲ್ಲವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಆಗಿರುವ murder ಬಗ್ಗೆ ಹೇಳುವುದಾದರೆ, 2010 ರಲ್ಲಿ 1805, 2011 ರಲ್ಲಿ 1820 ಮತ್ತು 2013ರಲ್ಲಿ 1601 ಹಾಗೂ 2014ರಲ್ಲಿ 1632 ಆಗಿವೆ. ಅಂದರೆ, ಮರ್ಡರ್ ಆಗಿರುವುದನ್ನು ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ 2013 ಮತ್ತು 2014 ರಲ್ಲಿ murder ಗಳು ಕಡಿಮೆ ಆಗುತ್ತಾ ಬಂದಿದೆ. ಡಕಾಯಿತಿಗಳ ಬಗ್ಗೆ ಹೇಳುವುದಾದರೆ, 2010 ರಲ್ಲಿ 572, 2011 ರಲ್ಲಿ 613, 2012 ರಲ್ಲಿ 2011 ಮತ್ತು 2013 ರಲ್ಲಿ 280, 2014 ರಲ್ಲಿ 304 ಆಗಿವೆ. ಒಟ್ಟಿನಲ್ಲಿ ಇದು ಸಹ ಕಡಿಮೆ ಆಗುತ್ತಾ ಬರುತ್ತಿದೆ. ಇದು ಇಡೀ ರಾಜ್ಯದಲ್ಲಿರತಕ್ಕಂಥ ಒಂದು ವಾತಾವರಣ ಆಗಿದೆ. ಹಾಗೆಯೇ ರಾಜ್ಯದಲ್ಲಿ burglary ಕೂಡ ಕಡಿಮೆ ಆಗುತ್ತಾ ಬರುತ್ತಿವೆ. ಅಂದರೆ, 6000 ಇದ್ದಂಥದ್ದು ಕಳೆದ ವರ್ಷ 6003 ಕ್ಕೆ ಬಂತು. ಈ ವರ್ಷ ಡಿಸೆಂಬರ್ ಕೊನೆಯವರೆಗೆ 5886 ಆಗಿವೆ. Theft ಕೂಡ ಹೆಚ್ಚು ಕಡಿಮೆ ಅದೇ ರೀತಿಯಲ್ಲಿದೆ. Cheating ಬಗ್ಗೆ ಇರುವ ಮಾಹಿತಿಗಳನ್ನು ನೋಡಿದಾಗ ಅದು ಸಹ ಕಡಿಮೆ ಆಗುತ್ತಾ ಬಂದಿವೆ. ಆದರೆ, ನಾವು

ಬಂದಾಗ ರೇಪ್ ಪ್ರಕರಣಗಳು ಸ್ವಲ್ಪ ಜಾಸ್ತಿ ಆಗಿರುವುದು ನಿಜ. 2013 ರಲ್ಲಿ 1030, 2014 ರಲ್ಲಿ 1319 ಆಗಿವೆ. ಒಟ್ಟಿನಲ್ಲಿ ಜಾಸ್ತಿ ಆಗಿವೆ. ನಾನು ಈಗಾಗಲೇ ಹೇಳಿದಂತೆ ರೇಪ್ ಡೆಫ್‌ನಿಷನ್ ತಿದ್ದುಪಡಿ ಮಾಡಿದ ಮೇಲೆ ಅದಕ್ಕೆ ಹೆಚ್ಚು ವಿಸ್ತಾರವಾಗಿ ಅರ್ಥ ಕಲ್ಪಿಸಿದ ಮೇಲೆ ಪ್ರಕರಣಗಳ ದಾಖಲು ಹೆಚ್ಚಾಗುವುದಕ್ಕೆ ಸಾಧ್ಯವಾಯಿತು. ಈಗ ಎಲ್ಲಾ ಪೊಲೀಸ್ ಸ್ಟೇಷನ್‌ಗಳಿಗೆ strict instruction ಅನ್ನು ಸಹ ಕೊಟ್ಟಿದ್ದೇವೆ. ಅಂದರೆ, ಯಾವುದೇ ಫಿರ್ಯಾದ್ ಬಂದರೆ ಅವುಗಳನ್ನು ತೆಗೆದುಕೊಳ್ಳಬೇಕೆಂದು ಮತ್ತು ಅದರ ಬಗ್ಗೆ ತನಿಖೆ ಮಾಡಬೇಕೆಂದು ಹೇಳಿದ್ದವೆ. ಈ ವಿಷಯಗಳನ್ನು ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ, ಯಾರು ಇಂಥ ಅಪರಾಧಗಳನ್ನು ಮಾಡುತ್ತಾರೆಯೋ ಅವರಿಗೆ ಶಿಕ್ಷೆ ಆಗಬೇಕೆಂಬುದು ಬಹಳ ಮುಖ್ಯವಾಗಿದೆ. ಶಿಕ್ಷೆ ಆಗಬೇಕೆಂಬ ಕಾರಣಕ್ಕೋಸ್ಕರ 10 Fast Track Court ಗಳನ್ನು ಮಾಡುತ್ತಿದ್ದೇವೆ. ಹಾಗೆಯೇ, ಜಿಲ್ಲಾ ಮಟ್ಟದಲ್ಲಿ ಮಹಿಳೆಯರಿಗೆ counseling ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಅಂದರೆ, ಒಂದೇ ಸೂರಿನ ಅಡಿಯಲ್ಲಿ ಎಲ್ಲಾ ರೀತಿಯ ವ್ಯವಸ್ಥೆ ಸಿಗಬೇಕೆಂಬ ಉದ್ದೇಶದಿಂದ ಮಾಡುತ್ತಿದ್ದೇವೆ. ಮಹಿಳೆಯರು ಮತ್ತು ಮಕ್ಕಳ ಮೇಲೆ ಆಗುತ್ತಿರುವ ದೌರ್ಜನ್ಯವನ್ನು ತಡೆಗಟ್ಟುವುದಕ್ಕೆ ಏನು ಮಾಡುವುದಕ್ಕೆ ಸಾಧ್ಯವಿದೆ ಎಂಬ ಬಗ್ಗೆ ಸ್ಟಡಿ ಮಾಡಿ ವರದಿ ಕೊಡಲು ಮಾನ್ಯ ಎಂ.ಸಿ. ನಾಣಯ್ಯನವರ ನೇತೃತ್ವದಲ್ಲಿ ಒಂದು ಸಮಿತಿ ಕೂಡ ಮಾಡಿದ್ದೇವೆ. ಅದರಲ್ಲಿ ಎಲ್ಲಾ ಪಕ್ಷದವರು ಸದಸ್ಯರಾಗಿದ್ದಾರೆ, ಹಾಗೆಯೇ ಎನ್‌ಜಿಓ ಗಳು ಮತ್ತು ಸಂಘ ಸಂಸ್ಥೆಗಳು ಸಹ ಸದಸ್ಯರಾಗಿದ್ದಾರೆ. ಎಲ್ಲಾ ಕಡೆ CCTV camera ಗಳನ್ನು ಅಳವಡಿಸುವುದಕ್ಕೆ ತೀರ್ಮಾನಗಳನ್ನು ಮಾಡಲಾಗಿದೆ. ವಿಶೇಷವಾಗಿ ಶಾಲೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸಿ.ಸಿ ಕ್ಯಾಮರಗಳನ್ನು ಅಳವಡಿಸುವುದಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದೇವೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಕರ್ನಾಟಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂಬ ಮಾತನ್ನು ವಿರೋಧಪಕ್ಷದವರು ಪ್ರಸ್ತಾಪ ಮಾಡಿರುವುದು ಸತ್ಯಕ್ಕೆ ದೂರವಾದದು ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಬಯಸುತ್ತಿದ್ದೇನೆ. ಇತ್ತೀಚಿನ

ಒಂದು ವಿಷಯವನ್ನು ಸದನ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಅದೇನೆಂದರೆ, ಹಂದಿ ಜ್ವರ ಇಡೀ ರಾಜ್ಯದಲ್ಲಿನ ಜನರಲ್ಲಿ ಸ್ವಲ್ಪ ಆತಂಕವನ್ನು ಉಂಟು ಮಾಡಿದೆ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಈಗಾಗಲೇ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿದೆ. ಈಗ ಯಾರು $H_1N_1$ ಕಾಯಿಲೆಯಿಂದ ನರಳುತ್ತಿದ್ದಾರೆಯೋ, ಅವರ ಕಾಯಿಲೆಯನ್ನು ಗುಣ ಮಾಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ತಪಾಸಣೆ ಮಾಡಿರತಕ್ಕಂಥದ್ದರಲ್ಲಿ ಇಲ್ಲಿಯವರೆಗೆ, ರಾಜ್ಯದಲ್ಲಿ 686 ಶಂಕಿತ ಪ್ರಕರಣಗಳು ವರದಿಯಾಗಿವೆ. ಅದರಲ್ಲಿ 189 ಪ್ರಕರಣಗಳು $H_1N_1$ ಎಂದು ದೃಢಪಟ್ಟಿವೆ. ಇದರಲ್ಲಿ 125 $H_1N_1$ ಬಾಧಿತರು ಈಗಾಗಲೇ ಗುಣಮುಖರಾಗಿದ್ದಾರೆ. ಇದು curable disease ಆಗಿದೆ. ಆದರೆ, ತಕ್ಷಣ ಹೋಗಿ ಅದಕ್ಕೆ ನಾವು ಚಿಕಿತ್ಸೆ ಪಡೆದುಕೊಂಡರೆ ಈ ಕಾಯಿಲೆ ಅತಿರೇಕಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಇಲ್ಲಿಯವರೆಗೆ 125 ಗುಣಮುಖರಾಗಿದ್ದಾರೆ, 22 ಮಂದಿ ಜನರಲ್ ವಾರ್ಡ್‌ನಲ್ಲಿದ್ದಾರೆ, ಮತ್ತೆ 8 ಮಂದಿ ICU ವಾರ್ಡ್‌ನಲ್ಲಿದ್ದಾರೆ. ಬಹುಶಃ ಇವರೂ ಕೂಡ ಗುಣಮುಖರಾಗುತ್ತಾರೆಂಬ ನಿರೀಕ್ಷೆಯಿದೆ. ಕರ್ನಾಟಕ ರಾಜ್ಯದಲ್ಲಿ ಇದು ಸಾಮಾನ್ಯವಾಗಿ ಡಿಸೆಂಬರ್ ತಿಂಗಳಿಂದ ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ ಬರತಕ್ಕಂಥ ಕಾಯಿಲೆ ಆಗಿದೆ. ಗಾಳಿಯಲ್ಲಿ ಬರತಕ್ಕಂಥ ಒಂದು viral disease ಆಗಿದೆ. ಈ disease ಬಂದ ತಕ್ಷಣವೇ ಡಾಕ್ಟರ್ ಹತ್ತಿರ ಹೋಗಿ ತೋರಿಸಿಕೊಂಡರೆ ಸಂಪೂರ್ಣವಾಗಿ ಗುಣವಾಗುತ್ತದೆ. ಸ್ವಲ್ಪ ನಾವು neglect ಮಾಡಿದರೆ ಇದರಿಂದ ತೊಂದರೆಯಾಗುತ್ತದೆ. ಬಹುಶಃ ಇದರ ಗುಣಲಕ್ಷಣಗಳು ಏನೆಂದರೆ ಉಸಿರಾಟಕ್ಕೆ ತೊಂದರೆಯಾಗುತ್ತದೆ, ಈ ಕಾಯಿಲೆ symptoms ಏನೆಂದರೆ, ಜ್ವರ ಬರುತ್ತದೆ, ಜ್ವರ ಬಂದಮೇಲೆ ಉಸಿರಾಟಕ್ಕೆ ತೊಂದರೆಯಾಗುತ್ತದೆ, ಉಸಿರಾಟದ ತೊಂದರೆಯಿದ್ದಾಗಲೇ ನಾವು ಇದನ್ನು neglect ಮಾಡಿದರೆ ಹೆಚ್ಚಿನ ಅಪಾಯ ಆಗತಕ್ಕಂಥ ಸಂಭವ ಇರುತ್ತದೆ ಎಂದು ಹೇಳಬಯಸುತ್ತೇನೆ. ಇಲ್ಲಿಯವರೆಗೆ ಕರ್ನಾಟಕದಲ್ಲಿ ಸುಮಾರು 15 ಜನರು ಈ ಕಾಯಿಲೆಯಿಂದ ಸತ್ತಿದ್ದಾರೆಂದು ವರದಿಯಾಗಿದೆ. ಈಗ ನಾವು ಎಲ್ಲಾ ಆಸ್ಪತ್ರೆಗಳಿಗೆ, ಜಿಲ್ಲಾ ಆಸ್ಪತ್ರೆಗಳು ಮತ್ತು ತಾಲ್ಲೂಕು headquarters ನಲ್ಲಿ ಇದಕ್ಕೆ

ಬೇಕಾದಂಥ ಎಲ್ಲ ಔಷಧಿಗಳನ್ನು ಕೂಡ ಒದಗಿಸಿಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ನಾವು ಇವತ್ತು ಸ್ಪಷ್ಟವಾಗಿ ಈ ರಾಜ್ಯದ ಜನತೆಗೆ ಹೇಳುತ್ತಿದ್ದೇನೆ, ಇದರಿಂದ ಯಾರೂ ಆತಂಕ ಪಡಬೇಕಾಗಿಲ್ಲ. ನನ್ನ ಮನವಿಯೇನೆಂದರೆ,

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಮುಖ್ಯಮಂತ್ರಿಗೆ, ಒಂದ್ನಿಮಿಷ, ನಾನು ಬೆಳಿಗ್ಗೆಯೇ ಒಂದು ವಿಚಾರ ಪ್ರಸ್ತಾಪ ಮಾಡಿದ್ದೆ. ಈಗೇನಾಗಿದೆಯೆಂದರೆ ಲ್ಯಾಬೊರೇಟರಿ ಕೊರತೆಯಿದೆ. ಆ ರೋಗ ಇದೆಯೋ ಇಲ್ಲವೋ ಎಂಬ ಬಗ್ಗೆ ದೃಢಪಡಿಸಿಕೊಳ್ಳಲು ನೀವೇನು ಸ್ಯಾಂಪಲ್ಸ್‌ನ್ನು ಕಳುಹಿಸುತ್ತೀರೋ ಟೆಸ್ಟ್ ಮಾಡುವುದಕ್ಕೆ, ಈ ಸ್ಯಾಂಪಲ್ಸ್ ಟೆಸ್ಟ್ ಮಾಡುವ ಲ್ಯಾಬೊರೇಟರಿ ಬೆಂಗಳೂರಿನಲ್ಲಿ ನಾಲ್ಕು ಇದೆ. ಮಣಿಪಾಲ್‌ನಲ್ಲಿ ಒಂದು ಇದೆ. ಹುಬ್ಬಳ್ಳಿ-ಧಾರವಾಡ ಇರಬಹುದು, ಬೆಳಗಾವಿ ಇರಬಹುದು, ಆ ಭಾಗದಲ್ಲಿ ಒಂದು ಲ್ಯಾಬೊರೇಟರಿ ಕೂಡ ಇಲ್ಲ. ಅವರೆಲ್ಲ ಟೆಸ್ಟ್‌ಗೆ ಸ್ಯಾಂಪಲ್ಸ್ ಕಳುಹಿಸಬೇಕೆಂದರೆ ಬೆಂಗಳೂರಿಗೆ ಕಳುಹಿಸಬೇಕು. ಅದು ಇಲ್ಲಿಗೆ ಬಂದು, ಅದರ ರಿಪೋರ್ಟ್ ಅಲ್ಲಿಗೆ ಬರುವುದರೊಳಗೆ ಎಷ್ಟೋ death ಆಗುತ್ತಿವೆ. ನಿನ್ನೆ ಧಾರವಾಡದಲ್ಲಿ ಒಂದು death ಆಗಿದೆ. ಹೀಗಾಗಿ ಆ ಭಾಗದಲ್ಲಿ ಮೂರ್‍ನಾಲ್ಕು ಕಡೆ ಲ್ಯಾಬೊರೇಟರಿ ಸ್ಥಾಪನೆ ಮಾಡುವುದಕ್ಕೆ immediate action ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಮತ್ತೆ ಈ ರೋಗ ದೊಡ್ಡ ಪ್ರಮಾಣದಲ್ಲಿ ಹರಡುವುದಕ್ಕೆ ಸಾಧ್ಯತೆಯಿದೆ.

ಶ್ರೀ ಸಿದ್ದರಾಮಯ್ಯ:- ಜಗದೀಶ್ ಶೆಟ್ಟರ್‌ರವರು ಹೇಳುವುದು ಸರಿಯಿದೆ. ಇಲ್ಲಿ ಲ್ಯಾಬೊರೇಟರಿಗಳು ಇರತಕ್ಕಂಥದ್ದು ಎಲ್ಲೆಲ್ಲಿ ಎಂದರೆ, ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಕೇಂದ್ರ, ಮಾನಸಿಕ ಮತ್ತು ನರ ರೋಗಗಳ ವಿಜ್ಞಾನ ಸಂಸ್ಥೆ ನಿಮ್ಹಾನ್ಸ್‌ನಲ್ಲಿ ಒಂದಿದೆ, ಮಣಿಪಾಲ ಆಸ್ಪತ್ರೆಯಲ್ಲಿದೆ, ನಾರಾಯಣ ಹೃದಯಾಲಯದಲ್ಲಿದೆ, ಕಮ್ಯಾಂಡ್ ಆಸ್ಪತ್ರೆಯಲ್ಲಿದೆ ಹಾಗೂ ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆಯಲ್ಲಿದೆ.

**ಶ್ರೀ ಜಗದೀಶ್ ಶೆಟ್ಟರ್**:- ಹುಬ್ಬಳ್ಳಿಯಲ್ಲಿ ಲ್ಯಾಬೊರೇಟರಿ ಇಲ್ಲ. ನಾನು ಇಂದು ಬೆಳಿಗ್ಗೆ ಕೂಡ ಡಾಕ್ಟರ್ ಕೇಳಿ verify ಮಾಡಿದ್ದೇನೆ. ಅಲ್ಲಿ ಈ ರೀತಿಯ ಯಾವೊಂದು ಲ್ಯಾಬೊರೇಟರಿ ಇಲ್ಲ. ಟೆಸ್ಟ್‌ಗೆ samples ಕಳುಹಿಸಿದರೆ ಅದು ಬೆಂಗಳೂರಿಗೇ ಬರಬೇಕು.

**ಶ್ರೀ ಸಿದ್ದರಾಮಯ್ಯ**:- ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿದೆ.

**ಶ್ರೀ ಜಗದೀಶ್ ಶೆಟ್ಟರ್**:- ಇಲ್ಲ, ಇಲ್ಲ.

**ಶ್ರೀ ಸಿದ್ದರಾಮಯ್ಯ**:- ನೋಡೋಣ, ಅದರ ಬಗ್ಗೆ verify ಮಾಡಿಸುತ್ತೇನೆ ಬಿಡಿ.

**ಅಧ್ಯಕ್ಷರು**:- ಕೆ.ಎಂ.ಸಿ. ದಿವಾಳಿ ಎದ್ದುಹೋಗಿದೆ.

**ಶ್ರೀ ಸಿದ್ದರಾಮಯ್ಯ**:- ಇಲ್ಲ, ಈಗ improve ಆಗಿದೆ. ನಿಮಗೆ ಎರಡು ವರ್ಷದ ಹಿಂದಿನ information ಸಿಕ್ಕಿರಬೇಕು.

**ಶ್ರೀ ಜಗದೀಶ್ ಶೆಟ್ಟರ್**:- ಕಿಮ್ಸ್ ಏನೂ ಉದ್ಧಾರವಾಗಿಲ್ಲ. ಕಿಮ್ಸ್ ಪರಿಸ್ಥಿತಿ ಹಾಗೆಯೇ ಇದೆ. ಕಿಮ್ಸ್ ರೋಗಗ್ರಸ್ಥವಾಗಿದೆ.

**ಶ್ರೀ ಸಿದ್ದರಾಮಯ್ಯ**:- ನಿಮ್ಮ ಕಾಲದಲ್ಲಿ ಇದ್ದಂತೆಯೇ ಇದೆಯೆ?

**ಶ್ರೀ ಜಗದೀಶ್ ಶೆಟ್ಟರ್**:- ಅವತ್ತಿಗೂ ಹಾಗೆಯೇ ಇತ್ತು. ಇವತ್ತಿಗೂ ಹಾಗೆಯೇ ಇದೆ. ಏನೂ improvement ಆಗುತ್ತಿಲ್ಲ.

**ಶ್ರೀ ಸಿದ್ದರಾಮಯ್ಯ**:- ಉಡುಪಿಯ ಮಣಿಪಾಲ್‌ನಲ್ಲಿಯೂ ಇದೆ. ಒಟ್ಟು 5 ಕಡೆಯಲ್ಲಿದೆ. ಹುಬ್ಬಳ್ಳಿಯಲ್ಲಿಯೂ ಇದೆಯೆಂದು ಹೇಳುತ್ತೇನೆ. ನೀವು ಇಲ್ಲವೆಂದು ಹೇಳುತ್ತಿದ್ದೀರಿ, ಅದರ ಬಗ್ಗೆ verify ಮಾಡುತ್ತೇನೆ.

**ಅಧ್ಯಕ್ಷರು**:- ಮೈಸೂರಿನಲ್ಲಿ ಇದೆಯೇ?

**ಶ್ರೀ ಸಿದ್ದರಾಮಯ್ಯ**:- ಮೈಸೂರಿನಲ್ಲಿ ಇಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:–** ಹೈದ್ರಾಬಾದ್ ಕರ್ನಾಟಕದಲ್ಲಿ ಇಲ್ಲ. ಅಲ್ಲಿ ಹಂದಿ ಜ್ವರ ಬರುವುದಿಲ್ಲವೇ. ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಹೀಗೆ ಹೈದ್ರಾಬಾದ್ ಕರ್ನಾಟಕದ ಭಾಗದಲ್ಲಿ ಲ್ಯಾಬೊರೇಟರಿ ಇಲ್ಲ.

**ಶ್ರೀ ಸಿದ್ದರಾಮಯ್ಯ:–** ನೋಡೋಣ, ಮುಂದೆ ಅಲ್ಲಿಯೂ ಮಾಡೋಣ. ಆ ಕಡೆಯಲ್ಲಿ ಈ ರೀತಿಯ ಕಾಯಿಲೆಗಳು ಬಂದಿಲ್ಲ ಬಿಡಪ್ಪಾ.

**ಅಧ್ಯಕ್ಷರು:–** ಗುಲ್ಬರ್ಗಾಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅಲ್ಲಿ Health University Centre ಇದೆ.

**ಶ್ರೀ ಸಿದ್ದರಾಮಯ್ಯ:–** ರಾಯರೆಡ್ಡಿ, ಎಲ್ಲ ಕಡೆಯಲ್ಲಿಯೂ ಲ್ಯಾಬೊರೇಟರಿ ಇರಬೇಕು ನಿಜ. ಪ್ರಯೋಗಾಲಯಗಳು ಎಲ್ಲ ಕಡೆ ಇರಬೇಕು. ನಿಮ್ಮ ಕಡೆಯೂ ಇರಬೇಕು, ಉತ್ತರ ಕರ್ನಾಟಕದ ಕಡೆಯಲ್ಲಿಯೂ ಇರಬೇಕು, ನಮ್ಮ ಮೈಸೂರಿನಲ್ಲಿಯೂ ಕೂಡ ಇಲ್ಲ. ಅಲ್ಲಿಯೂ ಕೂಡ ಇರಬೇಕು. ಗುಲ್ಬರ್ಗಾದಲ್ಲಿ ಒಂದು ಲ್ಯಾಬೊರೇಟರಿ ಮಾಡಬೇಕೆನ್ನುವ proposal ಇದೆ. ಅಲ್ಲಿಯೂ ಕೂಡ ಮಾಡುತ್ತೇವೆ. ಲ್ಯಾಬೊರೇಟರಿ ಇರಬೇಕಾಗುತ್ತದೆ, ಗುಲ್ಬರ್ಗಾದಲ್ಲಿಯೂ ಇರಬೇಕು, ಹುಬ್ಬಳ್ಳಿಯಲ್ಲಿಯೂ ಇರಬೇಕು, ಆ ಕಡೆ ಕರಾವಳಿ ಪ್ರದೇಶದಲ್ಲಿಯೂ ಇರಬೇಕು, ಮೈಸೂರಿನಲ್ಲಿಯೂ ಇರಬೇಕು, ಬೆಂಗಳೂರಿನಲ್ಲಿಯೂ ಕೂಡ ಇರಬೇಕು, ಹೀಗೆ ಎಲ್ಲ ಕಡೆ ಇರಬೇಕಾಗುತ್ತದೆ. ಏಕೆಂದರೆ ಇದನ್ನು war foot ನಲ್ಲಿ ಎದುರಿಸಬೇಕಾದದ್ದು ಅಗತ್ಯವಿದೆ. ಈ ರೋಗ ಸಾಮಾನ್ಯವಾಗಿ ಚಳಿಗಾಲ ಮತ್ತು ಬೇಸಿಗೆಕಾಲ ಪ್ರಾರಂಭವಾಗುತ್ತದಲ್ಲ ಈ ಕಾಲದಲ್ಲಿಯೇ ಬರುವುದು.

**ಅಧ್ಯಕ್ಷರು:–** Laboratory establish ಮಾಡುವುದು ಸುಲಭ. ಆದರೆ technicians ನೇಮಕ ಮಾಡುವಂಥ ಕೆಲಸವನ್ನು ಮಾಡಬೇಕು. ಉದಾಹರಣೆಗೆ ಡಯಾಲಿಸಿಸ್, ಆ ಡಯಾಲಿಸಿಸ್ ಮಾಡಲು ಟೆಕ್ನಿಷಿಯನ್ ಬೇಕು. ಅವರನ್ನು ಇನ್ನೂ recruit ಮಾಡುವುದಕ್ಕೆ ಆಗಿಲ್ಲವೆಂದರೆ ನಾವು ಏನು ಹೇಳಬೇಕು ಹೇಳಿ.

**ಶ್ರೀ ಸಿದ್ದರಾಮಯ್ಯ:–** ಈಗ ಮಾಡುತ್ತಿದ್ದೇವೆ.

**ಅಧ್ಯಕ್ಷರು:–** ಇಲ್ಲಾರಿ.

**ಶ್ರೀ ಸಿದ್ದರಾಮಯ್ಯ:–** ಈಗ ಮಾಡುತ್ತಿದ್ದೇವೆ, ಟೆಕ್ನಿಷಿಯನ್ಸ್‌ಗಳ್ನು recruit ಮಾಡುತ್ತಿದ್ದೇವೆ.

**ಅಧ್ಯಕ್ಷರು:–** ಮಹದೇವಪ್ಪನವರೇ ವಹಿಸಿಕೊಳ್ಳಲಿ, ಒಳ್ಳೆಯ ಡಾಕ್ಟರ್,

**ಶ್ರೀ ಸಿದ್ದರಾಮಯ್ಯ:–** ಈಗಾಗಲೇ ಅವರು ಒಂದು ಟರ್ಮ್ 5 ವರ್ಷ Health Minister ಆಗಿದ್ದರು.

**ಅಧ್ಯಕ್ಷರು:–** ಅವರ ಕಾಲದಲ್ಲಿಯೇ ಒಂದು ಆಸ್ಪತ್ರೆಯಾಯಿತು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, ನೀವು ಕೂಡ Health Minister ಆಗಿದ್ದಿರಲ್ಲ.

**ಅಧ್ಯಕ್ಷರು:–** ಅವರು Health Minister ಆಗಿದ್ದಾಗ ಡಾಕ್ಟರ್‌ಗಳು ಎಲ್ಲ ಕಡೆ ಇದ್ದರು. ಆದರೆ ಈಗ ಡಾಕ್ಟರ್‌ಗಳಿಲ್ಲ ಎನ್ನುವುದು ಅವರ ಭಾವನೆ.

**ಶ್ರೀ ಸಿದ್ದರಾಮಯ್ಯ:–** ನೋಡಪ್ಪಾ, ಡಾಕ್ಟರ್‌ಗಳ ಕೊರತೆ ಮೊದಲಿನಿಂದಲೂ ಇದೆ. ಸಮಸ್ಯೆಯೇನೆಂದರೆ ಕಳೆದ ಐದು ವರ್ಷ ಇವರು ಡಾಕ್ಟರ್‌ಗಳನ್ನು ನೇಮಕ ಮಾಡಲಿಲ್ಲ. ಅದೇ ಬಂದಿರುವುದು ತಾಪತ್ರಯ.

**ಶ್ರೀ ಜಗದೀಶ್ ಶೆಟ್ಟರ್:–** ನೀವು ಬಂದ ಮೇಲೆ ಎರಡು ವರ್ಷದ್ದು ಹೇಳಿ.

**ಶ್ರೀ ಸಿದ್ದರಾಮಯ್ಯ:–** ನಾವು ಈಗ ಮಾಡುತ್ತಿದೇವೆ. We are at it. ಅವರು ಮಾಡದೇ ಇದ್ದಿದ್ದರಿಂದ ಈ ಸಮಸ್ಯೆ ಉಲ್ಬಣವಾಗಿದೆಯೆಂದು ಹೇಳುತ್ತಿದ್ದೇನಷ್ಟೆ. We are at it. ಈಗ ಡಾಕ್ಟರ್‌ಗಳನ್ನು ನೇಮಕ ಮಾಡುತ್ತಿದ್ದೇವೆ ಮತ್ತು ಟೆಕ್ನಿಷಿಯನ್‌ಗಳನ್ನು ರಿಕ್ರೂಟ್ ಮಾಡುತ್ತೇವೆ. ಇನ್ನು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಪ್ರಸ್ತಾಪ ಮಾಡಿದ್ದಾರೆ.

**ಅಧ್ಯಕ್ಷರು:-** ಶಿವಲಿಂಗೇಗೌಡರೇನೋ ಒಂದು ದೊಡ್ಡ ಕಥೆ ಹೇಳುತ್ತಿದ್ದರು. ಅದೇನೆಂದು ಕೇಳಿ? ಅವರು ಮತ್ತು ಎ.ಎಸ್. ಪಾಟೀಲ್ ನಡಹಳ್ಳಿಯವರು ಹೇಳುತ್ತಿದ್ದರು.

**ಶ್ರೀ ಕೆ.ಎಂ. ಶಿವಲಿಂಗೇಗೌಡ:-** ನಮ್ಮದು ಬಹು ಹಳ್ಳಿ ಕುಡಿಯುವ ನೀರಿನ ಯೋಜನೆಗೆ ಬರುತ್ತದೆ. ಈಗಾಗಲೇ ಟೆಂಡರ್ ಕರೆದು ಎರಡು ವರ್ಷವಾಗಿದೆ.

**ಶ್ರೀ ಸಿದ್ದರಾಮಯ್ಯ:-** ಯಾರೂ ಟೆಂಡರ್‌ನಲ್ಲಿ ಬಂದಿಲ್ಲವೇ?

**ಶ್ರೀ ಕೆ.ಎಂ. ಶಿವಲಿಂಗೇಗೌಡ:-** ಬಂದಿದ್ದಾರೆ. ಟೆಂಡರ್‌ನ್ನು ಜಿಂದಾಲ್ ಕಂಪನಿಯವರು ತೆಗೆದುಕೊಂಡಿದ್ದರು. ಇಲಾಖೆಯವರು ಇದರ ಬಗ್ಗೆ ಬೇಗ ಕ್ರಮ ತೆಗೆದುಕೊಂಡಿಲ್ಲ.

**ಅಧ್ಯಕ್ಷರು:-** ಈಗ ಇಲಾಖೆಯ ಆಫೀಸ್‌ನಲ್ಲಿ ಇದನ್ನು ಡೀಲ್ ಮಾಡುವ ವಿಚಾರದಲ್ಲಿ ಫೈಲ್ ಮೂವ್‌ಮೆಂಟ್ ಆಗುವುದಿಲ್ಲವಂತೆ. ಎ.ಎಸ್.ಪಾಟೀಲ್ ನಡಹಳ್ಳಿಯವರು ಕೂಡ ಅದನ್ನೇ ಹೇಳುತ್ತಿದ್ದರು.

**ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:-** ಸಾರ್ 7 ವರ್ಷವಾಯಿತು. ಫೈಲ್‌ಗಳು ವಿಧಾನ ಸೌಧ ಬಿಟ್ಟು ಹೊರಗೇ ಹೋಗುತ್ತಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿಗೆ ಆದ್ಯತೆಯ್ನು ಕೊಟ್ಟಿದ್ದೇವೆ. ಕುಡಿಯುವ ನೀರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡೂ ಹಣವನ್ನು ಒದಗಿಸುತ್ತವೆ. ಈ ವರ್ಷಕ್ಕೆ ಕುಡಿಯುವ ನೀರಿಗೆ ಸುಮಾರು 1,486 ಕೋಟಿ 19 ಲಕ್ಷ ರೂ.ಗಳನ್ನು ಇಡಲಾಗಿದೆ. ಈಗಾಗಲೇ ಸುಮಾರು 1,086 ಕೋಟಿ ರೂ. ಗಳನ್ನು ಖರ್ಚು ಮಾಡಲಾಗಿದೆ. ಅಂದರೆ 73% ಹಣವನ್ನು ಖರ್ಚು ಮಾಡಿದ್ದೇವೆ. ಇನ್ನು ಉಳಿದಿರುವುದನ್ನು ಪ್ರಸಕ್ತ ಸಾಲಿನಲ್ಲಿ ಖರ್ಚು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಎಲ್ಲೆಲ್ಲಿ ಕುಡಿಯುವ ನೀರಿನ ಬಹು ಹಳ್ಳಿಯ

ಪ್ರಾಜೆಕ್ಟ್‌ಗಳಿವೆಯೋ, ಅವೆಲ್ಲವನ್ನು ಕೂಡ ಒಂದು ಸಾರಿ ರಿವ್ಯೂ ಮಾಡಿ ಅದಕ್ಕೆ ಸೂಕ್ತ ತೀರ್ಮಾನ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

**ಅಧ್ಯಕ್ಷರು:–** ಕೇಂದ್ರ ಸರ್ಕಾರದಿಂದ ಹಣ ಕೂಡ ಅದಕ್ಕೆ ಬರುತ್ತದೆ.

**ಶ್ರೀ ಸಿದ್ದರಾಮಯ್ಯ:–** ಹೌದೌದು.

**ಶ್ರೀ ಬಿ.ಆರ್. ಪಾಟೀಲ್:–** ಮಾನ್ಯ ಅಧ್ಯಕ್ಷರೆ, ಅಂತರ್ಜಲವನ್ನು ಜಾಸ್ತಿ ಮಾಡದೆಯೇ ನೀರನ್ನು ಎಲ್ಲಿಂದ ಇವರು ತರುತ್ತಾರೆ? ಅಂತರ್ಜಲವನ್ನು ಜಾಸ್ತಿ ಮಾಡುವ ಬಗ್ಗೆ ನೀವು ಗಂಭೀರವಾಗಿ ಯೋಚನೆ ಮಾಡಿ. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಕನಸಿನ ಮಾತುಗಳನ್ನು ಹೇಳುತ್ತಾರೆ. ಈ ಅಂತರ್ಜಲ ಹೆಚ್ಚು ಮಾಡದೆಯೇ ನೀವು ನೀರನ್ನು ಎಲ್ಲಿಂದ ತಂದು ಕುಡಿಸುತ್ತೀರಿ? ಅದರ ಬಗ್ಗೆ ಗಂಭೀರವಾಗಿ ಚಿಂತನೆಯನ್ನು ಮಾಡಿ. ಇವರು ಹವಾಮಾನದಿಂದ ನೀರನ್ನು ಹೀರಿ ಕುಡಿಸುತ್ತೇವೆ ಎಂದು ಹೇಳುತ್ತಾರೆ.

**ಅಧ್ಯಕ್ಷರು:–** ಅವರು ಉತ್ತರ ಹೇಳಲು ಬಿಡಿ.

**ಶ್ರೀ ಮಾನಪ್ಪ ಡಿ. ವಜ್ಜಲ್:–** ಈಗಾಗಲೇ 112 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಇದುವರೆಗೂ ಕುಡಿಯುವ ನೀರಿನ ಯೋಜನೆ implement ಆಗುತ್ತಿಲ್ಲ. ಲಿಂಗಸಗೂರು ತಾಲ್ಲೂಕಿನ ಸುಮಾರು 112 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಕುಡಿಯುವ ನೀರಿಗೆ ಯಾವುದೇ ಕಾರಣಕ್ಕೆ ನಾವು ಹಣಕಾಸಿನ ತೊಂದರೆ ಮಾಡುವುದಿಲ್ಲ.

**ಶ್ರೀ ಬಿ.ಆರ್. ಪಾಟೀಲ್:–** ನೀವು ಹಣವನ್ನು ಖರ್ಚು ಮಾಡುವುದಕ್ಕೆ ತಯಾರಿದ್ದೀರಿ. ಆದರೆ ನೀರಿಲ್ಲ.

**ಶ್ರೀ ಸಿದ್ದರಾಮಯ್ಯ:–** ನೀರು ಇಲ್ಲದಿದ್ದರೆ ನಾನು ಏನು ಮಾಡುವುದಕ್ಕಾಗುತ್ತದೆ ಹೇಳಿ?

**ಶ್ರೀ ಬಿ.ಆರ್. ಪಾಟೀಲ್:-** ನೀರು ಇಲ್ಲದಿರುವಾಗ ಹಣ ಖರ್ಚು ಮಾಡಿದರೆ ಏನರ್ಥ? ರಿಗ್ ಮೆಶಿನ್ ಹಾಕುವವರಿಗೆ, ಪೈಪ್ ಮಾರುವವರಿಗೆ ಮಾತ್ರ ಲಾಭವಾಗುತ್ತದಷ್ಟೆ.

(ಗೊಂದಲ)

**ಅಧ್ಯಕ್ಷರು:-** ಎಲ್ಲರೂ ಕುಳಿತುಕೊಳ್ಳಿ. ಅವರು ಉತ್ತರ ಕೊಡಲಿ.

**ಶ್ರೀ ಮಾನಪ್ಪ ಡಿ. ವಜ್ಜಲ್:-** ನಮ್ಮಲ್ಲಿ ನೀರಿನ ಸಮಸ್ಯೆ ಯಾವತ್ತೂ ಬಗೆಹರಿದಿಲ್ಲ ಸಾರ್. ಶಾಶ್ವತ ಕುಡಿಯುವ ನೀರಿನ ಯೋಜನೆ ಮಾಡಬೇಕೆಂದರೆ ಕೃಷ್ಣಾ ನದಿಯಿಂದ ತರಬೇಕು. ಇದನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** $H_2O$ ಎಂದರೆ evaporated ಆಗಿರುವುದನ್ನು, ಹವಾಮಾನದಲ್ಲಿ ಗಾಳಿಯಲ್ಲಿರುವ ತೇವಾಂಶವನ್ನು ಹೀರುವ ಮೂಲಕ ನೀರನ್ನು ಸಂಗ್ರಹ ಮಡುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಎಲ್ಲಿ ನೀರು ಸಿಗುತ್ತದೋ ಅದನ್ನು ಬಳಸಿಕೊಂಡು ಕುಡಿಯುವ ನೀರನ್ನು ಕೊಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಕೆ. ಶಿವಮೂರ್ತಿ:-** ತುಂಗಭದ್ರಾ ನದಿಯ ನೀರನ್ನು ಬಳಸಿಕೊಂಡು ಕುಡಿಯುವ ನೀರನ್ನು ಕೊಡಿ ಸಾರ್.

**ಶ್ರೀ ಪ್ರಮೋದ್ ಮಧ್ವರಾಜ್:-** Multi village drinking water scheme ಆದಷ್ಟು ಬೇಗನೆ ಮಾಡಿ.

**ಶ್ರೀ ಸಿದ್ದರಾಮಯ್ಯ:-** ಎಲ್ಲೆಲ್ಲಿ ನೀರು ಸಿಗುತ್ತದೋ ಅಲ್ಲಿ ನದಿಯ ನೀರನ್ನು ಬಳಸಿಕೊಂಡು ಶಾಶ್ವತವಾಗಿ ಕುಡಿಯುವ ನೀರಿನ ಯೋಜನೆಯನ್ನು ಎಲ್ಲೆಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೋ ಅವುಗಳಿಗೆ ಆದ್ಯತೆ ಮೇಲೆ ನಾವು ಮಾಡುತ್ತೇವೆ ಎನ್ನತಕ್ಕಂಥ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಮಾನ್ಯ ಜಗದೀಶ್ ಶೆಟ್ಟರ್‌ರವರು

ಶೌಚಾಲಯಗಳು ನೀವು ಹೇಳಿದಷ್ಟು ಅಲ್ಲಿ ನಿರ್ಮಾಣವಾಗಿಲ್ಲ ಎನ್ನತಕ್ಕಂಥ ಮಾತುಗಳನ್ನು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, 2013–14ನೇ ಸಾಲಿಗೆ ಆರು ಲಕ್ಷ ಶೌಚಾಲಯಗಳ ನಿರ್ಮಾಣ ಮಾಡಲಾಗುವುದು ಎಂದು ಹೇಳಿದ್ದೆವು. ಅದರಲ್ಲಿ ಕಳೆದ ವರ್ಷ 2014 ರ ಮಾರ್ಚ್ ಅಂತ್ಯಕ್ಕೆ 5,05,517 ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದೇವೆ. ನೀವು ಹಳ್ಳಿಗಳಿಗೆ ಹೋಗಿ ನೋಡಿ, ಅಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಿಲ್ಲ ಎನ್ನುವ ಮಾತನ್ನು ಹೇಳಿದಿರಿ. ನಾವು ಯಾವ ಆಧಾರದ ಮೇಲೆ ಹೇಳುತ್ತಿದ್ದೇವೆ ಎಂದರೆ, ಕಳೆದ ವರ್ಷ ಸಾಮಾಜಿಕ ತಪಾಸಣೆಯನ್ನು ಮಾಡಿಸಿದೆವು. ಸುಮಾರು 4,31,767 ಶೌಚಾಲಯಗಳನ್ನು ಸಾಮಾಜಿಕ ತಪಾಸಣೆಯನ್ನು ಮಾಡಿಸಿದ್ದೇವೆ. ಸಾಮಾಜಿಕ ತಪಾಸಣೆ ಮಾಡಿಸಿದ ಮೇಲೆ 3,63,844 ಶೌಚಾಲಯಗಳು ಸಂಪೂರ್ಣ ಪೂರ್ಣಗೊಂಡಿವೆ. ಇನ್ನು ಕೆಲವು incomplete ಆಗಿವೆ, ಅವುಗಳನ್ನೂ ಪೂರ್ಣಗೊಳಿಸುತ್ತಿದ್ದೇವೆ. 2014–15ನೇ ಸಾಲಿಗೆ 9,93,000 ಶೌಚಾಲಯಗಳನ್ನು ನಿರ್ಮಾಣ ಮಾಡಬೇಕೆಂದು ಗುರಿ ಇಟ್ಟುಕೊಂಡಿದ್ದೇವೆ. ಅದರಲ್ಲಿ ಈ ವರ್ಷ ಜನವರಿ ಅಂತ್ಯಕ್ಕೆ 6,05,000 ಶೌಚಾಲಯಗಳ ನಿರ್ಮಾಣವಾಗಿದೆ. ಇದು ಇಡೀ ರಾಷ್ಟ್ರದಲ್ಲಿ ಒಂದು ದಾಖಲೆಯಾಗಿದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಮುಖ್ಯಮಂತ್ರಿಯವರೆ, Social Audit ಕೊಟ್ಟಿರುವಂತಹ report ಮತ್ತು ಅಧಿಕಾರಿಗಳು ಕೊಟ್ಟಿರುವಂತಹ report ಗೂ ವ್ಯತ್ಯಾಸ ಬಂದಿತಾ?

**ಶ್ರೀ ಸಿದ್ದರಾಮಯ್ಯ:–** ಯಾವುದು?

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ರಾಜ್ಯದಲ್ಲಿ ನಾವು ಇಷ್ಟು ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದೇವೆ ಎಂದು ಏನು ಅಧಿಕಾರಿಗಳು ಮೊದಲು report ಕೊಟ್ಟರಲ್ಲಾ ಆ ಒಂದು report ಬಂದ ಮೇಲೆ ನೀವು ಶೌಚಾಲಯಗಳ social audit ಮಾಡಿಸಿದರಿ.

**ಅಧ್ಯಕ್ಷರು:–** ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಾವು ಸ್ವಲ್ಪ ನೋಡಿಕೊಳ್ಳಬೇಕು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಅಲ್ಲ ಮಾನ್ಯ ಅಧ್ಯಕ್ಷರೆ ನಾನು ರಾಜ್ಯದ್ದು ಕೇಳುತ್ತಿದ್ದೇನೆ. ನನ್ನ ಕ್ಷೇತ್ರದ ಪ್ರಶ್ನೆ ಅಲ್ಲ.

**ಶ್ರೀ ಸಿದ್ದರಾಮಯ್ಯ:–** ನಿಮ್ಮ ಕ್ಷೇತ್ರದಲ್ಲಿ ಏನಾಗಿದೆ ಎನ್ನುವುದನ್ನು ಹೇಳಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಅಧಿಕಾರಿಗಳು ರಾಜ್ಯದಲ್ಲಿ ಇಷ್ಟು ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದೇವೆ ಎಂದು ಒಂದು ಅಂಕಿ–ಅಂಶ ಕೊಟ್ಟರು.

**ಅಧ್ಯಕ್ಷರು:–** ಯಾರು ಮಾಡಿದ್ದಾದರೂ ಅಧಿಕಾರಿಗಳು ಕೊಟ್ಟಿರುವದನ್ನೇ ಇಲ್ಲಿ ಓದಬೇಕು. ತಾವೂ ಕೂಡ ಮಂತ್ರಿಗಳಾಗಿದ್ದಿರಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಅಧ್ಯಕ್ಷರೆ ಸ್ವಲ್ಪ ನಾನು ಹೇಳುವುದನ್ನು ಕೇಳಿ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಎಂದರೆ, ನಾವು social audit ಮಾಡಿಸಿದ ಮೇಲೆ ಇಷ್ಟು ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದೇವೆ ಎಂದು ಹೇಳಿದರು. ಅಧಿಕಾರಿಗಳು ಕೊಟ್ಟಿರುವ report ಗೂ ಮತ್ತು social audit ನವರು ಕೊಟ್ಟಿರುವ report ಗೂ ಏನಾದರೂ ವ್ಯತ್ಯಾಸ ಬಂದಿತೇ?

**ಶ್ರೀ ಸಿದ್ದರಾಮಯ್ಯ:–** ನಾವು ಅವರು ಕೊಟ್ಟಿರುವ report ಅನ್ನೇ ನಾವು ನಂಬಿಕೊಂಡಿಲ್ಲ. ಅದಕ್ಕೋಸ್ಕರವೇ Social Audit ಮಾಡಿಸಿರುವುದು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ನಾನು ಕೇಳುವುದು ಅದನ್ನೇ difference ಆಯಿತಲ್ಲಾ.

**ಶ್ರೀ ಸಿದ್ದರಾಮಯ್ಯ:–** ಅದು ಇದ್ದೇ ಇರುತ್ತದೆ. ಅದಕ್ಕೆ audit ಮಾಡಿಸಿರುವುದು ಅಲ್ಲವೇ? ಈಗ ನಾವು 6 ಲಕ್ಷ ಶೌಚಾಲಯಗಳು ನಿರ್ಮಾಣವಾಗಿದೆ ಎಂದು ಕೊಟ್ಟಿದ್ದೇವೆ. ಅವರು 5 ಲಕ್ಷ ಚಿಲ್ಲರೆ ಶೌಚಾಲಯಗಳು ನಿರ್ಮಾಣವಾಗಿದೆ ಎಂದು ಕೊಟ್ಟಿದ್ದಾರೆ. ಅದರಲ್ಲಿ 4,31,767 ಆಡಿಟ್ ಆಗಿವೆ. ಅದರಲ್ಲಿ 3,63,844 complete ಆಗಿವೆ. 5 ಲಕ್ಷ ಚಿಲ್ಲರೆಯಲ್ಲಿ ಇನ್ನೂ ಕೆಲವು incomplete ಆಗಿವೆ. ಅವುಗಳನ್ನೂ complete

ಮಾಡುತ್ತಿದ್ದೇವೆ. ಮಾನ್ಯ ಸವದಿಯವರೆ, ಇಡೀ ದೇಶದಲ್ಲೇ ಕರ್ನಾಟಕವೇ ಶೌಚಾಲಯಗಳನ್ನು ನಿರ್ಮಾಣ ಮಾಡಿರುವುದರಲ್ಲಿ Number one state ಎಂದು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಹಣವೆಲ್ಲಾ ಕೊಟ್ಟಿದ್ದೇವೆ. ಯಾವುದು ಬಾಕಿ ಇದೆ ಅದನ್ನೂ ಕೊಡುತ್ತೇವೆ. ಈ ವರ್ಷದ ಕಾರ್ಯಕ್ರಮಗಳಿಗೆ ಅಲೋಕೇಷನ್ ಏನು ಮಾಡಿದ್ದೇವೆ, ಅದನ್ನೂ ಕೊಡುತ್ತೇವೆ. ಅದರ ಬಗ್ಗೆ ಯಾರೂ ಕೂಡ ಸಂಶಯಪಡಬೇಕಾದ ಅಗತ್ಯ ಇಲ್ಲ. 'ಕೃಷಿಭಾಗ್ಯ' ಯೋಜನೆಯ ಬಗ್ಗೆಯೂ ಕೆಲವರು ಮಾತನಾಡಿದ್ದಾರೆ. 'ಕೃಷಿ ಭಾಗ್ಯ' ಯೋಜನೆ ಎನ್ನುವಂಥದ್ದು ಒಂದು ಹೊಸ ಕಲ್ಪನೆ, ಹೊಸ ಕಾರ್ಯಕ್ರಮ. ಏಕೆಂದರೆ, ಇಡೀ ದೇಶದಲ್ಲಿ ರಾಜಸ್ಥಾನ ಬಿಟ್ಟರೆ ಕರ್ನಾಟಕದಲ್ಲಿಯೇ ಅತಿ ಹೆಚ್ಚು ಒಣಭೂಮಿ ಇರುವುದು. ರಾಜಸ್ಥಾನ No. 1 ಇದೆ. ಕರ್ನಾಟಕ No. 2 ಸ್ಥಾನದಲ್ಲಿದೆ. ವ್ಯವಸಾಯಕ್ಕೆ ಯೋಗ್ಯವಾದಂತಹ ಭೂಮಿಯಲ್ಲಿ 70% ಒಣ ಭೂಮಿ ಇದೆ. ಒಣ ಭೂಮಿ ಮೇಲೆ ಅವಲಂಬಿತವಾಗಿರುವ ರೈತರಿಗೆ, ಕಡಿಮೆ ಮಳೆ ಬೀಳುವಂತಹ ಪ್ರದೇಶಗಳಲ್ಲಿ ಆ ಮಳೆ ನೀರನ್ನು ಸಂಗ್ರಹಣೆ ಮಾಡುವುದು, ಅದನ್ನು ಬಳಕೆ ಮಾಡುವುದು ಹೇಗೆ ಎನ್ನುವುದು, ಅವರಿಗೆ ಎಲ್ಲಾ ರೀತಿಯ ಸಹಾಯ, ಸಹಕಾರ ಕೊಡುವಂಥದ್ದು, ಇದನ್ನು ಮಾಡಲು 5 ಮುಖ್ಯ ಒಣ ಭೂಮಿ ವಲಯಗಳು, ಅದರಲ್ಲಿ 23 ಜಿಲ್ಲೆಗಳಲ್ಲಿ 107 ತಾಲ್ಲೂಕುಗಳನ್ನು ನಾವು ಗುರುತು ಮಾಡಿದ್ದೇವೆ. ಪ್ರತಿಯೊಂದು ತಾಲ್ಲೂಕಿಗೂ 210 ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರಿಗೆ ಕೊಡುವಂಥದ್ದನ್ನು ಮಾಡಿದ್ದೇವೆ. ಈ ವರ್ಷ ಅದಕ್ಕೋಸ್ಕರ 'ಕೃಷಿ ಭಾಗ್ಯ' ಕಾರ್ಯಕ್ರಮಕ್ಕೆ 500 ಕೋಟಿ ರೂ. ಗಳನ್ನು ನಾವು ಮೀಸಲಿಟ್ಟಿದೇವೆ. ಕೃಷಿ ಬೆಲೆ ಆಯೋಗದ ಬಗ್ಗೆಯೂ ಕೂಡ ವಿಶೇಷವಾಗಿ ಮಾನ್ಯ ಕುಮಾರಸ್ವಾಮಿಯವರು ಮಾತನಾಡಿದ್ದಾರೆ. ಮಾನ್ಯ ರಮೇಶ್‌ಕುಮಾರ್‌ರವರೂ ಕೂಡ ಮಾತನಾಡಿದ್ದಾರೆ. ಪ್ರಕಾಶ್ ಕಮ್ಮರಡಗಿಯವರ ಅಧ್ಯಕ್ಷತೆಯಲ್ಲಿ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡಿದ್ದೇವೆ. ಅವರು ಇದರ ಬಗ್ಗೆ ಇನ್ನೂ ಅಧ್ಯಯನ ಮಾಡುತ್ತಿದ್ದಾರೆ.

ಅಧ್ಯಕ್ಷರು:- ಅವರಿಗೆ Office ಸಿಕ್ಕಿಲ್ಲವೆಂದು ಹೇಳುತ್ತಿದ್ದರು.

ಶ್ರೀ ಸಿದ್ದರಾಮಯ್ಯ:– ಇಲ್ಲ ಕೊಟ್ಟಿದ್ದೇವೆ. ಕೆಲಸ ಪ್ರಾರಂಭ ಮಾಡಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ):– ಕೃಷಿ ಬೆಲೆ ಆಯೋಗದ ಅಧ್ಯಕ್ಷರ ಜೊತೆಗೆ ಅಧಿಕಾರಿಗಳು ಯಾವ ರೀತಿ ವರ್ತನೆ ಮಾಡುತ್ತಾರೆ ಎನ್ನುವುದನ್ನೂ ನೋಡಬೇಕು.

ಶ್ರೀ ಸಿದ್ದರಾಮಯ್ಯ:– ಹೊಸದಾಗಿ ಮಾಡಿದ್ದೇನೆ.

ಅಧ್ಯಕ್ಷರು:– ಹೊಸ ಹೋರಿಗೆ ತಿದ್ದಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ.

ಶ್ರೀ ಸಿದ್ದರಾಮಯ್ಯ:– ಹೊಸದಾಗಿ ಮಾಡಿದ್ದೇವೆ. ಇದೊಂದು ಹೊಸ ಪ್ರಯೋಗ.

ಅಧ್ಯಕ್ಷರು:– ಒಳ್ಳೆಯ ಕಾರ್ಯಕ್ರಮ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– 84 ವರ್ಷವಾಗಿದೆ, ಅನುಭವ ಕಡಿಮೆ ಇದೆಯೇ?

(ಗೊಂದಲ)

ಅಧ್ಯಕ್ಷರು:– ಮೊದಲನೆ ಬಾರಿಗೆ ಇಂತಹ ಒಂದು ಕಾರ್ಯಕ್ರಮ ಬಂದಿದೆ. ಕೃಷಿಕರಿಗೆ ಒಂದು ಲಾಭದಾಯಕ ಬೆಲೆ ಕೊಡಬೇಕೆನ್ನುವುದು ಒಂದು ಕಲ್ಪನೆ. ಅದಕ್ಕೆ ಇದು ಪ್ರಾರಂಭ. ಒಳ್ಳೆಯ ಕೆಲಸ.

ಶ್ರೀ ಬಿ.ಆರ್. ಪಾಟೀಲ್:– ಸಾರ್, ಕೃಷಿ ಬೆಲೆ ಆಯೋಗದಿಂದ ಏನೂ ಲಾಭವಾಗಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಕೃಷಿ ಬೆಲೆ ಆಯೋಗದಲ್ಲಿ ಅಧಿಕಾರವೂ ಇಲ್ಲ, ಏನೂ ಇಲ್ಲ.

(ಗೊಂದಲ)

**ಅಧ್ಯಕ್ಷರು:–** ಹುಟ್ಟಿದಾಗಲೇ ಮಕ್ಕಳು ಓಡಾಡುತ್ತವೆಯೇ?

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:–** ಕಾರ್ಯರೂಪಕ್ಕೆ ಬರಲು ಐದು ವರ್ಷ ಬೇಕಾಗುತ್ತದೆಯೇ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನೀವು ಅದರ ಬಗ್ಗೆ ಯೋಚನೆ ಮಾಡಿರಲಿಲ್ಲ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:–** ಆಯಿತು, ನೀವು ಮಾಡಿದ್ದೀರಿ. ಆದರೆ ಏನು ಪ್ರಯೋಜನ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ತಮಗೆ ಇದರ ಬಗ್ಗೆ ಕಲ್ಪನೆಯೂ ಇರಲಿಲ್ಲ ಏಕೆ ಮಾತನಾಡುತ್ತೀರಿ?

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:–** ತಾವು ಮಾಡಿರುವುದಕ್ಕೆ ನಾವು ಆವತ್ತು ಅಭಿನಂದನೆ ಸಲ್ಲಿಸಿದೆವು. ಸ್ವಾಗತ ಮಾಡಿದೆವು. ಆದರೆ ಏನು ಪ್ರಯೋಜನ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಆಯಿತು ಬಿಡಿ ಮತ್ತೆ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:–** ಆದರೆ ಏನು ಪ್ರಯೋಜನವಾಯಿತು?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಪ್ರಯೋಜನ ಆಗುತ್ತದೆ. ಏನು ಈಗಲೇ ಆಗಬೇಕಾ?

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:–** ಏನೂ ಪ್ರಯೋಜನವಾಗಿಲ್ಲ. ಕೃಷಿ ಬೆಲೆ ಆಯೋಗ ಹೆಸರಿಗೆ ಒಂದು ಉತ್ಸವ ಮೂರ್ತಿ ರೀತಿ ಇದೆ ಅಷ್ಟೆ.

**ಶ್ರೀ ಸಿದ್ದರಾಮಯ್ಯ:–** ಈಗ ಕೆಲಸ ಪ್ರಾರಂಭ ಮಾಡಿದೆ. ಅವರು ನೋಡಲಿ. ನಮ್ಮ ಉದ್ದೇಶ ಏನು? ರೈತರಿಗೆ ನ್ಯಾಯಯುತವಾದ ಬೆಲೆ ಸಿಗಬೇಕು. ವೈಜ್ಞಾನಿಕವಾದ ಬೆಲೆ ಸಿಗಬೇಕು. ರೈತರಿಗೆ ಮೋಸ ಆಗಬಾರದು. ಅನ್ಯಾಯ ಆಗಬಾರದು. ಶೋಷಣೆ ಆಗಬಾರದು ಎನ್ನುವುದು ನಮ್ಮ ಉದ್ದೇಶ. ಸದುದ್ದೇಶ ಇಟ್ಟುಕೊಂಡೇ ಇದನ್ನು ಮಾಡಿದ್ದೇವೆ.

**ಅಧ್ಯಕ್ಷರು:–** ಇದೊಂದು ಪ್ರಗತಿಪರ ಹೆಜ್ಜೆ

**ಶ್ರೀ ಬಿ.ಆರ್. ಪಾಟೀಲ್:–** ಮಾನ್ಯ ಮುಖ್ಯಮಂತ್ರಿಗಳೆ, ಕೃಷಿ ಬೆಲೆ ಆಯೋಗ ಎಷ್ಟು ಬೆಳೆಗಳಿಗೆ ಶಿಫಾರಸ್ಸು ಮಾಡಿತು? ನೀವು ಎಷ್ಟಕ್ಕೆ ಒಪ್ಪಿಕೊಂಡಿರಿ? ಎಷ್ಟು ರೂ. ಗಳಿಗೆ ಅನುಷ್ಠಾನ ಮಾಡಿದಿರಿ? ಉದಾಹರಣೆಗೆ ತೊಗರಿ ಬೆಳೆಗೆ ಆಯೋಗದವರು 5,950/– ರೂ. ಗಳನ್ನು ಶಿಫಾರಸ್ಸು ಮಾಡಿದರು. ಅದನ್ನು ನೀವು ಅನುಷ್ಠಾನವನ್ನೇ ಮಾಡಲಿಲ್ಲ. ತೊಗರಿ ಬೆಳೆಗಾರರಿಗೆ ಒಂದು ರೂಪಾಯಿಯನ್ನೂ ಕೊಡಲಿಲ್ಲ.

**ಅಧ್ಯಕ್ಷರು:–** ಮಾಡುತ್ತಾರೆ. ಈಗ ಅದು ಪ್ರಾರಂಭದಲ್ಲಿದೆ.

**ಶ್ರೀ ಸಿದ್ದರಾಮಯ್ಯ:–** ತಾವು ಹೇಳಿದ ಹಾಗೆ ಇನ್ನೂ ಪ್ರಾರಂಭದಲ್ಲಿದೆ. ಅವರ ಎಲ್ಲಾ ಶಿಫಾರಸ್ಸುಗಳನ್ನು ಸರ್ಕಾರ ಅಧ್ಯಯನ ಮಾಡಿ, ಅದನ್ನು ಯಾವ ರೀತಿ ತೀರ್ಮಾನ ಮಾಡಬೇಕೆಂದು ಸರ್ಕಾರ ಮಾಡುತ್ತದೆ.

(ಗೊಂದಲ)

**ಅಧ್ಯಕ್ಷರು:**– ನಮ್ಮ ಕೃಷಿ ಸಚಿವರು ಯುವಕರಿದ್ದಾರೆ, ಓಡಾಡಿ ಮಾಡುತ್ತಾರೆ.

(ಗೊಂದಲ)

**ಶ್ರೀ ಬಿ.ಆರ್. ಪಾಟೀಲ್:**– ದುಡ್ಡು ಕೊಟ್ಟರೆ ತಾನೇ ಅವರು ಮಾಡುವುದು. ಅಲ್ಲಿ ದುಡ್ಡೇ ಇಲ್ಲ.

(ಗೊಂದಲ)

**ಅಧ್ಯಕ್ಷರು:**– ಅದು ಬೇರೆ ಮಾತು. ಅದಕ್ಕೆಲ್ಲಾ ಎಂತಹ ದುಡ್ಡು?

**ಶ್ರೀ ವೈ.ಎನ್. ರುದ್ರೇಶ್‌ಗೌಡ:**– Purchase ಮಾಡುವವನು ಕೆ.ಜಿ. 60 ಕೊಟ್ಟು ಬೀನ್ಸ್ ತಿನ್ನುವುದಕ್ಕೆ ಆಗುತ್ತದೆಯೇ?

**ಶ್ರೀ ಸಿದ್ದರಾಮಯ್ಯ:**– ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ಇಲಾಖೆ ಬಗ್ಗೆ ಕೂಡ. . .

**ಶ್ರೀ ಬಿ.ಆರ್. ಪಾಟೀಲ್:**– ಮಾನ್ಯ ಮುಖ್ಯಮಂತ್ರಿಯವರೆ, ತೊಗರಿಬೇಳೆ ಬಗ್ಗೆ ಯಾವುದೋ ವಿಷಯ ಹೇಳುವ ಹಂತಕ್ಕೆ ಬಂದಿರಿ, ಮತ್ತೆ ಹಾಗೆ ಬಿಟ್ಟಿರಿ. ದಯಮಾಡಿ ಅದನ್ನು ಪ್ರಸ್ತಾಪ ಮಾಡಿ, ನಿಮ್ಮ ಮನಸ್ಸಿನಲ್ಲಿ ಏನೋ ಇದೆ.

(ಗೊಂದಲ)

**ಅಧ್ಯಕ್ಷರು:**– ಮಾಡುತ್ತಾರೆ ಬಿಡಿ.

**ಶ್ರೀ ಬಿ.ಆರ್. ಪಾಟೀಲ್:**– ಬೆಂಬಲ ಬೆಲೆಯನ್ನು ಕೊಡಬೇಕು ಸಾರ್.

**ಶ್ರೀ ಸಿದ್ದರಾಮಯ್ಯ:**– ಕೇಂದ್ರ ಸರ್ಕಾರ ತೊಗರಿಗೆ ಏನು ಬೆಂಬಲ ಬೆಲೆಯನ್ನು ನಿಗದಿ ಮಾಡಿದೆ, ಆ ರೇಟ್‌ಗೆ ನಾವು ತೊಗರಿಯನ್ನು ಕೊಂಡುಕೊಳ್ಳುತ್ತಿದ್ದೇವೆ.

**ಶ್ರೀ ಬಿ.ಆರ್. ಪಾಟೀಲ್:**– ಈ ವರ್ಷ ಒಂದು ಕಾಳನ್ನೂ ಸಹ ಕೊಂಡುಕೊಂಡಿಲ್ಲ ಏಕೆ?

ಶ್ರೀ ಸಿದ್ದರಾಮಯ್ಯ:- Procurement center ಅನ್ನು ಪ್ರಾರಂಭ ಮಡಿದ್ದೇವೆ. ತೊಗರಿ ಅಭಿವೃದ್ಧಿ ಮಂಡಳಿಗೆ ಆ ಜವಾಬ್ದಾರಿಯನ್ನು ಕೊಟ್ಟಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್:- ಒಂದು ಕಾಳನ್ನೂ ಸಹ ಕೊಂಡುಕೊಂಡಿಲ್ಲ.

ಶ್ರೀ ಸಿದ್ದರಾಮಯ್ಯ:- ಏನಪ್ಪಾ ಬಿ.ಆರ್. ಪಾಟೀಲ್ ನೀನು, Procurement center ಅನ್ನು open ಮಾಡಿದ್ದೇವೆಯೋ ಇಲ್ಲವೋ?

ಶ್ರೀ ಬಿ.ಆರ್. ಪಾಟೀಲ್:- ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಕೃಷಿ ಬೆಲೆ ಆಯೋಗ ತೊಗರಿ ಬೆಳೆಗೆ 5,950/- ರೂ. ಗಳನ್ನು ಕೊಡಬೇಕೆಂದು ಶಿಫಾರಸ್ಸು ಮಾಡಿತು. ಇವತ್ತು ತೊಗರಿ ಬೋರ್ಡ್ function ನಲ್ಲಿಯೇ ಇಲ್ಲ. ಒಂದು ಕಾಳನ್ನೂ ಕೂಡ ಖರೀದಿ ಮಾಡಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಬೆಂಬಲ ಬೆಲೆ MSP ಯನ್ನು ಏನು ನಿಗದಿ ಮಾಡಿದ್ದೇವೆ ಆ ರೇಟ್‌ಗಿಂಥ ಮಾರುಕಟ್ಟೆಯಲ್ಲಿ ಜಾಸ್ತಿ ಇದೆ. ಮಾರುಕಟ್ಟೆಯಲ್ಲಿ intervention ಮಾಡಿರುವ ಉದ್ದೇಶ ಏನು? ಮಾರುಕಟ್ಟೆಯಲ್ಲಿ ಮಧ್ಯಪ್ರವೇಶಿಸಿರುವುದೇ open market ನಲ್ಲಿ ಬೆಲೆ ಜಾಸ್ತಿ ಆಗಲಿ ಎಂದು. ರೈತರಿಗೆ ಬೆಲೆ ಸಿಗಲಿ ಎಂದು ಇಟ್ಟಿದ್ದೇವೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:- ಸಾರ್, ಅಷ್ಟು ಬೆಲೆ ಮಾರುಕಟ್ಟೆಯಲ್ಲಿ ಸಿಗಲಿಲ್ಲ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):- ಮಾರುಕಟ್ಟೆಯಲ್ಲಿ ಅಷ್ಟು ಬೆಲೆ ಇಲ್ಲ. ಮಾರುಕಟ್ಟೆಯಲ್ಲಿ MSP ಗಿಂತ ಕಡಿಮೆ ಇದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ರೈತರಿಗೆ ಬೆಲೆ ಜಾಸ್ತಿ ಸಿಗಲಿ ಎನ್ನುವ ಕಾರಣಕ್ಕಾಗಿ 4,350 ರೂ. ಬೆಲೆಗೆ ನಿಗದಿ ಮಾಡಿದ್ದೇವೆ.

**ಡಾ: ಹೆಚ್.ಸಿ. ಮಹದೇವಪ್ಪ:-** ₹ 4,350 MSP. ಮಾರುಕಟ್ಟೆಯಲ್ಲಿ ₹ 5400 ಇದೆ.

**ಶ್ರೀ ಬಿ.ಆರ್. ಪಾಟೀಲ್:-** ನಿಮ್ಮ ಆಯೋಗ ಶಿಫಾರಸ್ಸು ಮಾಡಿರುವುದನ್ನು ನೀವು ಏತಕ್ಕಾಗಿ ಅನುಷ್ಠಾನ ಮಾಡಲಿಲ್ಲ? ಅದು ಮಾಡಿದ್ದರೆ market rate ಜಾಸ್ತಿಯಾಗುತ್ತಿತ್ತು.

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):-** It is only a recommendation. ನಾವು ಮಾರುಕಟ್ಟೆಗೆ ಹೋಗಿರುವುದರಿಂದಲೇ ಈಗ ಬೆಲೆ ಜಾಸ್ತಿಯಾಗಿದೆ. ನಾವು ಮಾರುಕಟ್ಟೆಯನ್ನು ಪ್ರವೇಶ ಮಾಡದೆ ಹೋಗಿದ್ದರೆ ಆಗ ಬೆಲೆಯು ಕುಸಿದಿರುತ್ತಿತ್ತು.

**ಶ್ರೀ ಬಿ.ಆರ್. ಪಾಟೀಲ್:-** ಇಲ್ಲಿಯವರೆವಿಗೂ ಈ ವರ್ಷದಲ್ಲಿ market intervention ಆಗಲೇ ಇಲ್ಲ. ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ.

**ಅಧ್ಯಕ್ಷರು:-** ಇವರ ಬೆಂಬಲ ಬೆಲೆಗಿಂತ ಜಾಸ್ತಿ ಇದ್ದಾಗ ಯಾರು ಖರೀದಿ ಮಾಡುತ್ತಾರೆ?

**ಶ್ರೀ ಬಸವರಾಜ ಬೊಮ್ಮಾಯಿ:-** ಅದಕ್ಕೆ ಬೇರೆ ಕಾರಣ ಇದೆ ಸಾರ್.

**ಶ್ರೀ ಬಿ.ಆರ್. ಪಾಟೀಲ್:-** Market ನಲ್ಲಿ intervene ಆದರೆ rate ಜಾಸ್ತಿಯಾಗಬೇಕೆಂಬುದು ಅದರ ಉದ್ದೇಶ. ಇವರು intervene ಆಗಲೇ ಇಲ್ಲ. ಇವರು ಹೋದ ವರ್ಷವೂ ಸಹ ಖರೀದಿ ಮಾಡಿರುವುದಿಲ್ಲ. ಇವತ್ತಿನವರೆವಿಗೂ ಒಂದು ಟನ್ ಖರೀದಿ ಮಾಡಿರುವುದಿಲ್ಲ.

**ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):-** ಮಾನ್ಯ ಪಾಟೀಲ್‌ರವರೆ ತಾವು ಆ ರೀತಿಯಾಗಿ ಹೇಳಬೇಡಿ. ನಮ್ಮ ಬಿಜಾಪುರದಲ್ಲಿಯೇ ಖರೀದಿ ಮಾಡಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್:- ನಾನು ಈ ಬಗ್ಗೆ ಸುಳ್ಳು ಹೇಳುತ್ತಿಲ್ಲ. ಬೇಕಾದರೆ ಈ ಬಗ್ಗೆ ವರದಿಯನ್ನು ಕೊಡಿ.

ಶ್ರೀ ಸಿದ್ದರಾಮಯ್ಯ:- ಬಿ.ಆರ್. ಪಾಟೀಲ್‌ರವರೆ, ತಾವು ಕುಳಿತುಕೊಳ್ಳಿ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ:- ಆ ರೇಟ್‌ಗೆ ಖರೀದಿ ಮಾಡುತ್ತಿಲ್ಲ. ನಾವು ಕೂಡ ಕೇಂದ್ರಗಳನ್ನು ಉದ್ಘಾಟನೆಯನ್ನು ಮಾಡಿದ್ದೇವೆ. ಮೆಕ್ಕಜೋಳವನ್ನು ಆ ರೇಟ್‌ಗೆ ಯಾರೂ ಖರೀದಿ ಮಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಮೆಕ್ಕೆಜೋಳವನ್ನು ಕಳೆದ ಸಾರಿ ಬಹಳ ದೊಡ್ಡ ಪ್ರಮಾಣದಲ್ಲಿ ಅಂದರೆ 7 ಲಕ್ಷ ಮೆಟ್ರಿಕ್ ಟನ್ ಖರೀದಿ ಮಾಡಿದ್ದೇವೆ. ಇದರಿಂದ ನಮಗೆ ನಷ್ಟವೂ ಸಹ ಆಯಿತು. ಈ ಸಾರಿ ಕೇಂದ್ರ ಸರ್ಕಾರವು 1,310 ರೂಪಾಯಿಗಳ MSP ಯನ್ನು ನಿಗದಿ ಮಾಡಿದೆ. ಅದನ್ನು ಹೇಳಿಬಿಟ್ಟು, ನಾವು ಅದಕ್ಕಾಗಿ ಆರ್ಥಿಕ ಸಹಾಯಕ್ಕೆ ಬರುವುದಿಲ್ಲ, ನೀವು PDS ಮೂಲಕ ಅದನ್ನು ಖರೀದಿ ಮಾಡಬೇಕು, PDS ನಲ್ಲಿ ಕೊಡಬೇಕೆಂದು ಹೇಳಿದ್ದಾರೆ. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ, ಮಾರುಕಟ್ಟೆಯಲ್ಲಿ ಸುಮಾರು 900 ರಿಂದ 1000 ರೂಪಾಯಿಗಳ ಬೆಲೆ ಮೆಕ್ಕೆಜೋಳಕ್ಕೆ ಇತ್ತು. ಅದಕ್ಕೆ ನಾವು market intervention ಮಾಡಿ 1100 ರೂಪಾಯಿಗಳಿಗೆ ತೆಗೆದುಕೊಳ್ಳುತ್ತೇವೆಂದು ಮಾಡಿದೆವು. ಇದನ್ನು ಏತಕ್ಕಾಗಿ ಮಾಡಿದೆವು ಅಂದರೆ ನಾನು ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾನ್ಯ ಸಚಿವರಾದ ಶ್ರೀ ರಾಮವಿಲಾಸ ಪಾಸ್ವಾನ್‌ರವರನ್ನು ಭೇಟಿ ಮಾಡಿ ಇಲ್ಲ, ಇದನ್ನು ನೀವೇ ಮಾಡಬೇಕೆಂದು ಹೇಳಿದರೂ ಕೂಡ ಅವರು ನಮ್ಮ ಮಾತನ್ನು ಕೇಳಲಿಲ್ಲ. ಅವರು ನಮ್ಮ ಸರ್ಕಾರ ಇದನ್ನು ಮಾಡುವುದಕ್ಕೆ ಒಪ್ಪುತ್ತಾ ಇಲ್ಲವೆನ್ನುವಂತಹ ಮಾತನ್ನು ಹೇಳಿದರು. ಇದು ಆದ ಮೇಲೆ 1,100 ರೂಪಾಯಿಗಳಿಗೆ ನಾನು ಕೊಂಡುಕೊಳ್ಳುವುದಕ್ಕೆ ಪ್ರಾರಂಭ ಮಾಡಿದೆವು. ಅಷ್ಟು ಹೊತ್ತಿಗೆ ಮಾರುಕಟ್ಟೆಯಲ್ಲಿ ದಳ್ಳಾಳಿಗಳು ಇದ್ದಾರಲ್ಲಾ ಅವರುಗಳು ಕೊಂಡುಬಿಟ್ಟಿದ್ದರು. ಅವರು ತಂದು ಹಾಕುತ್ತಾರೆಂದು ನಾವು 1,310 ಮಾಡಲಿಲ್ಲ 1,100 ರೂಪಾಯಿಗಳಿಗೆ ಕೊಂಡುಕೊಳ್ಳುತ್ತಿದ್ದೇವೆ. ಮಾರುಕಟ್ಟೆಯಲ್ಲಿ

1,150 ಇದೆ, ನಾವು 1,100 ರೂಪಾಯಿಗಳಿಗೆ ಕೊಂಡುಕೊಳ್ಳುತ್ತಿದ್ದೇವೆ. ಮಾರುಕಟ್ಟೆಯಲ್ಲಿ 1,150 ಇದೆ, ನಾವು 1,100 ರೂಪಾಯಿಗಳಿಗೆ ಕೊಂಡುಕೊಳ್ಳುತ್ತಿದ್ದೇವೆ. ನಾವು announce ಮಾಡಿದ ಮೇಲೆ 900 ರೂಪಾಯಿಗಳು ಇದ್ದದ್ದು 1,100 ಆಯಿತು.

**ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ:–** ಅದು ಜಾಸ್ತಿ ಏನೂ ಆಗಲಿಲ್ಲ. ₹ 1,050 ಮತ್ತು ₹ 1,070 ಇದೆ. ಅದು ಜಾಸ್ತಿ ಏನೂ ಆಗಲಿಲ್ಲ.

**ಶ್ರೀ ಸಿದ್ದರಾಮಯ್ಯ:–** ನಾನು 1,050 ಮತ್ತು 1,100 ರೂಪಾಯಿಗಳೆಂದು ಅಷ್ಟೇ ಹೇಳುತ್ತಿರುವುದು.

**ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ):–** ರೈತರಿಗೆ ಕೇವಲ 1,000 ರೂಪಾಯಿಗಳು ಸಿಗುತ್ತಿದೆ. 1,000 ರೂಪಾಯಿಕ್ಕಿಂತ ಜಾಸ್ತಿ ಸಿಗುತ್ತಿಲ್ಲ.

**ಅಧ್ಯಕ್ಷರು:–** ಆಯಿತು ಬಿಡಿ.

**ಶ್ರೀ ಸಿದ್ದರಾಮಯ್ಯ:–** ಈ ವರ್ಷ ಜೋಳ ಮತ್ತು ರಾಗಿಯನ್ನು ನಾವು ಓಪನ್ ಮಾರ್ಕೆಟ್‌ನಲ್ಲಿ ತೆಗೆದುಕೊಳ್ಳುತ್ತಿದ್ದೇವೆ. MSP 1550 ರೂಪಾಯಿಗಳು ಇತ್ತು. ಆದರೆ ನಾವು 2000 ರೂಪಾಯಿಗಳನ್ನು ಕೊಟ್ಟು ಕೊಂಡುಕೊಳ್ಳುತ್ತಿದ್ದೇವೆ. ರಾಗಿ ಮತ್ತು ಜೋಳ ಎರಡನ್ನೂ ನಾವು 2000 ರೂಪಾಯಿಗಳ ಬೆಂಬಲ ಬೆಲೆಯನ್ನು ಕೊಟ್ಟು ಕೊಂಡುಕೊಳ್ಳುತ್ತಿದ್ದೇವೆ. ಮಾನ್ಯ ರಮೇಶ್ ಕುಮಾರ್‌ರವರು ತೋಟಗಾರಿಕೆ ಬೆಳೆಯ ಬಗ್ಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ಮಾವಿನ ಮರಗಳ ಬಗ್ಗೆ ಹೇಳಿದ್ದಾರೆ. ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಭಾಗದಲ್ಲಿ ಮಾವಿನ ಫಸಲು ಜಾಸ್ತಿ ಇದೆ. ಅಲ್ಲಿ ಕಳೆದ 3–4 ವರ್ಷಗಳಿಂದ ಮಳೆ ಕಡಿಮೆ ಆಗಿ underground water ಕೆಳಕ್ಕೆ ಹೋಗಿ ಇವತ್ತು ಬಹಳ ತೊಂದರೆಯಾಗಿದೆ ಎನ್ನುವಂತಹ ಮಾತುಗಳನ್ನು ಹೇಳಿದ್ದಾರೆ. ಮರಗಳೆಲ್ಲವೂ ಒಣಗಿ ಹೋಗಿದೆ, ಮತ್ತೆ ಅವು ಉಪಯೋಗಕ್ಕೆ ಬರುವುದಿಲ್ಲ ಎಂಬ ಮಾತನ್ನು ಸಹ ಹೇಳಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ತೆಂಗಿನ ಮರಗಳನ್ನು ಸಹ ಕಡಿದು ಹಾಕುತ್ತಿದ್ದಾರೆ. ತೆಂಗಿನ ಮರಗಳೆಲ್ಲವೂ ಸಹ ಬಿದ್ದು ಹೋಗುತ್ತಿದೆ. ಅದು complete ಆಗಿ ಸರ್ವನಾಶ ಆಗಿದೆ.

ಶ್ರೀ ಸಿದ್ದರಾಮಯ್ಯ:– ಈ ಬಗ್ಗೆಯೂ ಸಹ ಸರ್ಕಾರವು ಗಂಭೀರವಾಗಿ ಪರಿಗಣಿಸುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸುಮಾರು 692 ಕೋಟಿ ರೂಪಾಯಿಗಳನ್ನು ಕೇಳಿ ಡಿಸೆಂಬರ್ ಮತ್ತು ಜನವರಿಯಲ್ಲಿ ಪ್ರಸ್ತಾವನೆ ಕಳುಹಿಸಿದ್ದೇವೆ, ಅದು ಇನ್ನೂ ಬಂದಿಲ್ಲ. ಕರ್ನಾಟಕದಲ್ಲಿ ದ್ರಾಕ್ಷಿ ಮತ್ತು ದಾಳಿಂಬೆ ಕೂಡ ಮಳೆ ಬಿದ್ದು ನಷ್ಟವಾಗಿದೆ ಎಂದು ಹೇಳಿದ್ದಾರೆ. ನಾನು ಒಂದು ಸಾರಿ ಹಿಂದೆ ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಾಗ ಮಾನ್ಯ ಹಣಕಾಸಿನ ಸಚಿವರಾದ ಶ್ರೀ ಚಿದಂಬರಂರವರನ್ನು ಭೇಟಿ ಮಾಡಿ ಅವರಿಗೆ ಒಂದು ಮನವಿಯನ್ನು ಕೊಟ್ಟು ದ್ರಾಕ್ಷಿ ಮತ್ತು ದಾಳಿಂಬೆ ಬೆಳೆಗಾರರಿಗೆ ಬಹಳ ನಷ್ಟವಾಗಿದೆ ಎಂದು ಅವರನ್ನು ಭೇಟಿ ಮಾಡಿದ್ದೆ. ಅವರು ಒಬ್ಬರು ಕಾರ್ಯದರ್ಶಿಯವರನ್ನು ರಾಜ್ಯಕ್ಕೆ ಕಳುಹಿಸಿ, ಅವರು ನಮ್ಮ Chief Secretary ಮತ್ತು ಬೇರೆಯವರ ಜೊತೆಯಲ್ಲಿ, ಬ್ಯಾಂಕ್ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಬಡ್ಡಿ ಮನ್ನಾ ಮಾಡುತ್ತೇವೆನ್ನುವಂತಹ ಮಾತನ್ನು ಹೇಳಿದ್ದರು. ಈ ಬಗ್ಗೆ ನಾನು ಒಂದು ಪತ್ರವನ್ನೂ ಸಹ ಬರೆದಿದ್ದೆ. ಮತ್ತೆ ನಾನು ನಿನ್ನೆಯೂ ಕೂಡ ಒಂದು ಪತ್ರವನ್ನು ಬರೆದಿದ್ದೇನೆ. ದ್ರಾಕ್ಷಿ ಮತ್ತು ದಾಳಿಂಬೆ ಬೆಳೆಗಾರರು ನನ್ನ ಹತ್ತಿರ ಬಂದಿದ್ದರು. ಈಗ ಕೇಂದ್ರ ಸರ್ಕಾರಕ್ಕೆ ಮತ್ತೊಂದು ಪತ್ರವನ್ನು ಬರೆಯಬೇಕೆಂದು ಸಹ ಹೇಳಿದ್ದಾರೆ. ಇನ್ನೊಂದು ಪತ್ರವನ್ನು ಸಹ ನಾನು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇನೆ. ಈರುಳ್ಳಿಯು ಈ ಸಾರಿ ಮಳೆಗೆ ಸಿಕ್ಕಿಹಾಕಿಕೊಂಡು ರೈತರಿಗೆ ಬಹಳ ನಷ್ಟವಾಯಿತು ಎಂದು ಹೇಳಿದರು. ಅದಕ್ಕೋಸ್ಕರ ನಾವು input subsidy 4,500 ರೂಪಾಯಿಗಳನ್ನು 9,000 ರೂಪಾಯಿಗಳೆಂದು ಮಾಡಿ, ಯಾರ್ಯಾರು ಈರುಳ್ಳಿ ಬೆಳೆದು ಮಳೆಯಿಂದ ನಷ್ಟವಾಗಿತ್ತೋ ಅವರೆಲ್ಲರಿಗೂ 31 ಕೋಟಿ ರೂಪಾಯಿಗಳ ಪರಿಹಾರವನ್ನು ನಾವು ಕೊಟ್ಟಿದ್ದೇವೆ. 36 ಕೋಟಿ ರೂಪಾಯಿಗಳು ಮಂಜೂರಾತಿ ಆಗಿದೆ.

ಈಗಾಗಲೇ 31 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅಷ್ಟು ಹಣವು distribute ಸಹ ಆಗಿದೆ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ):- ಬಿಜಾಪುರದಲ್ಲಿ ಆಲಿಕಲ್ಲು ಮಳೆಯಾದಾಗ ತಾವು ಅಲ್ಲಿಗೆ ಬಂದಿದ್ದಿರಿ. ಆಲಿಕಲ್ಲು ಮಳೆಯಿಂದ ತೊಂದರೆಗೆ ಒಳಗಾದವರಿಗೆ ಇದುವರೆಗೂ ದುಡ್ಡು ಬಿಡುಗಡೆಯಾಗಿರುವುದಿಲ್ಲ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಎ.ಎಸ್. ಪಾಟೀಲ್‌ರವರು ಹೇಳುತ್ತಾರಲ್ಲ for the first time in the history of Karnataka, ಆಲಿಕಲ್ಲು ಮಳೆ ಯಾವ ಯಾವ ಜಿಲ್ಲೆಗಳಲ್ಲಿ ಆಗಿದೆ, ಬೆಳಗಾಂ, ಬಿಜಾಪುರ, ಬಾಗಲಕೋಟೆ ...,

ಶ್ರೀ ಜೆ.ಟಿ. ಪಾಟೀಲ್:- ಬಾಗಲಕೋಟೆಯಲ್ಲಿ 4 ಕೋಟಿ ರೂಪಾಯಿಗಳು ಬಾಕಿ ಇದ್ದು ಅದು ಬರಬೇಕಾಗಿದೆ.

ಶ್ರೀ ಸಿದ್ದರಾಮಯ್ಯ:- ಇದಕ್ಕಾಗಿ ನಮಗೆ ಕೇಂದ್ರ ಸರ್ಕಾರದಿಂದ 82 ಕೋಟಿ ರೂಪಾಯಿಗಳು ಬಂದಿದೆ. ಇಲ್ಲಿ ನಾವು ಒಟ್ಟು 326 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):- ಅಲ್ಲಿ ರೈತರಿಗೆ ಏನಾಗಿದೆ ಎಂದರೆ ಕೆಲವರಿಗೆ ಮುಟ್ಟಿದೆ, ಇನ್ನು ಕೆಲವರಿಗೆ ಮುಟ್ಟಿರುವುದಿಲ್ಲ.

ಶ್ರೀ ಸಿದ್ದರಾಮಯ್ಯ:- ಆಲಿಕಲ್ಲು ಮಳೆಯಿಂದ ನಷ್ಟವಾದವರಿಗೆ ಕರ್ನಾಟಕದ ಇತಿಹಾಸದಲ್ಲಿ ಇಷ್ಟೊಂದು ಪರಿಹಾರವನ್ನು ಕೊಟ್ಟಿರುವಂತಹದ್ದು ಇದೇ ಮೊದಲು. ಕರ್ನಾಟಕದ ಸುಮಾರು 35 ತಾಲ್ಲೂಕುಗಳಲ್ಲಿ ಬರಗಾಲ ಇದೆ ಎಂದು ನಾವು ಘೋಷಣೆ ಮಾಡಿದ್ದೇವೆ. ಸುಮಾರು 9 ಜಿಲ್ಲೆಗಳಲ್ಲಿ 35 ತಾಲ್ಲೂಕುಗಳಲ್ಲಿ ಬರಗಾಲ ಇದೆ ಎಂದು ಘೋಷಣೆಯನ್ನು ಮಾಡಿದ್ದೇವೆ. ಇದರಿಂದ ರಾಜ್ಯದಲ್ಲಿ ಸುಮಾರು 3580 ಕೋಟಿ ರೂಪಾಯಿಗಳ ನಷ್ಟವಾಗಿದೆ. ಅದರಲ್ಲಿ ಕೃಷಿ ಬೆಳೆಗೆ 2700 ಕೋಟಿ ರೂಪಾಯಿಗಳು, ತೋಟಗಾರಿಕೆ ಬೆಳೆಗೆ ಸುಮಾರು 882 ಕೋಟಿ ರೂಪಾಯಿಗಳ ಬೆಳೆ ಹಾನಿಯಾಗಿದೆ. SDRF ಮಾರ್ಗಸೂಚಿಯ ಪ್ರಕಾರ ಕೇಂದ್ರ ಸರ್ಕಾರಕ್ಕೆ 779 ಕೋಟಿ ರೂಪಾಯಿಗಳ

ಮನವಿ ಪತ್ರವನ್ನು ಸಲ್ಲಿಸಿದ್ದೇವೆ. ಇದನ್ನು ಸಲ್ಲಿಸಿ ಈಗಾಗಲೇ 3 ತಿಂಗಳಿಗಿಂತ ಜಾಸ್ತಿಯಾಯಿತು. ನಮಗೆ ಕೇಂದ್ರ ಸರ್ಕಾರವು ಇಲ್ಲಿಯವರೆವಿಗೆ ಏನೂ response ಮಾಡಿರುವುದಿಲ್ಲ. ನಾವು flood ಗೂ ಸಹ ನಾವು ಪರಿಹಾರವನ್ನು ಕೊಟ್ಟಿದ್ದೇವೆ. ಇದಕ್ಕಾಗಿ ನಾವು ಸುಮಾರು 260 ಕೋಟಿ ರೂಪಾಯಿಗಳನ್ನು claim ಮಾಡಿದ್ದೇವೆ. ಇವತ್ತಿನವರೆಗೆ ಕೇಂದ್ರ ಆ ಹಣವನ್ನೂ ಸಹ ನಮಗೆ ಕೊಟ್ಟಿರುವುದಿಲ್ಲ. ಬರ ಪರಿಹಾರಕ್ಕೂ ಮತ್ತು flood ಗೂ ಸಹ ಕೊಟ್ಟಿರುವುದಿಲ್ಲ ಎರಡಕ್ಕೂ ಮನವಿಯನ್ನು ಕೊಟ್ಟಿದ್ದೆವು. ಅವರು ಇಲ್ಲಿಗೆ ಬಂದು ಹೋದರು. ಕೇಂದ್ರ ಸರ್ಕಾರದವರ ಒಂದು ತಂಡ ಇಲ್ಲಿಗೆ ಬಂದಿತ್ತು. ಆ ತಂಡದ ಅಧಿಕಾರಿಗಳು ಬಂದಿದ್ದರು, ನಾವು ಕೂಡ ಅವರ ಜೊತೆಯಲ್ಲಿ ಚರ್ಚೆ ಮಾಡಿದೆವು. ಅನೇಕ ಜಿಲ್ಲೆಗಳಿಗೆ ಹೋಗಿ ಅವರು ಬೇಟಿ ಮಾಡಿದರು. ಅವರು ಕರ್ನಾಟಕಕ್ಕೆ ನವೆಂಬರ್ ತಿಂಗಳಲ್ಲಿ ಬಂದಿದ್ದರು. ಕೋಲಾರ, ಚಿಕ್ಕಬಳ್ಳಾಪುರ, ಬೀದರ್, ಗುಲ್ಬರ್ಗಾ, ಬೆಂಗಳೂರು, ಬೆಂಗಳೂರು (ಗ್ರಾಮಾಂತರ), ತುಮಕೂರು ಈ ಜಿಲ್ಲೆಗಳಿಗೆ ಹೋಗಿ ಬಂದಿದ್ದಾರೆ. ಆದರೂ ಕೂಡ ಸರ್ಕಾರದಿಂದ NDRF ನಲ್ಲಿ 123 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದನ್ನು ಬಿಟ್ಟರೆ ಅದಕ್ಕಿಂತ ಜಾಸ್ತಿ ಬರಲಿಲ್ಲ. ನಾವು ರಾಜ್ಯ ಸರ್ಕಾರದಿಂದ ಸುಮಾರು 573 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಿದ್ದೇವೆ. Flood ನಲ್ಲಿ ನಷ್ಟಕ್ಕೊಳಗಾದಂಥ ರೈತರಿಗೆ ಮತ್ತು ಬರಗಾಲದಲ್ಲಿ ಆದಂಥ ಕೆಲಸಗಳಿಗೆ 573.67 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದನ್ನು ನಾನು ಸದನದ ಗಮನಕ್ಕೆ ತರಬಯಸುತ್ತಿದ್ದೇನೆ.

**ಶ್ರೀ ಬಿ.ಆರ್. ಪಾಟೀಲ್:–** ಆಲಿಕಲ್ಲು ಮಳೆಯಿಂದ ಆದ ನಷ್ಟಕ್ಕೆ ನಮ್ಮ ಜಿಲ್ಲೆಗೆ ಇನ್ನೂ ಅರ್ಧ ಹಣ ಬಾಕಿ ಬರಬೇಕಾಗಿದೆ. ಇನ್ನೂ 17.00 ಕೋಟಿ ರೂಪಾಯಿಗಳು ನಮ್ಮ ಜಿಲ್ಲೆಗೆ ಬರಬೇಕು. ಇನ್ನೂ ಬಂದಿಲ್ಲ.

**ಶ್ರೀ ಸಿದ್ದರಾಮಯ್ಯ:–** ನಾವು ಹಣ ಕೊಟ್ಟಿದ್ದೇವೆ. ಸುಮಾರು 500 ಚಿಲ್ಲರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದರೆ ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲ. ನಾವು ನಮ್ಮ ಕೈಯಿಂದಲೂ ಸಹ ಖರ್ಚು ಮಾಡಿದ್ದೇವೆ. ನಿಮ್ಮ ಜಿಲ್ಲೆಯ ಬಗ್ಗೆ ಏನಿದೆ, ಅದನ್ನು ಪರಿಶೀಲನೆ

ಮಾಡೋಣ. ಹಿಂದೆಯೇ ತಹಶೀಲ್ದಾರ್, DC ಗಳೆಲ್ಲಾ ಸರ್ವೆ ಮಾಡಿದ್ದಾರಲ್ಲಾ Agriculture department ನವರು....,

**ಶ್ರೀ ಜೆ.ಟಿ. ಪಾಟೀಲ್**:- ಕೆಲವು ಅಧಿಕಾರಿಗಳು ಯಾರಿಗೆ ಕೊಡಬೇಕೋ ಅವರಿಗೆ ಕೊಟ್ಟಿಲ್ಲ ಯಾರಿಗೆ ಸಿಗಬಾರದೋ ಅವರಿಗೆ ಕೊಟ್ಟಿದ್ದಾರೆ. ಅದರಲ್ಲಿಯೂ ಸಹ ತಾರತಮ್ಯವಾಗಿದೆ. ದಯಮಾಡಿ ಈ ಬಗ್ಗೆ enquiry ಮಾಡಿಸಬೇಕು.

**ಅಧ್ಯಕ್ಷರು**:- ಈ ಬಗ್ಗೆ ಕೃಷಿ ಸಚಿವರಿಗೆ ಬರೆದು ಕೊಡಿ. ಆ DC ಏನು ಮಾಡುತ್ತಾರೆ ಅಲ್ಲಿ?

**ಶ್ರೀ ಸಿದ್ದರಾಮಯ್ಯ**:- ನೀರಾವರಿ ಬಗ್ಗೆ ರಾಯರೆಡ್ಡಿಯವರು ಬಹಳ ದೀರ್ಘವಾಗಿ ಹೇಳಿದ್ದಾರೆ.

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ)**:- ಆ Food Park ನಲ್ಲಿ ದೊಡ್ಡ ಅನಾಹುತವೇ ನಡೆಯುತ್ತಿದೆ. ದಯಮಾಡಿ ಅದೂ ಕೃಷಿಗೆ ಸಂಬಂಧಪಟ್ಟಿದ್ದಾಗಿದೆ.

**ಅಧ್ಯಕ್ಷರು**:- ಬರುತ್ತಾರೆ ತಾಳಿ, ಇನ್ನೂ industry ಗೆ ಬಂದಿಲ್ಲ.

**ಶ್ರೀ ಆರ್.ವಿ. ದೇಶಪಾಂಡೆ**:- ಪ್ರತಿಯೊಂದು ಪ್ರಶ್ನೆಗೆ ಉತ್ತರ ಕೊಡಲಿಕ್ಕಾಗುತ್ತದೆಯೇ? ಹಲವಾರು ಜನ ಶಾಸಕರು ಇದ್ದಾರೆ. Overall, ಏನು note ಮಾಡುತ್ತಿದ್ದಾರೆ ಅದು ಕೇಳುವುದು ಬಹಳವಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:- ಅವರೇನು member ಅಲ್ಲವೇ? ಅವರಿಗೆ ಜನ ಓಟು ಮಾಡಿ ಇಲ್ಲಿಗೆ ಕಳುಹಿಸಿಲ್ಲವೇ? ನೀವು ಮಾತ್ರ ಕೇಳಬೇಕು, ಅವರು ಕೇಳಬಾರದೆಂದು ಇದೆಯೆ?

**ಶ್ರೀ ಆರ್. ಅಶೋಕ್**:- ನಿಮ್ಮ ಶಾಸಕಾಂಗ ಸಭೆಯಲ್ಲಿ ಅವಕಾಶ ಸಿಕ್ಕಿಲ್ಲವೆಂದು ಇಲ್ಲಿ ಕೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಏನಿಲ್ಲ, ಅಸೆಂಬ್ಲಿಗೆ ಹೋಗಿ ಎಂದು ಇಲ್ಲಿಗೆ ಕಳುಹಿಸಿರುವುದು, ಜನ ಅವರನ್ನು ಕಳುಹಿಸಿರುವುದು ಶಾಸಕಾಂಗ ಸಭೆಗಲ್ಲ. ಅವರನ್ನು ಶಾಸಕಾಂಗ ಸಭೆಗೆ ಹೋಗಿ ಎಂದು ಕಳುಹಿಸಿಲ್ಲ, ವಿಧಾನಸಭೆಗೆ ಹೋಗಿ ಎಂದು ಅವರನ್ನು ಕಳುಹಿಸಿರುವುದು.

ಮಾನ್ಯ ಅಧ್ಯಕ್ಷರೆ, ನರೇಗಾದಲ್ಲಿ ಈ ಸಾರಿ ಕೇಂದ್ರ ಸರ್ಕಾರ ಎಷ್ಟು ಹಣ ಕೊಡಲಿಕ್ಕೆ ಒಪ್ಪಿಕೊಂಡಿದ್ದರೋ ಅಷ್ಟು ಹಣ ಈ ವರ್ಷ ಅವರಿಗೆ ಕೊಡಲಿಕ್ಕಾಗಲಿಲ್ಲ. ಈ ವರ್ಷ ಅಪ್ರೂವಲ್ ಆಗಿದ್ದು 3,154 ಕೋಟಿ ರೂಪಾಯಿಗಳು.

**ಶ್ರೀ ಬಸವರಾಜ ರಾಯರೆಡ್ಡಿ:-** ನೀರಾವರಿ ಬಗ್ಗೆ reference ಮಾಡಿ ಅಲ್ಲಿಗೆ ಕೈಬಿಟ್ಟಿರಿ.

**ಶ್ರೀ ಸಿದ್ದರಾಮಯ್ಯ:-** ಆ ವಿಷಯಕ್ಕೆ ಬರುತ್ತೇನೆ. 3,154 ಕೋಟಿ ರೂಪಾಯಿಗಳು. ಕಳೆದ ವರ್ಷ 2,133 ಕೋಟಿ ರೂಪಾಯಿಗಳಿತ್ತು. ರಾಜ್ಯ ಸರ್ಕಾರ ಒಳ್ಳೆಯ performance ಮಾಡಿದೆ ಎಂದು ಹೇಳಿ ಈ ಸಾರಿ ಹೆಚ್ಚು ಮಾಡಿ 3,154 ಕೋಟಿ ರೂಪಾಯಿಗಳನ್ನು ಅಪ್ರೂವಲ್ ಮಾಡಿದರು, ಆದರೆ ಇಲ್ಲಿಯವರೆಗೆ ಬಿಡುಗಡೆಯಾಗಿರುವುದು ಕೇವಲ 57% ಮಾತ್ರ. ಹೋದ ವರ್ಷ ಸಹ 78% ಬಿಡುಗಡೆಯಾಯಿತು. ಈ ವರ್ಷ 57% ಬಿಡುಗಡೆಯಾಗಿದೆ. Final installment release ಆಗಿಬಿಟ್ಟಿದೆ.

**ಅಧ್ಯಕ್ಷರು:-** ಇದರಲ್ಲಿ timely ಅವರಿಗೆ payment ಮಾಡದಿರುವುದರಿಂದ ಜನರಿಗೆ ಒಂದು ರೀತಿ ಜುಗುಪ್ಸೆ ಬಂದುಬಿಟ್ಟಿದೆ.

**ಶ್ರೀ ಸಿದ್ದರಾಮಯ್ಯ:-** ಇಲ್ಲ, Utilization Certificate ಎಲ್ಲಾ ಕೊಟ್ಟಿದ್ದೇವೆ.

**ಶ್ರೀ ಜಗದೀಶ್ ಶೆಟ್ಟರ್:** Utilization Certificate ಕಳುಹಿಸಿಕೊಡಬೇಕು, procedure ಇದೆ. ನೋಡಿ ಅದರ ಬಗ್ಗೆ verify ಮಾಡಿ.

ಶ್ರೀ ಸಿದ್ದರಾಮಯ್ಯ:- ಎಲ್ಲಾ procedure ಮಾಡಿದೆ. ಈ ವರ್ಷ 1,700 ಕೋಟಿ ಚಿಲ್ಲರೆ ಅಷ್ಟೇ ಬಂದಿರತಕ್ಕಂಥದ್ದು, ಬಾಕಿ ಇರುವ ಹಣ ಬರುವ ಸಾಧ್ಯತೆ ಇಲ್ಲ. ನೀವು ಸ್ವಲ್ಪ ಕೇಂದ್ರ ಸರ್ಕಾರಕ್ಕೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್:- ನೀವು Utilization Certificate, report ಎಲ್ಲಾ ಕಳುಹಿಸಿರಿ.

ಶ್ರೀ ಸಿದ್ದರಾಮಯ್ಯ:- ಎಲ್ಲಾ ಕೊಟ್ಟಿದ್ದೇವೆ. ಅದಕ್ಕಾಗಿಯೇ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳ 15 ಅಂಶಗಳ ಕಾರ್ಯಕ್ರಮಗಳು ಸರಿಯಾಗಿ ಆಗಲಿಲ್ಲವೆಂದು ಹೇಳಿದಿರಿ, because of this. ಇದಕ್ಕೆಲ್ಲಾ ಸಂಬಂಧವಿತ್ತು. ಯಾವಾಗ ಹಣ ಬರಲಿಲ್ಲ. ಆಗ ಈ ಕಾರ್ಯಕ್ರಮಗಳಿಗೆಲ್ಲಾ ಸ್ವಲ್ಪ ಕುಂಠಿತವಾಗಿವೆ. ನೀರಾವರಿ ಬಗ್ಗೆ ರಾಯರೆಡ್ಡಿಯವರೇ ದೀರ್ಘವಾಗಿ ಮಾತನಾಡಿದ್ದಾರೆ. ರಾಯರೆಡ್ಡಿಯವರು ಮಾತನಾಡುತ್ತಾ ಮತ್ತು ಬೇರೆಯವರು ನೀರಾವರಿ ಬಗ್ಗೆ ಹೇಳುವಾಗ ಹೆಚ್ಚು ಹಣವನ್ನು ನೀರಾವರಿಗೆ ಕೊಡಬೇಕು, ಹಿಂದಿನ ಸರ್ಕಾರದವರೆಲ್ಲಾ ಎಷ್ಟೆಷ್ಟು ಕೊಟ್ಟಿದ್ದರು ಎನ್ನುವುದನ್ನೆಲ್ಲಾ ಹೇಳಿಕೊಂಡು ಬಂದಿದ್ದಾರೆ. ನಾನು ಪುನಃ ಅದನ್ನೆಲ್ಲಾ repeat ಮಾಡಲಿಕ್ಕೆ ಹೋಗುವುದಿಲ್ಲ. ಎಷ್ಟು percent ಕೊಟ್ಟರು, ಎಷ್ಟು ಹಣವನ್ನು ಕೊಟ್ಟರು ಎಂದು ಹೇಳಿದ್ದಾರೆ. ನಾವು ಹೊಸಪೇಟೆಯಿಂದ ಕೂಡಲ ಸಂಗಮದವರೆಗೆ ಒಂದು ಪಾದಯಾತ್ರೆ ಮಾಡಿದ್ದೆವು. ಅದರ ಉದ್ದೇಶವೇನೆಂದರೆ, ಆ ಭಾಗದಲ್ಲಿರುವ ನೀರಾವರಿ ಯೋಜನೆಗಳು ತ್ವರಿತಗತಿಯಲ್ಲಿ ಆಗಬೇಕು, ತ್ವರಿತಗತಿಯಲ್ಲಿ ಮಾಡಿ ಎಂದು ಒತ್ತಾಯ ಮಾಡಲಿಕ್ಕೋಸ್ಕರ ಆ ಪಾದಯಾತ್ರೆಯನ್ನು ಮಾಡಿದ್ದೆವು. ಅದರ ಉದ್ದೇಶವೇನೆಂದರೆ, ಆ ಭಾಗದಲ್ಲಿರುವ ನೀರಾವರಿ ಯೋಜನೆಗಳು ತ್ವರಿತಗತಿಯಲ್ಲಿ ಆಗಬೇಕು, ತ್ವರಿತಗತಿಯಲ್ಲಿ ಮಾಡಿ ಎಂದು ಒತ್ತಾಯ ಮಾಡಲಿಕ್ಕೋಸ್ಕರ ಆ ಪಾದಯಾತ್ರೆಯನ್ನು ನಾವು ಮಾಡಿದ್ದೆವು. ಕೂಡಲ ಸಂಗಮದಲ್ಲಿ ಪಾದಯಾತ್ರೆ ಅಂತ್ಯವಾಗಿತ್ತು. ಅಲ್ಲಿ ಮಾತನಾಡುವಾಗ ನಾನು ಹೇಳಿದ್ದೆ. ಕಾರಜೋಳರವರು ಇಲ್ಲ, ಕೇವಲ Upper Krishna ಗೆ 10,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ ಎಂದು ಅವರು ಹೇಳಿದರು. ಅದನ್ನು

ನಾನು ಈಗಾಗಲೇ ಇಲ್ಲವೆಂದು ಹೇಳಿದ್ದೇನೆ. 10,000 ಕೋಟಿ ರೂಪಾಯಿಗಳು ಕನಿಷ್ಠ ನೀರಾವರಿಗೆ ಖರ್ಚು ಮಾಡುತ್ತೇವೆಂದು ಹೇಳಿದ್ದೆನು. ನಾವು ಕಳೆದ ವರ್ಷ ನೀರಾವರಿಗೆ 10,000 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ಈ ವರ್ಷ ಕೂಡ 11,300 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. 2008–09 ರಿಂದ 2012–13 ರವರೆಗೆ 5 ವರ್ಷಗಳಲ್ಲಿ ನೀರಾವರಿಗೆ ಖರ್ಚು ಮಾಡಿರುವ ಹಣ 18,769–00 ಕೋಟಿ ರೂಪಾಯಿಗಳು. ನಾವು 2013–14, 2014–15 ರಲ್ಲಿ ಸುಮಾರು 20,000 ಚಿಲ್ಲರೆ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಆಗಿನ ಪರಿಸ್ಥಿತಿ ಬೇರೆ. ನಮಗೆ ಮೂರನೆ ಹಂತದ ಕೃಷ್ಣಾ ಯೋಜನೆಗೆ ನ್ಯಾಯಾಧಿಕರಣ ತೀರ್ಪು ಬಂದಿರಲಿಲ್ಲ. 24.256 mt. ರಲ್ಲಿ ನಮಗೆ 177 ಟಿಎಂಸಿ ನೀರು ಹೆಚ್ಚುವರಿ ಸಿಕ್ಕಿತು. ಅದರ utilization ಸಲುವಾಗಿ 17,200 ಕೋಟಿ ರೂಪಾಯಿಗಳಿಗೆ ಕ್ರಿಯಾ ಯೋಜನೆ ಮಾಡಿ ಅನುಮೋದನೆ ಕೊಟ್ಟಿದ್ದೇವೆ. ಅದಕ್ಕೆ ಹಣ ನೀವು ಕೊಡಿ ಎಂದು ಕೇಳುತ್ತಿದ್ದೇವೆ.

**ಶ್ರೀ ಸಿದ್ದರಾಮಯ್ಯ:–** ಅದೆಲ್ಲಾ ಹೇಳಿದ್ದೀರಿ. ಆಯಿತು. ತೀರ್ಪು ಬಂದದ್ದು 2010 ರಲ್ಲಿ. ನೀವು ಹೇಳಿದ್ದು 2012ರಲ್ಲಿ. 2012 ರಲ್ಲಿ ಇಲ್ಲೇ ಚರ್ಚೆಯಾಯಿತಲ್ಲಾ. ನಮ್ಮ ಈಗಿನ ನೀರಾವರಿ ಸಚಿವರೇ ಇದರ ಬಗ್ಗೆ ಚರ್ಚೆ ಪ್ರಾರಂಭ ಮಾಡಿದ್ದರು. ಆಗ ವಿರೋಧ ಪಕ್ಷದಲ್ಲಿ ಕುಳಿತು ಆ ಚರ್ಚೆಯಲ್ಲಿ ನಾನೂ ಭಾಗವಹಿಸಿದ್ದೆನು. 17,200 ಕೋಟಿ ರೂಪಾಯಿಗಳ ಯೋಜನೆ ಆಗಿತ್ತು. ಆದರೆ ಆಮೇಲೆ ಅದಕ್ಕೆ ಹಣ ಕೊಡಲಿಲ್ಲ.

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):–** Upper Krishna Project ಗೆ ವರ್ಷಕ್ಕೆ ಕನಿಷ್ಠ 10,000 ಕೋಟಿ ರೂಪಾಯಿಗಳನ್ನು ಕೊಡಿ. ಆ ಯೋಜನೆ ಮುಗಿಯಲಿಕ್ಕೆ 5 ವರ್ಷ ಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ:–** ಈಗ ಮೂರನೇ ಹಂತದಲ್ಲಿ 130.9 ಟಿಎಂಸಿ. ನೀರನ್ನು ಬಳಸಿಕೊಳ್ಳಬೇಕಾಗಿದೆ. ಇದರಲ್ಲಿ 9 ಉಪ ಯೋಜನೆಗಳಿವೆ, ಅದರಲ್ಲಿ ಈಗಾಗಲೇ 8 ಉಪ ಯೋಜನೆಗಳು ಪ್ರಾರಂಭವಾಗಿವೆ. ಇನ್ನೊಂದು

ಕೂಡ ಈಗ ಪ್ರಾರಂಭವಾಗಬೇಕು. ಮತ್ತೆ R & R ಬಗ್ಗೆ ಕೂಡ ನಾವು ಈಗಾಗಲೇ ಸರ್ವೆ ಮಾಡಿ ಕ್ರಮ ತೆಗೆದುಕೊಂಡಿದ್ದೇವೆ. ಅದನ್ನು ಎಷ್ಟು ಜಮೀನು ಮಾಡಬೇಕೆಂಬ ಬಗ್ಗೆ Global Tender ಕರೆದು ಇದನ್ನೆಲ್ಲಾ ಮಾಡುತ್ತಿದ್ದೇವೆ. ನೀರಾವರಿಗೆ ಎಷ್ಟು maximum ಕೊಡಲಿಕ್ಕೆ ಸಾಧ್ಯವಾಗುತ್ತದೆ, ಅಷ್ಟು ಅನುದಾನವನ್ನು ಕೊಡುತ್ತೇವೆ. 10,000 ಕೋಟಿ ರೂಪಾಯಿಗಳು minimum ಕೊಡುತ್ತೇವೆಂದು ಹೇಳಿದ್ದೆ. 10,000 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆನ್ನುವ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ನಾನು ಮುಖ್ಯಮಂತ್ರಿಯವರಲ್ಲಿ ಕೇಳಬಯಸುವುದೇನೆಂದರೆ, next year ಗೆ plan expenditure ನಲ್ಲಿ 25% ನಷ್ಟು ಆದರೂ ಮಾಡಿ.

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):-** Minimum 10,000 ಕೋಟಿ ರೂಪಾಯಿಗಳನ್ನು ಮಾಡಿ.

**ಅಧ್ಯಕ್ಷರು:-** ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಇಲ್ಲಿ ಏನು reserve bank ಇದೆಯೇ?

**ಶ್ರೀ ಬಸವರಾಜ ರಾಯರೆಡ್ಡಿ:-** ಪ್ರಯತ್ನದ ಪ್ರಶ್ನೆ ಅಲ್ಲ ಅಧ್ಯಕ್ಷರೆ.

**ಶ್ರೀ ಜಗದೀಶ್ ಶೆಟ್ಟರ್:-** Upper Krishna project ಗೆ ಜಾಸ್ತಿ ಹಣ ಬೇಕಾಗುತ್ತದೆ.

**ಶ್ರೀ ಗೋವಿಂದ ಎಂ. ಕಾರಜೋಳ:-** 50,000 ಕೋಟಿ ರೂಪಾಯಿಗಳು ಕೇವಲ ಕೃಷ್ಣಾ ಯೋಜನೆಗೆ ಬೇಕು.

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):-** ಒಂದು ವರ್ಷಕ್ಕೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟರೆ ಐದು ವರ್ಷದಲ್ಲಿ ಆ project ಮುಗಿಯುತ್ತದೆ.

**ಅಧ್ಯಕ್ಷರು:–** ಕಾರಜೋಳ, ಅದಕ್ಕೆ ಒಂದು ಆದಾಯ ಇದೆ, ಮಿತಿ ಇರುತ್ತದೆ. ಆ ಮಿತಿಯೊಳಗೆ ಹೇಗೆ ಮಾಡಬೇಕೆಂದು ಹೇಳಿ, ಯಾರಾದರೂ ಹೇಳುವಿರಾ? ಏನು ಸಾಲ ತರಬೇಕೇ? ಏನು ಮಾಡಬೇಕು ಎಂದು ಹೇಳಿ. ಅದೊಂದೇ ಅಲ್ಲ ಎಲ್ಲವೂ ಇವೆ.

(ಗೊಂದಲ)

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):–** ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೆ ಬಜೆಟ್‌ನಲ್ಲಿ 30% ಈ ವರ್ಷ ಹಣ ಇಡಿ ಸರ್.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಇಡೀ ರಾಜ್ಯದ ಬಗ್ಗೆ ಸಮಗ್ರವಾಗಿ ನೋಡಬೇಕಾಗುತ್ತದೆ. ನೀರಾವರಿ ಆದ್ಯತೆ ವಲಯ.

**ಶ್ರೀ ಬಸವರಾಜ್ ರಾಯರೆಡ್ಡಿ:–** ಇಲ್ಲದಿದ್ದರೆ ನಿಮ್ಮ escalation ಜಾಸ್ತಿಯಾಗುತ್ತದೆ.

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ:–** ನೀರಾವರಿ ಮಾಡುವುದು ಬಹಳ ಮುಖ್ಯ ಸರ್. ಆದರೆ, .....

(ಗೊಂದಲ)

**ಶ್ರೀ ಬಸವರಾಜ್ ರಾಯರೆಡ್ಡಿ:–** escalation ಜಾಸ್ತಿಯಾಗುತ್ತದೆ.

(ಗೊಂದಲ)

**ಅಧ್ಯಕ್ಷರು:–** ಮಾರಾಯ್ರೆ, ಇನ್ನೂ ಬಜೆಟ್ ಮಂಡಿಸುತ್ತಾರೆ. ಇನ್ನೂ ನೀರಾವರಿ ಬೇಡಿಕೆ ಬರುತ್ತದೆ. ಆಗ ಎಷ್ಟೇ ಚರ್ಚೆ ಬೇಕಾದರೂ ಮಾಡುವಿರಂತೆ ತಗೊಳ್ರಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಸರ್ ತುಂಗಭದ್ರ . .

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:- ಸರ್ 10 ಸಾವಿರ ಕೋಟಿ ರೂಪಾಯಿಗಳಲ್ಲಿ ಈ ವರ್ಷ upper Krishna ಗೆ ಎಷ್ಟು ಖರ್ಚು ಮಾಡಿದ್ದೀರಿ?

(ಗೊಂದಲ)

ಅಧ್ಯಕ್ಷರು:- ಕೇಳ್ರಿ ಮಾರಾಯ್ರೆ, ನೀವು ಮಂತ್ರಿಯಾದವರು.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:- ಮಂತ್ರಿಯಾದವರು ಮಾತನಾಡಲೇ ಬಾರದೇ. ಪದೇ ಪದೇ ಮಂತ್ರಿಯಾದವರು ಎಂದು ನಮ್ಮ ಬಾಯಿ ಮುಚ್ಚಿಸುತ್ತೀರಲ್ಲಾ?

ಅಧ್ಯಕ್ಷರು:- ನಾಳೆ ಬಜೆಟ್ ಬರುತ್ತದೆ. ಮತ್ತೆ ನೀರಾವರಿ ಇಲಾಖೆಯ ಬೇಡಿಕೆ ಬರುತ್ತದೆ. ಚರ್ಚೆ ಮಾಡುವುದಕ್ಕೆ ಬೇಕಾದಷ್ಟು ಇದೆ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):- ಈ ಸಲ ರಾಜ್ಯದಲ್ಲಿ ನೀರಾವರಿಗೆ ಇಟ್ಟಿರುವ ಅನುದಾನಲ್ಲಿ ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ರಾಜ್ಯದಲ್ಲಿ ನೀರಾವರಿಗೆ ಈ ವರ್ಷ ಡಿಸೆಂಬರ್‌ವರೆಗೆ 6,046 ಕೋಟಿ ರೂಪಾಯಿಗಳು ಖರ್ಚಾಗಿದೆ.

ಶ್ರೀ ಬಸವರಾಜ್ ಬೊಮ್ಮಾಯಿ:- ಕರೆಕ್ಟ್ ಖರ್ಚಾಗಿದೆ. ಅದರಲ್ಲಿ upper Krishna ಗೆ ಎಷ್ಟು ಖರ್ಚಾಗಿದೆ ಹೇಳಿ?

ಒಬ್ಬ ಮಾನ್ಯ ಸದಸ್ಯರು:- ತುಂಗಭದ್ರಾದ್ದು ಹೇಳಿ ಸರ್.

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ:–** upper Krishna ಗೆ ಎಷ್ಟು ಖರ್ಚಾಗಿದೆ? ಎಂದು ಹೇಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಬಸವರಾಜ್‌ರವರೆ, ಕುಳಿತುಕೊಳ್ಳಿ.

**ಶ್ರೀ ಬಸವರಾಜ್ ಬೊಮ್ಮಾಯಿ:–** ಅದಕ್ಕೆ ನಾನು ಹೇಳುವುದು ಏನೆಂದರೆ, ಮುಂದಿನ ಬಜೆಟ್‌ನಲ್ಲಿ project-wise ಹಣವನ್ನು ನೀವು ಕೊಡಿ. ಆದರೆ ಬಹಳ ಸ್ಪಷ್ಟವಾದ ರೀತಿಯಲ್ಲಿ upper Krishna ಕೂಡ progress ಆಗುತ್ತದೆ, ಇತರೆ project ಸಹ progress ಆಗುತ್ತದೆ. ಇಲ್ಲದಿದ್ದರೆ ₹ 10 ಸಾವಿರ ಕೋಟಿ ಹಣದಲ್ಲಿ ನೀರಾವರಿಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನೂ ನೀವು ಖರ್ಚು ಮಾಡಲಿಲ್ಲವೆಂದರೆ ಏನು ಪ್ರಯೋಜನ? ತಮ್ಮ ಬಜೆಟ್‌ನಲ್ಲಿ Upper Krishna ಬಗ್ಗೆ ಏನಿದೆ? . ..

**ಅಧ್ಯಕ್ಷರು:–** ನಿಮಗೆ ಅನುಭವವಿದೆ. ಆ ಇಲಾಖೆಯನ್ನು handle ಮಾಡಿದ್ದೀರಿ.

**ಶ್ರೀ ಬಸವರಾಜ್ ಬೊಮ್ಮಾಯಿ:–** ಸರ್ ಅಂದರೆ, .....

**ಅಧ್ಯಕ್ಷರು:–** ಸರ್ಕಾರದಲ್ಲಿ ಇಂತಿಷ್ಟು ಆದಾಯ ಬರುತ್ತದೆ. ಇಂತಹದ್ದಕ್ಕೆ ಇಂತಿಷ್ಟು ಎಂದು ಕೊಡಬೇಕು. ಆದಾಯವನ್ನು ಹೇಗೆ ರೂಢಿಸಬೇಕು, ಇದೆಲ್ಲಾ ಹೇಳಿ.

**ಶ್ರೀ ಬಸವರಾಜ್ ಬೊಮ್ಮಾಯಿ:–** ಅದನ್ನು ಹೇಳಿದ್ದೇವೆ ಸರ್. ಅದನ್ನು ಮಾಡುತ್ತಿಲ್ಲವೆಂದು ಈಗ ನಾವು ಕೇಳುತ್ತಿದ್ದೇವೆ.

**ಅಧ್ಯಕ್ಷರು:–** ಆದಾಯ ವಿಚಾರವನ್ನು ನೀವು ಹೇಳಿದ್ದೀರಾ?

**ಶ್ರೀ ಬಸವರಾಜ್ ಬೊಮ್ಮಾಯಿ:–** ಸರ್ ಹೇಳಿದ್ದೇವೆ ಸರ್. ಎಲ್ಲಾ ಹೇಳಿದ್ದೇವೆ.

(ಗೊಂದಲ)

**ಅಧ್ಯಕ್ಷರು:-** ಸುಮ್ಮನೆ ಕಥೆ ಹೇಳುತ್ತೀರಿ.

(ಗೊಂದಲ)

**ಶ್ರೀ ಕೆ.ಎಂ. ಶಿವಲಿಂಗೇಗೌಡ:-** ಬರೀ Upper Krishna ದ ಬಗ್ಗೆ ಹೇಳುತ್ತೀರಿ. ಎತ್ತಿನಹೊಳೆ ಪ್ರಾಜೆಕ್ಟ್ ಏನು ಮಾಡಿದ್ದೀರಿ ಸ್ವಾಮಿ? ಮಾನ್ಯ ಮುಖ್ಯಮಂತ್ರಿಗಳೇ, . . .

**ಒಬ್ಬ ಮಾನ್ಯ ಸದಸ್ಯರು:-** ಮೊದಲು ಎತ್ತಿನಹೊಳೆದು ಹೇಳಿ. ಆಮೇಲೆ Upper Krishna ದ ಬಗ್ಗೆ ಮಾತನಾಡೋಣ.

**ಶ್ರೀ ಸಿದ್ದರಾಮಯ್ಯ:-** KBJNL, ಕೃಷ್ಣಾ ಭಾಗ್ಯ ಜಲ ನಿಗಮ ಇದೆಯೆಲ್ಲಾ, ಅದರಡಿಯಲ್ಲಿ ಡಿಸೆಂಬರ್‌ವರೆಗೆ ಖರ್ಚಾಗಿರುವಂತಹದ್ದು 3,007 ಕೋಟಿ ರೂಪಾಯಿಗಳು.

**ಶ್ರೀ ಬಸವರಾಜ್ ಬೊಮ್ಮಾಯಿ:-** ಅದರಲ್ಲಿ ಕಾಮಗಾರಿಗೆ ಖರ್ಚಾಗಿರುವುದು ₹ 2,500 ಕೋಟಿ. Upper Krishna ಗೆ ಖರ್ಚಾಗಿರುವುದು ಕೇವಲ 500 ಕೋಟಿ ರೂಪಾಯಿಗಳು ಮಾತ್ರ. Upper Krishna ಗೆ specific ಆಗಿ ಖರ್ಚಾಗಿರುವುದು ಡಿಸೆಂಬರ್‌ವರೆಗೆ 470 ಕೋಟಿ ರೂಪಾಯಿಗಳು ಮಾತ್ರ. ಅದಕ್ಕಿಂತ ಹೆಚ್ಚಿಗೆ ಖರ್ಚಾಗಿಲ್ಲ. ನಾನು authentic ಆಗಿ ಹೇಳುತ್ತಿದ್ದೇನೆ. ನೀವು ಕೃಷ್ಣಾ ಭಾಗ್ಯ ಜಲ ನಿಗಮದ್ದು ಸಾಲ ತೋರಿಸುತ್ತಿದ್ದೀರಿ.

(ಗೊಂದಲ)

**ಶ್ರೀ ಗೋವಿಂದ ಎಂ. ಕಾರಜೋಳ:-** ಸಾಲ ಕೊಟ್ಟಿದ್ದನ್ನು ಬಿಟ್ಟರೆ civil work ಗೆ ಖರ್ಚಾಗಿದ್ದು ಕೇವಲ 400 ಕೋಟಿ ರೂಪಾಯಿಗಳು ಮಾತ್ರ. ಉಳಿದದ್ದು ಸಾಲಕ್ಕೆ ಹೋಗಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** Upper Krishna ಗೆ ಡಿಸೆಂಬರ್‌ವರೆಗೆ ಖರ್ಚಾಗಿರುವುದಂತಹದ್ದು ₹ 3,007 ಕೋಟಿ.

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ:-** ಇಲ್ಲ ಸರ್. ಬರೀ Upper Krishna ಗೆ. ಮಂತ್ರಿಗಳಿದ್ದಾರೆ ಕೇಳ್ರಿ, ನೀವು Upper Krishna ಗೆ ಎಷ್ಟು ಖರ್ಚು ಮಾಡಿದ್ದೀರಿ ಎಂದು ಹೇಳಿ?

(ಗೊಂದಲ)

**ಅಧ್ಯಕ್ಷರು:-** ದಯವಿಟ್ಟು ಕೇಳಿ.

**ಶ್ರೀ ಬಸವರಾಜ್ ಬೊಮ್ಮಾಯಿ:-** ನೀವು NRBC ಯಲ್ಲಿ modernization ಗೆ ಖರ್ಚು ಮಾಡಿದ್ದೀರಿ. ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಡಿ.

(ಗೊಂದಲ)

**ಅಧ್ಯಕ್ಷರು:-** ಈ ತರಹ ಚರ್ಚೆಗೆ ನಾನು allow ಮಾಡುವುದಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** No no. ಈ ತರಹ ಚರ್ಚೆಯಾದರೆ ನನಗೆ ಉತ್ತರ ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

**ಅಧ್ಯಕ್ಷರು:-** ಬೇಗ ಪೂರೈಸಿರಿ. 2 ಗಂಟೆಯಾಯಿತು.

(ಗೊಂದಲ)

**ಅಧ್ಯಕ್ಷರು:-** ನಿಮಗೆ ಮಾತನಾಡುವುದಕ್ಕೆ ಇನ್ನೂ ಅವಕಾಶವಿದೆ. ಸುಮ್ಮನಿರಪ್ಪ ನೀವು.

(ಗೊಂದಲ)

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):-** ಸರ್ ನೀರಾವರಿ ಯೋಜನೆ ಬಗ್ಗೆ ಮಾತನಾಡುವುದಕ್ಕೆ ಅವಕಾಶವೇ ಕೊಡದೇ ಹೋದರೆ ಹೇಗೆ? ನಾವು ಆ ಭಾಗದಿಂದ ಬಂದಿದ್ದೇವೆ.

**ಶ್ರೀ ಸಿದ್ದರಾಮಯ್ಯ:-** ನಾವು ಈಗ project-wise allocate ಮಾಡಿದ್ದೇವೆ.

**ಶ್ರೀ ಬಸವರಾಜ್ ಬೊಮ್ಮಾಯಿ:-** ನೀವು ನಿಗಮ ವೈಸ್ ಕೊಟ್ಟಿದ್ದೀರಿ.

**ಶ್ರೀ ಸಿದ್ದರಾಮಯ್ಯ:-** ನಿಗಮ ವೈಸ್ ಕೂಡ ಮಾಡಿದ್ದೇವೆ, project-wise ಕೂಡ ಮಾಡಿದ್ದೇವೆ.

(ಗೊಂದಲ)

**ಅಧ್ಯಕ್ಷರು:-** ಯಾರಾದರೂ ಒಂದು ನಿಗಮಕ್ಕೆ lumpsum ಕೊಡುತ್ತಾರಾ?

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ:-** ಅನ್ಯಾಯವಾಗುತ್ತಿದೆ ಸರ್. ಅವರು ಹೇಳುವಂತಹ ಸರ್ಕಾರಿ figure ನಲ್ಲಿ ನಮಗೆ ಅನ್ಯಾಯವಾಗುತ್ತಿದೆ.

(ಗೊಂದಲ)

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):-** ನಮ್ಮ ಭಾಗಕ್ಕೆ ಅನ್ಯಾಯವಾಗುತ್ತಿದೆ. 50 ವರ್ಷಗಳಿಂದ ನಾವು ಕಾಯುತ್ತಿದ್ದೇವೆ.

(ಗೊಂದಲ)

**ಅಧ್ಯಕ್ಷರು:-** ಯಾರಾದರೂ ಒಂದು ನಿಗಮಕ್ಕೆ lumpsum ಕೊಡುತ್ತಾರಾ? ಆ ನಿಗಮದವರು ಅವರು prepare ಮಾಡಿರತಕ್ಕಂತಹ . ..

(ಗೊಂದಲ)

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಅಧ್ಯಕ್ಷರೆ, ಈಗ ಮುಂದೆ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಅಧ್ಯಕ್ಷರು**:- ಆಯಿತು.

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ)**:- ₹ 10 ಸಾವಿರ ಕೋಟಿಗಳನ್ನು UKP ಗೆ ಕೊಟ್ಟರೆ ನಮಗೆ 5 ವರ್ಷದಲ್ಲಿ ಕಾಮಗಾರಿ ಮುಗಿಯುತ್ತದೆ.

(ಗೊಂದಲ)

**ಅಧ್ಯಕ್ಷರು**:- ಕುಳಿತುಕೊಳ್ಳಿ.

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ)**:- ಇಲ್ಲದೇ ಹೋದರೆ ಮುಗಿಯುವುದಿಲ್ಲ. ನೀವು 500 ಕೋಟಿ..

(ಗೊಂದಲ)

**ಅಧ್ಯಕ್ಷರು**:- ಆಯಿತು ಬಿಡಪ್ಪ. ಹೋಗ್ರಿ, ಡೆಲ್ಲಿಗೆ ಹೋಗಿ ರೈಲ್ವೆ ಬೋಗಿಯಲ್ಲಿ ಹಣ ತುಂಬಿಕೊಂಡು ಬನ್ರಿ.

(ಗೊಂದಲ)

**ಒಬ್ಬ ಮಾನ್ಯ ಸದಸ್ಯರು**:- ಎಲ್ಲಿದೆ? ಅಲ್ಲಿಗೆ ಬರುವುದಕ್ಕೆ ತಯಾರಿದ್ದೇವೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಅಧ್ಯಕ್ಷರೆ, ಬಸವರಾಜ್ ಬೊಮ್ಮಾಯಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಆಂಧ್ರ ಪ್ರದೇಶದ್ದು, ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ.

**ಅಧ್ಯಕ್ಷರು**:- ಹೌದು.

**ಶ್ರೀ ಸಿದ್ದರಾಮಯ್ಯ**:- ಈಗ ಈ ತೆಲಂಗಾಣ ಮತ್ತು ಆಂಧ್ರ ಪುನರ್ ವಿಂಗಡಣೆಯಾದ ಮೇಲೆ, 2014 ರಲ್ಲಿ ಒಂದು ಪುನರ್ ವಿಂಗಡಣೆ ಕಾಯ್ದೆ ಮಾಡಿದ್ದಾರೆ. ಅದರ Section 89 ರಲ್ಲಿ ನ್ಯಾಯಾಧಿಕರಣದ ಕಾಲಾವಧಿ ಎರಡು

ವರ್ಷ ಹೆಚ್ಚು ಮಾಡಿದ್ದಾರೆ, ಅಂದರೆ ವಿಸ್ತರಿಸಿದ್ದಾರೆ. ದಿನಾಂಕ 01.08.2014 ರಿಂದ ಎರಡು ವರ್ಷಗಳ ಕಾಲ ಅದನ್ನು ವಿಸ್ತರಿಸಿದ್ದಾರೆ. ನ್ಯಾಯಾಧಿಕರಣ ಸಭೆ ದಿ. 24.07.2014 ರಲ್ಲಿ ನಡೆದಿದೆ. ಆಗ ನಮ್ಮ respone ನ್ನೆಲ್ಲಾ ಅವರಿಗೆ ಕೊಟ್ಟಿದ್ದೇವೆ. ಕೊಟ್ಟು ಬಹಳ ಸ್ಪಷ್ಟವಾಗಿ ಏನು ಹೇಳಿದ್ದೇವೆ ಎಂದರೆ, ಇವತ್ತು ಏನು ಬ್ರಿಜೇಶ್‌ಕುಮಾರ್‌ರವರ ನ್ಯಾಯಾಧಿಕರಣದಲ್ಲಿ ತೀರ್ಪು ಬಂದಿದೆ, ಅದು ನಮಗೆ ಸಂಬಂಧವಿಲ್ಲ. ಅಂದರೆ, ಅದು ಈಗ ಏನು ಆಂಧ್ರ ಮತ್ತು ತೆಲಂಗಾಣದವರು ಪ್ರಶ್ನೆ ಮಾಡುತ್ತಿದ್ದಾರಲ್ಲಾ, ಅದಕ್ಕೂ ನಮಗೂ ಸಂಬಂಧವಿಲ್ಲ. ಅದು ಅವರಿಬ್ಬರಿಗೇ ಸೀಮಿತವಾಗಿರುವಂತಹದ್ದು ಎಂದು ನಾವು ವಾದ ಮಾಡಿದ್ದೇವೆ ಹಾಗೂ ಮಹಾರಾಷ್ಟ್ರದವರೂ ಕೂಡ ಮಾಡಿದ್ದಾರೆ. ಆದ್ದರಿಂದ, ಅದು ಮತ್ತೆ ದಿ: 25.02.2015 ರಿಂದ ಪ್ರಾರಂಭವಾಗುತ್ತದೆ. ಅದರಲ್ಲಿ ನಮ್ಮ ನಿಲುವು ಬಹಳ ಸ್ಪಷ್ಟವಾಗಿದೆ. ಈಗ ನಮಗೆ 130 ಟಿ.ಎಂ.ಸಿ. ನೀರು allot ಆಗಿದೆ, ಅದನ್ನು ನಾವು ಬಳಸಿಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನಗಳನ್ನೂ ಸಹ ಮಾಡುತ್ತೇವೆ, ನಮ್ಮ ನಿಲುವನ್ನು ಬಹಳ ಸ್ಪಷ್ಟವಾಗಿ ಮತ್ತೊಮ್ಮೆ ನ್ಯಾಯಾಧಿಕರಣಕ್ಕೆ ತಿಳಿಸುತ್ತೇವೆ. ನಮ್ಮ ವಕೀಲರ ಮೂಲಕ ನಮ್ಮ ನಿಲುವನ್ನು ಸಮರ್ಥನೆ ಮಾಡತಕ್ಕಂತಹ ಪ್ರಯತ್ನವನ್ನು ಗಂಭೀರವಾಗಿ ನಾವು ಮಾಡುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಬಗ್ಗೆ ಈಗಾಗಲೇ ನಾವು ಸರ್ವೆ ಮಾಡಿಸಿದ್ದೇವೆ. Land Acquisition Act ಬಂದಿದ್ದರಿಂದ, ಅದಕ್ಕೆ ರೂಲ್ಸ್ ಮಾಡಬೇಕಾಗಿರುವುದರಿಂದ, in the meanwhile, ಇನ್ನೊಂದು ತಿದ್ದುಪಡಿ ಬಂದಿದ್ದರಿಂದ ಸ್ವಲ್ಪ ವಿಳಂಬವಾಯಿತು. ಅದರ ಕಡೆ ಈಗ ಹೆಚ್ಚು ಗಮನ ಕೊಡುತ್ತೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು 2–3 ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರರೆ, 3 ಎಕರೆ 29.5 ಗುಂಟೆ ಜಮೀನನ್ನು change of land use ಗೆ ಕೊಟ್ಟಿದ್ದಾರೆ. ಅದು ಉದ್ಯಾನಕ್ಕೆ ನಿಗದಿಯಾಗಿತ್ತು, ಅದನ್ನು change ಮಾಡಿಬಿಟ್ಟಿದ್ದಾರೆ ಎಂದು ಹೇಳಿದ್ದಾರೆ, ಅದನ್ನು ಕಾನೂನು ಪ್ರಕಾರವಾಗಿ ಮಾಡಿದ್ದೇವೆ. ಹಿಂದೆ 2007 ಕ್ಕಿಂತ ಮುಂಚಿತವಾಗಿ ಅದು

residential purpose ಗೆ ಇತ್ತು. 2007 ರಲ್ಲಿ ಅದನ್ನು acquire ಮಾಡಿಕೊಳ್ಳುವುದಕ್ಕೆ ಉದ್ಯಾನವನ ಮಾಡಬೇಕೆಂದು ಮಾಡಿದರು. ಅಲ್ಲಿ open space ಬಿಟ್ಟು ಉದ್ಯಾನವನ ಮಾಡಬೇಕೆಂದು ಮಾಡಿದರು. ಆದರೆ, BDA ನವರು 2007 ರಿಂದ 2012 ರವರೆಗೆ ಅದನ್ನು acquire ಮಾಡಿಕೊಳ್ಳಲಿಲ್ಲ. Acquire ಮಾಡಿಕೊಳ್ಳದೇ ಹೋದರೆ ಅದು vitiate ಆಗುತ್ತದೆ. ಅಂದರೆ lapse ಆಗುತ್ತದೆ. ಆ ಪ್ರಕಾರ 2012 ಆದಮೇಲೆ, lapse ಆದರೆ, ಅದು ಮತ್ತೆ residential area ಆಗುತ್ತದೆ. ಆದ್ದರಿಂದ ಕಾನೂನು ರೀತಿಯಲ್ಲಿ ಮಾಡಿದ್ದಾರೆ. ಮತ್ತೆ ಕೋರ್ಟ್‌ನ ಆದೇಶವನ್ನೂ ಕೂಡ ಗಮನದಲ್ಲಿಟ್ಟುಕೊಂಡು . .

**ಶ್ರೀ ಜಗದೀಶ್ ಶೆಟ್ಟರ್:-** ಇದರಲ್ಲಿ ಯಾವುದೇ ಕೋರ್ಟ್ ಆದೇಶವೂ ಇಲ್ಲ, ಯಾವುದೂ ಇಲ್ಲ. ಒಂದು ಕೋರ್ಟ್ ಆದೇಶದಲ್ಲಿ Bangalore Metropolitan Committee ಮಾಡಬೇಕು ಎಂದಿದೆ. ಆ ಕಮೀಟಿ ಮುಂದೆ ಹೋಗಬೇಕು. ಆ ಕಮಿಟಿ ಮುಂದೆ ಹೋಗಿಲ್ಲ ಎಂದು ಒಂದನ್ನು reject ಮಾಡುತ್ತಾರೆ. ಈ 2 ಎಕರೆ 39 ಗುಂಟೆ ಜಮೀನು heart of the city Bangalore ನಲ್ಲಿದೆ. ಅದನ್ನು ಒಬ್ಬರು developers ಗೆ ಕೊಟ್ಟಿದ್ದಾರೆ. ನಾನು ಅವರ ಹೆಸರನ್ನೂ ಹೇಳಿಬಿಡುತ್ತೇನೆ. Prestige ಎಂದು ಹೇಳಿ ಒಬ್ಬರು developer ಸಲುವಾಗಿ ಇದನ್ನು ಮಾಡಿದ್ದಾರೆ. ಇದಕ್ಕೆ ನೂರಾರು ಕೋಟಿ ರೂಪಾಯಿಗಳ value ಇದೆ. ಇಂತಹದ್ದನ್ನು ಇವರು ಕಾನೂನು ಮೀರಿ ಮಾಡಿದ್ದಾರೆ. ಇದರ ಬಗ್ಗೆ investigation ಆಗಬೇಕು, ಈ ಬಗ್ಗೆ ನಾನು ಒತ್ತಾಯ ಮಾಡುತ್ತೇನೆ. ಅದು ಕಾನೂನು ರೀತಿಯಲ್ಲಿ ಇದೆಯೋ ಅಥವಾ ಇಲ್ಲವೋ ಎನ್ನುವಂತಹದ್ದರ ಬಗ್ಗೆ investigation ಆಗಲಿ. ಈ ಬಗ್ಗೆ ನಾನು ಮತ್ತೆ ಒತ್ತಾಯ ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಇದು totally legal. ಯಾವುದೇ ಕೋರ್ಟ್ ಆದೇಶ ಉಲ್ಲಂಘನೆಯಾಗಿಲ್ಲ.

**ಶ್ರೀ ಜಗದೀಶ್ ಶೆಟ್ಟರ್:-** ಆ ಬಗ್ಗೆ ನಾನು ಮತ್ತೆ ಒತ್ತಾಯ ಮಾಡುತ್ತೇನೆ. ಕಾನೂನು, ರೂಲ್ಸ್ ಎಲ್ಲವನ್ನೂ ಮೀರಿ ಮಾಡಿದ್ದಾರೆ. ಇದಕ್ಕೆ

ಯಾವುದೇ ಕೋರ್ಟ್ ಆದೇಶವಿಲ್ಲ. ಇದರ investigation ಗೆ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ:- ಕೋರ್ಟ್ ಆದೇಶ ಉಲ್ಲಂಘನೆಯಾಗಿಲ್ಲ. ಕಾನೂನು ಪ್ರಕಾರ ಮಾಡಿದೆ. Section-69 of Karnataka Town and Country Planning Act, Clause-2 ಅದರ ಪ್ರಕಾರ ಅದು ಇದೆ. ನೀವು Section 69, Clause-2 ಅನ್ನು ಓದಿ.

ಶ್ರೀ ಜಗದೀಶ್ ಶೆಟ್ಟರ್:- Court judgment ಇದೆ. ಬೇಕಾದರೆ ನಿಮಗೆ ತೋರಿಸುತ್ತೇನೆ.

ಶ್ರೀ ಸಿದ್ದರಾಮಯ್ಯ:- ಅದನ್ನು ಓದದೇ ಸುಮ್ಮನೆ ನೀವು . .

ಶ್ರೀ ಜಗದೀಶ್ ಶೆಟ್ಟರ್:- Court judgment ಇದೆ. ಬೇಕಾದರೆ ನಿಮಗೆ ತೋರಿಸುತ್ತೇನೆ. ಬೇಕಾದರೆ ಅದು verification ಆಗಲಿ. ಕಾನೂನು ಮೀರಿ ಇಲ್ಲಿ ಮಾಡಿದ್ದೀರಿ. ಕೋರ್ಟ್ ಅದೇಶದ ಪ್ರಕಾರ ಅರ್ಕಾವತಿ ಬಡಾವಣೆ ಮಾಡುತ್ತೇವೆ ಎಂದು ಹೇಳುತ್ತಾರೆ. ಇಲ್ಲಿ ಕೋರ್ಟ್ ಆದೇಶವಿದ್ದರೂ, ಇಲ್ಲಿ 2 ಎಕರೆ 39 ಗುಂಟೆ ಯಾರಿಗೋ ಕೊಟ್ಟಿದ್ದಾರೆ. ಬಹುಶಃ ನಮ್ಮ ಕರ್ನಾಟಕದ history ಯಲ್ಲಿ park ಗೆ ಎಂದು reserve ಇದ್ದದ್ದನ್ನು change ಮಾಡಿದ್ದು ಇದೇ first time. ನಾವೂ ಸಹ ಇದನ್ನು 1994 ನೇ ಇಸವಿಯಿಂದ ನೋಡಿದ್ದೇವೆ.

ಅಧ್ಯಕ್ಷರು:- ಅವರು ಸುಳ್ಳು ಹೇಳಿದ್ದರೆ ಈ ಸದನಕ್ಕೆ privilege move ಮಾಡಿ.

ಶ್ರೀ ಜಗದೀಶ್ ಶೆಟ್ಟರ್:- ಆಯಿತು ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ:- Privilege move ಮಾಡ್ರಿ.

ಶ್ರೀ ಜಗದೀಶ್ ಶೆಟ್ಟರ್:- Privilege move ಮಾಡುತ್ತೇವೋ ಅಥವಾ ಏನು ಮಾಡುತ್ತೇವೋ ಅದನ್ನು ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ:- ಅದು ಏನು ಮಾಡುತ್ತೀರೋ ಮಾಡಿ.

ಶ್ರೀ ಜಗದೀಶ್ ಶೆಟ್ಟರ್:- ಆದರೆ, ಹೇಳುವುದು ಒಂದು ಮಾಡುವುದು ಒಂದು. ಕಾನೂನು ಮೀರಿ ಮಾಡುವುದು ಸರಿಯಲ್ಲ. Change of land use, park ಯಾರೂ ಮಾಡಿಲ್ಲ. ಅದನ್ನು ಮಾನ್ಯ ಮುಖ್ಯಮಂತ್ರಿಯವರು ಕಾನೂನು ಮೀರಿ, ನಿಯಮ ಮೀರಿ ಮಾಡುತ್ತಾರೆ.

ಶ್ರೀ ಸಿದ್ದರಾಮಯ್ಯ:- ಕಾನೂನನ್ನು ಬಿಟ್ಟು ಯಾವುದೂ ಮಾಡಿಲ್ಲ. ಯಾವ ನಿಯಮವನ್ನೂ ಬಿಟ್ಟು ಮಾಡಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಕಾನೂನು ಬಿಟ್ಟು ಆಗಿದೆ.

ಶ್ರೀ ಸಿದ್ದರಾಮಯ್ಯ:- ಕಾನೂನು ಬಿಟ್ಟು ಮಾಡಿರುವುದು ನಿಮ್ಮ ಕಾಲದಲ್ಲಿ ಆಗಿದೆ. ಕಾನೂನು ಬಿಟ್ಟು ಮಾಡುವುದು ಏನಿದ್ದರೂ ನಿಮ್ಮ ಕಾಲದಲ್ಲಿ. ನಮ್ಮ ಕಾಲದಲ್ಲಿ ಯಾವುದನ್ನೂ ಕಾನೂನು ಬಿಟ್ಟು ಮಾಡುವ ಪ್ರಶ್ನೆಯೇ ಇಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- Re-do ಹೆಸರಿನಲ್ಲಿ, ಆರು ಮಾರ್ಗಸೂಚಿಗಳ ಹೆಸರಿನಲ್ಲಿ, ಇಲ್ಲಿ ಕಥೆ ಕಟ್ಟಿದ್ದೀರಿ. ನಾನು ದಾಖಲಾತಿಯನ್ನು ಸುಮ್ಮಸುಮ್ಮನೆ ಇಟ್ಟಿಲ್ಲ. ನನ್ನ ಕಾಲದಲ್ಲಿ ಆಗಿದ್ದರೆ, ತನಿಖೆ ನಡೆಸಿ, ಜೈಲಿಗೆ ಕಳುಹಿಸಿ. ನಾನು ತಯಾರಾಗಿದ್ದೇನೆ, ಅಧಿಕಾರ ನಿಮ್ಮ ಕೈಯಲ್ಲಿರುವುದು, ತನಿಖೆ ನಡೆಸಿ. ನನ್ನ ಕಾಲದಲ್ಲಿ ಇಲ್ಲದ್ದೆಲ್ಲಾ ಮಾಡಿದ್ದರೆ ತನಿಖೆ ನಡೆಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಆಯೋಗವಿದೆಯಲ್ಲವೆ? ಅಲ್ಲಿಗೆ ಹೋಗಿ ದಾಖಲೆಗಳನ್ನು ಕೊಡಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಅವರಿಗೆ ಎಷ್ಟು ವರ್ಷ ಅವಧಿ ಹೇಳಿದ್ದೀರಿ? ಅವರು ವರದಿ ಕೊಡುವುದಕ್ಕೆ ಎಷ್ಟು ವರ್ಷ ಅವಧಿ ಕೊಡುತ್ತಿದ್ದೀರಿ. ನಿಮ್ಮ ದಾಖಲಾತಿಗಳನ್ನು ಅವರಿಗೆ ಕೊಡುವುದಕ್ಕೆ ಆರು ತಿಂಗಳು ಬೇಕಾಯಿತು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಆರು ತಿಂಗಳ ಅವಧಿಯನ್ನು ಕೊಟ್ಟಿದ್ದೇವೆ, ಅವರು ಕೇಳಿದರೆ ಇನ್ನಷ್ಟು ಸಮಯ ಕೊಡಬೇಕಾಗುತ್ತದೆ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಈಗಾಗಲೇ ಆರು ತಿಂಗಳ ಅವಧಿ ಮುಗಿಯಿತು. ನಿಮಗೆ ದಾಖಲೆ ಕೊಡಲಿಕ್ಕೆ ಆರು ತಿಂಗಳಾಯಿತು. ಆರು ವರ್ಷ ತನಿಖೆಗೆ ತೆಗೆದುಕೊಳ್ಳುವುದಕ್ಕೆ ಹೇಳುತ್ತೀರಾ? ನಿಮ್ಮ ಅವಧಿ ಮುಗಿದ ನಂತರ ವರದಿಯನ್ನು ಕೊಡುವುದಕ್ಕೆ ಹೇಳುತ್ತೀರಾ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಈಗ ದಾಖಲಾತಿಗಳನ್ನೆಲ್ಲಾ ಅವರಿಗೆ ಒದಗಿಸಿದ್ದೇವೆ. 1,30,000 ಪುಟಗಳ ದಾಖಲಾತಿಗಳನ್ನು ಒದಗಿಸಿದ್ದೇವೆ. ಅವರು ಕೇಳಿರುವ ಎಲ್ಲಾ ದಾಖಲಾತಿಗಳನ್ನು ಕೂಡ ಕೊಟ್ಟಿದ್ದೇವೆ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:-** ನಿಮ್ಮ ಅವಧಿ ಮುಗಿಯುವುದಕ್ಕೆ ಬಂದಿದೆ, ಈಗ ಕೊಟ್ಟಿದ್ದೀರಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನೀವು ಮಾಡಿರುವ ತಪ್ಪನ್ನು ಇನ್ನೊಬ್ಬರ ಬಾಯಿಗೆ ಅಂಟಿಸುವುದಕ್ಕೆ ಹೋಗಬೇಡಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ**:– ನಾವೇನು ತಪ್ಪೂ ಮಾಡಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:– ನೀವೇ ಎಲ್ಲವನ್ನೂ ಮಾಡಿರುವುದು.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ**:– ಹಾಗಾದರೆ ದಾಖಲಾತಿ ಇಡಿ. ನೀವು ತಪ್ಪು ಮಾಡದಿದ್ದ ಮೇಲೆ ಚರ್ಚೆಗೆ ಅವಕಾಶ ಕೊಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:– CAG ವರದಿಯಲ್ಲಿ 650 ಎಕರೆ ಎಂದು ಇದೆ, ಇದನ್ನು ಯಾರು ಮಾಡಿರುವುದು. ಅದನ್ನು ನೀವೇ ಮಾಡಿರುವುದು.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ**:– Subjudice ಎಂದು ಹೇಳಿಕೊಂಡು ಚರ್ಚೆಗೆ ಅವಕಾಶ ಕೊಡದೆ ಪಲಾಯನ ವಾದ ಮಾಡುತ್ತಿದ್ದೀರಿ. ಕೆಂಪಣ್ಣ judicial enquiry ಎಂದು ಹೇಳಿ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ**:– ಯಾವಾಗ ಯಾವಾಗ ಕಮಿಷನ್. . . . ಅದು ಆಗಿ ಹೋಗಲಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:– ನೀವು ಮಾಡಿರುವುದು, ನಾವು ಮಾಡಿಲ್ಲ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ**:– ಯಾರು ಮಾಡಿರುವುದು?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಈ ಸದನದ ನಿಯಮಗಳನ್ನು ನಾವು ಮಾಡಿಲ್ಲ. ಸದನ ಮಾಡಿರುವುದು.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಅದು Subjudice ಗೆ ಬರುವುದಿಲ್ಲ. ಅಧ್ಯಕ್ಷರು ಅನುಮತಿ ಕೊಡುವುದಕ್ಕೆ ಅವಕಾಶವಿದೆ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಕೈಜೋಡಿಸಿ ಮನವಿ ಮಾಡುತ್ತೇನೆ. ನಾನು ತಪ್ಪನ್ನು ಮಾಡಿದ್ದೇನೋ, ಅವರು ಮಾಡಿದ್ದಾರೋ, ಇವರು ಮಾಡಿದ್ದಾರೋ ಎಂಬುದು ಮುಂದಿನ ಬಜೆಟ್ ಸೆಷನ್‌ನಲ್ಲಿ ತೀರ್ಮಾನವಾಗಬೇಕು. ಸಮಿತಿ ವರದಿ ಬರುವುದಕ್ಕೆ ಇನ್ನೂ ಆರು ವರ್ಷಗಳಾಗಬಹುದು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನೀವು ತಪ್ಪು ಮಾಡಿದ್ದೀರೋ, ಅವರು ಮಾಡಿದ್ದಾರೋ ಅಥವಾ ನಾನು ತಪ್ಪು ಮಾಡಿದ್ದೇನೋ ಎಂಬ ವರದಿಯನ್ನು ಕೆಂಪಣ್ಣ ಆಯೋಗದವರು ಕೊಡುತ್ತಾರೆ. ಅವರು ತೀರ್ಮಾನ ಮಾಡಲಿ. ಇಲ್ಲೇ ತೀರ್ಮಾನವಾಗುತ್ತದೆಯೇ? ಇಲ್ಲಿ ತೀರ್ಮಾನವಾಗುವುದಕ್ಕೆ ಸಾಧ್ಯವಿಲ್ಲ. ಅಲ್ಲೇ ತೀರ್ಮಾನವಾಗಬೇಕು. ನೀವು ಅಲ್ಲೇ ಹೋಗಿ ಉತ್ತರ ಕೊಡಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಆ ಆಯೋಗಕ್ಕೆ ಇನ್ನೂ ಎಷ್ಟು ವರ್ಷ ಸಮಯ ಕೊಡುತ್ತೀರಿ? ಅವರಿಗೆ ದಾಖಲಾತಿ ಒದಗಿಸುವುದಕ್ಕೆ ಆರು ತಿಂಗಳಾಗಿದೆ. ದಾಖಲಾತಿಗಳನ್ನು ಪರಿಶೀಲಿಸಿ ತೀರ್ಮಾನ ಕೊಡುವುದಕ್ಕೆ

ಆಯೋಗ ಎಷ್ಟು ಸಮಯವನ್ನು ತೆಗೆದುಕೊಳ್ಳಬಹುದು? ಅಷ್ಟರಲ್ಲಿ ನಿಮ್ಮ ಅಧಿಕಾರದ ಅವಧಿ ಮುಕ್ತಾಯವಾಗಿರುತ್ತದೆ. ಇಲ್ಲಿ ಚರ್ಚೆಗೆ ಅವಕಾಶ ಕೊಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಇಲ್ಲಿ ಚರ್ಚೆ ಆಗಿದೆ. ಉತ್ತರವನ್ನು ಕೂಡ ಕೊಟ್ಟು ಆಗಿದೆ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಆಯೋಗದ ಹೆಸರಿನಲ್ಲಿ ರಕ್ಷಣೆ ಪಡೆಯುತ್ತಿರುವವರು ನೀವು. ನಾವು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ದಾಖಲೆಗಳನ್ನು ತಯಾರು ಮಾಡಿಕೊಂಡಿದ್ದೇನೆ. ನಾವೇನು ಕೆಂಪಣ್ಣ ಆಯೋಗವನ್ನು ಕೇಳಲಿಲ್ಲ. ನೀವು ರಕ್ಷಣೆ ಪಡೆಯುವುದಕ್ಕೋಸ್ಕರ ಮಾಡಿಕೊಂಡಿರುವುದು.

(ಗದ್ದಲ)

**ಅಧ್ಯಕ್ಷರು:–** ಕುಮಾರಸ್ವಾಮಿಯವರೆ ದಯವಿಟ್ಟು ಸುಮ್ಮನಿರಿ. ಕುಮಾರಸ್ವಾಮಿಯವರೆ, ನೀವೇನು ಹೇಳುತ್ತೀರಿ?

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಮೊನ್ನೆ ಜಗದೀಶ್ ಶೆಟ್ಟರ್‌ರವರು ಮೈನಿಂಗ್ ವಿಷಯದಲ್ಲಿ ಮಾತನಾಡಬೇಕಾದರೆ ದಾಖಲಾತಿ ಕೊಡಿ, ನಾವು ಹೋರಾಟ ಮಾಡುತ್ತೇವೆಂದು ರಮೇಶ್ ಕುಮಾರ್‌ರವರು ಹೇಳಿದರಲ್ಲವೇ? ನಾನು ದಾಖಲಾತಿಗಳ ಸಮೇತ ಇಲ್ಲಿ ಇಡುತ್ತೇನೆ.

(ಗೊಂದಲ)

**ಅಧ್ಯಕ್ಷರು:–** ಅವರಿಗೆ ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ದಾಖಲೆಗಳನ್ನು ತೆಗೆದುಕೊಂಡು ಹೋಗಿ ಕೆಂಪಣ್ಣ ಆಯೋಗಕ್ಕೆ ಕೊಡಿ. ನಾವು ತಯಾರಿದ್ದೇವೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಅಲ್ಲಿ ಕೊಟ್ಟರೆ ವರದಿ ಕೊಡುವುದು ಆರು ವರ್ಷಕ್ಕೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಿಮ್ಮ ಮೇಲೆ 150 ಕೋಟಿ ರೂ. ಗಳ ಲಂಚದ ಪ್ರಕರಣ ಬಂದಾಗ ನೀವೇನು ಮಾಡಿದಿರಿ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಾನು ಲೋಕಾಯುಕ್ತಕ್ಕೆ ಕೊಟ್ಟೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- 150 ಕೋಟಿ ರೂ. ಗಳನ್ನು ಕೊಟ್ಟಿದ್ದೇನೆಂದು ಜನಾರ್ಧನ ರೆಡ್ಡಿ ಹೇಳಿದಾಗ ನೀವೇನು ಮಾಡಿದ್ದಿರಿ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನೀವೇನು ಮಾಡಿದ್ದೀರಿ? ನಿಮ್ಮ ಯೋಗ್ಯತೆಗೆ ದಾಖಲಾತಿಯನ್ನೇನಾದರೂ ಕೊಟ್ಟಿದ್ದೀರಾ? ಅಲ್ಲಿ ಸಿ.ಬಿ.ಐ. ಗೆ ಹೋದಿರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನೀವೇನು ಮಾಡಿದ್ದೀರಿ, ನೀವೂ ಕೂಡ ಒಂದು ಆಯೋಗವನ್ನು ರಚನೆ ಮಾಡಿದಿರಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** 150 ಕೋಟಿ ರೂ. ಗಳೆಂದು ನನ್ನ ವಿರುದ್ಧ ಪ್ರಧಾನ ಮಂತ್ರಿಗಳು ಮತ್ತು ರಾಷ್ಟ್ರಪತಿಗಳ ಬಳಿ ಹೋದಿರಲ್ಲ, ಏನಾದರೂ ದಾಖಲೆಗಳನ್ನು ಕೊಟ್ಟಿರಾ? ಸಂತೋಷ್ ಹೆಗ್ಡೆಯಿಂದ ಲೋಕಾಯುಕ್ತ ವರದಿ ಬಂತಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** 150 ಕೋಟಿ ರೂ. ಗಳನ್ನು ನಿಮಗೆ ಕೊಟ್ಟಿದ್ದೇವೆಂದು ನೇರವಾಗಿ ಹೇಳಿದರು. ಆಗ ನೀವು ಆಯೋಗವನ್ನು ಮಾಡಲಿಲ್ಲವೇ? ಆಯೋಗಕ್ಕೆ ಹೋಗಿ ದಾಖಲಾತಿಗಳನ್ನು ಕೊಡಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ನಿಮ್ಮ ಆಯೋಗದ ಮುಂದೆ ಯಾರು ಕೂಡ 150 ಕೋಟಿ ರೂ. ಗಳಿಗೆ ಅವತ್ತು ಅರ್ಜಿ ಹಾಕಲಿಲ್ಲ. ಅರ್ಜಿ ಹಾಕದ ಕಾರಣ ಲೋಕಾಯುಕ್ತಕ್ಕೆ ಕೊಟ್ಟೆ. ನಂತರ ಲೋಕಾಯುಕ್ತ ವರದಿ ಬಂತು. ಅದರಿಂದಲೇ ಎಲ್ಲರ ಬಂಡವಾಳ ಈಚೆಗೆ ಬಂದಿದ್ದು.

(ಗೊಂದಲ)

**ಅಧ್ಯಕ್ಷರು:–** ಕುಮಾರಸ್ವಾಮಿಯವರೆ ದಯವಿಟ್ಟು ಕುಳಿತುಕೊಳ್ಳಿ. ಇದೇನು method of argument?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನೀವು ಆಗ ಆಯೋಗ ರಚನೆ ಮಾಡಲಿಲ್ಲವೇ? ಆಯೋಗದವರು ವರದಿ ಕೊಟ್ಟರೆ?

(ಗೊಂದಲ)

**ಶ್ರೀ ಆರ್.ವಿ.ದೇಶಪಾಂಡೆ:–** ಅವರು ಕೂಡ ಕುಳಿತುಕೊಳ್ಳಬೇಕು. ಅವರೂ ಹಾಗೆ ವಾದ ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನೀವು ಮಾತ್ರ ನಿಮ್ಮ ಕಾಲದಲ್ಲಿ ಆಯೋಗ ರಚನೆ ಮಾಡಿದ್ದೀರಿ, ಈಗ ಇಲ್ಲಿ ಬಂದು ತತ್ವ ಹೇಳುವುದಕ್ಕೆ ಹೊರಟಿದ್ದೀರಿ. ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** 150 ಕೋಟಿ ರೂ. ಗಳ ಹಗರಣವೆಂದು ನೀವು ತಂದಾಗ ಅದನ್ನು ಲೋಕಾಯುಕ್ತರಿಗೆ ಕೊಟ್ಟಿದ್ದಕ್ಕೆ ಎಲ್ಲರ ಹಣೆಬರಹ ಹೊರಗೆ ಬಂದಿದ್ದು.

(ಗೊಂದಲ)

**ಶ್ರೀ ಆರ್.ವಿ.ದೇಶಪಾಂಡೆ:-** 150 ಕೋಟಿ ರೂ. ಗಳ ಹಗರಣದ ವಿಷಯವನ್ನು ನೀವು ಹೇಳಲಿಲ್ಲ.

(ಗೊಂದಲ)

**ಅಧ್ಯಕ್ಷರು:-** ಒಂದು ನಿಮಿಷ ಎಲ್ಲರೂ ತಾಳ್ಮೆಯಿಂದ ಇರಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಅವತ್ತು ನೀವು ನನ್ನ ಮೇಲೆ ಆಪಾದನೆ ಮಾಡಿದಿರಿ. ನನ್ನ ಮೇಲೆ ಆಪಾದನೆ judiciary ಗೆ ತನಿಖೆಗೆ ಆದೇಶ ಮಾಡಿದೆವು judiciary ಯಲ್ಲಿ ಆಗಲಿಲ್ಲ. ಯಾರೂ ಕೂಡ judiciary ಗೆ ಅರ್ಜಿ ಹಾಕಲಿಲ್ಲ. ಆದ್ದರಿಂದ, ಅವತ್ತು ಲೋಕಾಯುಕ್ತಕ್ಕೆ ರೆಫರ್ ಮಾಡಿದೆ. 150 ಕೋಟಿ ರೂ. ಗಳನ್ನು ಸೇರಿಸಿಕೊಂಡ ಹಾಗೆ ರೆಫರ್ ಮಾಡಿದೆ. ಯಾರೂ ಕೂಡ judiciary enquiry ಮುಂದೆ ಹೋಗಿ ಅರ್ಜಿ ಹಾಕಿಕೊಳ್ಳಲಿಲ್ಲ. ಅದಕ್ಕೋಸ್ಕರವೇ ಲೋಕಾಯುಕ್ತಕ್ಕೆ ಕೊಟ್ಟೆ. ಲೋಕಾಯುಕ್ತಕ್ಕೆ ಕೊಟ್ಟಿದ್ದರಿಂದ ಈ ರಾಜ್ಯದ ಹಣೆಬರಹ ಹೊರಗಡೆ ಬಂತು. ಅದು ನಿಮ್ಮ ಪಾದಯಾತ್ರೆಯಿಂದಲ್ಲ ಬಂದಿದ್ದು.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಿಮ್ಮ ಎಲ್ಲಾ ದಾಖಲೆಗಳನ್ನು ತೆಗೆದುಕಂಡು ಹೋಗಿ ಕೊಡಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– Re-do ಎಂದು ಹೇಳುತ್ತೀರಿ, ಆದರೆ ಒಂದಿಂಚು ಮಾಡಿಲ್ಲ....

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಒಂದು ಇಂಚೂ ಮಾಡಿಲ್ಲ, ಒಂದು ಇಂಚೂ ಮಾಡಿಲ್ಲ.

(ಗೊಂದಲ)

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂದು ಹೇಳಿದಿರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ದಾಖಲೆ ತೆಗೆದುಕೊಂಡು ಹೋಗಿ ಅಲ್ಲಿ ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಿಮ್ಮ ಕಾಲದಲ್ಲಿ ಎಷ್ಟು ಮಾಡಿದ್ದೀರೆಂಬ ದಾಖಲೆ ನಮ್ಮ ಬಳಿ ಕೂಡ ಇದೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನಾನು ತಯಾರಿದ್ದೇನೆ. ತನಿಖೆ ನಡೆಸಿ, ನಿಮ್ಮ ರೀತಿ Re-do ಎಂದು ಮಾಡಿಲ್ಲ.

(ಗೊಂದಲ)

**ಅಧ್ಯಕ್ಷರು:-** ದಯವಿಟ್ಟು ಎಲ್ಲಾ ಕುಳಿತುಕೊಳ್ಳಿ. ಕುಮಾರಸ್ವಾಮಿಯವರೆ for no reason you are arguing. ಹೇಳುವವರೆಗೆ ಕೇಳಿ. ನಾನು ಹೇಳುವವರೆಗೆ ಕೇಳುತ್ತೀರೋ ಇಲ್ಲವೋ? ಈಗಾಗಲೇ enquiry ನಡೆಯುತ್ತಿದೆ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** Enquiry report ಕೊಡುವುದಕ್ಕೆ ಎಷ್ಟು ವರ್ಷ ಬೇಕೆಂದು ಕೇಳಿ?

**ಅಧ್ಯಕ್ಷರು:-** ಅವರು ಸಮಯ ಕೇಳಿದರೆ ಕೊಡುತ್ತೇವೆಂದು ಈಗಾಗಲೇ ಹೇಳಿದ್ದಾರೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಅವರಿಗೆ ಆರು ತಿಂಗಳ ಸಮಯ ಕೊಟ್ಟಿದ್ದೇವೆ. They will decide.

(ಗೊಂದಲ)

**ಅಧ್ಯಕ್ಷರು:-** ನಾಳೆ ತೀರ್ಮಾನವಾದರೆ ನಾಳೆಯೇ ಮಾಡಲಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಮೂರು ವರ್ಷವೋ, ಆರು ವರ್ಷವೋ ತೆಗೆದುಕೊಳ್ಳುತ್ತಾರೆ ಅಷ್ಟೆ.

(ಗೊಂದಲ)

**ಅಧ್ಯಕ್ಷರು:-** ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಬಿಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಕಾನೂನು ಇರುವುದೇ ಹಾಗೆ. ದಿಢೀರ್ ಅಂತ ಆಗುತ್ತದೆಯೇ?

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:–** ಬಿ.ಜೆ.ಪಿ., ಜೆ.ಡಿ.(ಎಸ್) ಕಾಲದ್ದು ಸೇರಿಸಿ ಸಿ.ಬಿ.ಐ. ತನಿಖೆಗೆ ಕೊಡಿ, ಅವರು ಜೈಲಿಗೆ ಹೋಗಲಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** 'ಚೋರ್ ಬಚಾವ್ ಸಂಸ್ಥೆ' ಈಗ ನಿಮಗೆ ಜ್ಞಾಪಕಕ್ಕೆ ಬಂತು.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:–** ತನಿಖೆಗೆ ಕೊಡಿಯೆಂದು ನಾವು ಹೇಳುತ್ತಿದ್ದೇವೆ. ತಪ್ಪು ಮಾಡಿದ್ದರೆ ನಾವು ಜೈಲಿಗೆ ಹೋಗುವುದಕ್ಕೆ ತಯಾರಿದ್ದೇವೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಇವರೆಲ್ಲಾ CBI ಗೆ 'ಚೋರ್ ಬಚಾವ್ ಸಂಸ್ಥೆ,' 'ಕಾಂಗ್ರೆಸ್ bureau of investigation' ಎಂದು ಹೇಳುತ್ತಿದ್ದವರು, ಈಗ ಸಿ.ಬಿ.ಐ. ತನಿಖೆಗೆ ವಹಿಸಿ ಎಂದು ಹೇಳುತ್ತಿದ್ದಾರೆ, ಇದ್ದಕ್ಕಿದ್ದಂತೆ ಇವರಿಗೆ ಸಿ.ಬಿ.ಐ. ಮೇಲೆ ಪ್ರೀತಿ ಬಂದಿದೆ. ಮಾನ್ಯ ಅಧ್ಯಕ್ಷರೆ, ನಾವು ಕೆಂಪಣ್ಣ ಆಯೋಗವನ್ನು ಅವರ ಅಧ್ಯಕ್ಷತೆಯಲ್ಲಿ ಮಾಡಿದ್ದೇವೆ. ಅವರಿಗೆ ಆರು ತಿಂಗಳ ಸಮಯವನ್ನು ಕೊಟ್ಟಿದ್ದೇವೆ. ಅವರು ನಾಳೆಯೇ ತೀರ್ಮಾನ ಮಾಡಲಿ, ನಾಡಿದ್ದೇ ತೀರ್ಮಾನ ಮಾಡಲಿ ಅಥವಾ ಸಮಯ ಕೇಳಿದರೆ ಅದನ್ನು ಕೂಡ ಕೊಡುತ್ತೇನೆ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಎಲ್ಲದಕ್ಕೂ ತಯಾರಾಗಿರುವುದಕ್ಕೆ ನಿಂತಿರುವುದು. ಹೋರಾಟಕ್ಕೆ ತಯಾರಾಗಿದ್ದೇವೆ. CAG ವರದಿಯಲ್ಲಿ ಕುಮಾರಸ್ವಾಮಿಯವರದು ಏನಿಲ್ಲ. CAG ವರದಿಯನ್ನು ನನ್ನ ಬಳಿ ಕೂಡ ಇಟ್ಟುಕೊಂಡಿದ್ದೇನೆ.

(ಗೊಂದಲ)

**ಅಧ್ಯಕ್ಷರು:-** ವರದಿ ಇದ್ದರೆ ಸಭೆಯ ಮುಂದೆ ಇಡಿ.

(ಗೊಂದಲ)

**ಶ್ರೀ ಕೆ.ಜೆ. ಜಾರ್ಜ್:-** ಅದು ಹೈಕೋರ್ಟ್‌ಗೆ ಹೋಗಿ ಈಗಾಗಲೇ CID report ಅನ್ನು ಲೋಕಾಯುಕ್ತದವರು enquiry ಮಾಡುತ್ತಿದ್ದಾರೆ. ಇವರು ಹೇಳಿದ ಹಾಗೆ ಸತ್ಯವೆಲ್ಲಾ ಹೊರಗೆ ಬರುತ್ತದೆ.

(ಗೊಂದಲ)

**ಅಧ್ಯಕ್ಷರು:-** ಆಯಿತು ಬಿಡಿ.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:-** ಈಗಾಗಲೇ Urban Development ಮತ್ತು Law Secretary ರವರು ಒಪ್ಪಿಕೊಂಡಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:** ನೀವು CAG ವರದಿಯಲ್ಲೇನಿದೆಯೆಂದು ಒಮ್ಮೆ ಪರಿಶೀಲಿಸಿ ನೋಡಿ.

(ಗೊಂದಲ)

**ಶ್ರೀ ಕೆ.ಜೆ. ಜಾರ್ಜ್:-** ಅದು public document.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:-** Urban Development ಮತ್ತು Law Secretary ರವರು ಏನು ಒಪ್ಪಿಕೊಂಡಿದ್ದಾರೆಂದು ಪರಿಶೀಲಿಸಿ ಮಾನ್ಯ ಅಧ್ಯಕ್ಷರಿಗೆ ಹೇಳಿ.

(ಗೊಂದಲ)

**ಶ್ರೀ ಕೆ.ಜೆ. ಜಾರ್ಜ್**:– CAG ರವರು public documents, ಏನು ಕೊಟ್ಟಿದ್ದಾರೆ ಅದನ್ನು ಸ್ವಲ್ಪ ಓದಿ ನೋಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:– CAG report ಅನ್ನು ಈಗಾಗಲೇ CID ತನಿಖೆ ಮಾಡುತ್ತಿದೆ. ತನಿಖೆ ಮಾಡಿ ಅವರು ವರದಿ ಕೊಡಲಿ. ನಂತರ ಯಾರ್‍ಯಾರ ಕಾಲದಲ್ಲಿ ಏನೇನು ತಪ್ಪು ಮಾಡಿದ್ದಾರೆಂಬುದು ಗೊತ್ತಾಗುತ್ತೆ. ಗೊತ್ತಾಗಲಿ, ಕೆಂಪಣ್ಣ ಆಯೋಗದವರು ಕೂಡ ವರದಿ ಕೊಡಲಿ, ಏನೇನಾಗುತ್ತದೆಂದು ಗೊತ್ತಾಗಲಿ, ಸತ್ಯ ಹೊರಗಡೆ ಬರಲಿ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ**:– ವರದಿ ಕೊಡುವಷ್ಟರಲ್ಲಿ ಎರಡು ವರ್ಷ ಆಗುತ್ತದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:– ಎರಡು ವರ್ಷವೆಂದು ಯಾರು ಹೇಳಿದ್ದಾರೆ? System ಅನ್ನು demolish ಮಾಡಬೇಕೆಂದರೆ ಹೇಗೆ ಆಗುತ್ತದೆ?

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ**:– ದಾಖಲೆಗಳನ್ನು ಕೊಡುವುದಕ್ಕೆ ಆರು ತಿಂಗಳ ಸಮಯ ತೆಗೆದುಕೊಂಡರೆ ಹೇಗೆ?

(ಗೊಂದಲ)

**ಶ್ರೀ ಸಿದ್ದರಾಮಯ್ಯ**:– ಇವರಿಗೆ ಕಾನೂನು ಗೀನೂನು ಏನು ಬೇಡ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ**:– Cabin room ಬೋಲ್ಟ್ ಹಾಕಿಕೊಂಡು ರಾತ್ರಿಯೆಲ್ಲಾ ಕೆಲಸ ಮಾಡಿಕೊಂಡು ಕುಳಿತಿದ್ದರಲ್ಲ, ನಾವು ಆ ಕೆಲಸ ಮಾಡಿಲ್ಲ.

ಅಧ್ಯಕ್ಷರು:- ನೋಡಿ, ನೀವು dictator ಅಲ್ಲ. ಹೈಕೋರ್ಟ್‌ನವರು argument ಗೆ ಒಂದು judgment ಕೊಡಬೇಕಾದರೆ ಒಂದು ವರ್ಷ, ಎರಡು ವರ್ಷ ತೆಗೆದುಕೊಳ್ಳುತ್ತಾರೆ. System ನಲ್ಲಿದ್ದೇವೆ. They are functioning like that. ಕಮೀಷನ್ ಮಾಡಿದ ಮೇಲೆ, ಕಮೀಷನ್‌ನವರು Act ಪ್ರಕಾರ ಕೆಲಸ ಮಾಡುವುದಕ್ಕೆ ಅವಕಾಶವಿದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಇವರು ಹೇಳುವುದೆಲ್ಲಾ ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ?

(ಗೊಂದಲ)

ಅಧ್ಯಕ್ಷರು:- ನಾಳೆ ಕೊಡಿ ಎಂದು ಹೇಳುತ್ತೀರಿ. ನೀವು ಮಾಡುತ್ತೀರಾ? ಹೇಳಿ ನೀವು.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಕಾನೂನು ಬಗ್ಗೆ ಗೌರವ ಇಲ್ಲದಿದ್ದರೆ ಇದೇ ರೀತಿ ಮಾತನಾಡುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್ ಅವರು ಗಣಿ ಗುತ್ತಿಗೆಗೆ renewal ಮಾಡುವ ಬಗ್ಗೆ ಹೇಳಿರುತ್ತಾರೆ. ಅದನ್ನು ಕಾನೂನು ಪ್ರಕಾರವೇ ಮಾಡಿದ್ದೇವೆ. ಕಾನೂನಿನ ವಿರುದ್ಧವಾಗಿ ಅದರಲ್ಲೇನೂ ಮಾಡಿಲ್ಲ. ಇಲ್ಲಿ ಇನ್ನೊಂದು ತಮಾಷೆಯೇನೆಂದರೆ, BWSSB ಯಲ್ಲಿ 140 ಕೋಟಿ ರೂ. ಗಳ ಒಂದು ಟೆಂಡರ್ ಕಾರ್ಯ ನಡೆಯುತ್ತಿದ್ದು, ಆ ಟೆಂಡರ್ ಅನ್ನು L3 ಅವರನ್ನು ಬಿಟ್ಟು L1 ಅವರಿಗೆ ಕೊಡುತ್ತಿದ್ದಾರೆಂದು ಪ್ರಸ್ತಾಪ ಮಾಡಿದ್ದಾರೆ. ಇವರು Chief Minister ಆಗಿದ್ದವರು. Chief Minister ಆಗಿದ್ದವರು ಈ ರೀತಿ ಮಾತನಾಡುತ್ತಾರೆಂದು ನಿರೀಕ್ಷೆ ಮಾಡಿರಲಿಲ್ಲ. ಅಲ್ಲಿ ಒಂದು ಬೋರ್ಡ್ ಇದ್ದು ಅದರ ಮುಖಾಂತರ tender process ನಡೆಯುತ್ತದೆ. ಕಾನೂನು ಪ್ರಕಾರವಾಗಿ ಅವರು ಮಾಡಬೇಕು. Technically, Legally, financially ಯಾರು L1

ಇರುತ್ತಾರೋ ಅವರಿಗೆ ಕೊಡುತ್ತಾರೆ. ಒಂದು ವೇಳೆ ಕಾನೂನು ಪ್ರಕಾರ ಅವರು ಮಾಡದೇ ಹೋದರೆ ಬೇರೆ ಯಾರಾದರೂ question ಮಾಡುತ್ತಾರೆ. ಆದುದರಿಂದ ನಾನು ಟೆಂಡರ್ ಪ್ರೊಸೆಸ್‌ನಲ್ಲಿ interfere ಆಗುವುದಕ್ಕಾಗುತ್ತದೆಯೇ? ನೀವು ಯಾವಾಗಲಾದರೂ interfere ಆಗಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್:– ಆ ರೀತಿ ನಡೆಯುತ್ತಿದೆಯೆಂದು ನನಗೆ ತಿಳಿದ ಮೇಲೆ enquiry ಮಾಡಿ ಎಂದು ಹೇಳಿರುವುದು.

ಶ್ರೀ ಸಿದ್ದರಾಮಯ್ಯ:– ಅದನ್ನು ಇಲ್ಲಿ ಪ್ರಸ್ತಾಪ ಮಾಡುತ್ತಾರೆಯೇ?

ಶ್ರೀ ಜಗದೀಶ್ ಶೆಟ್ಟರ್:– ಆ ರೀತಿ ನಡೆಯುತ್ತಿದೆ.

ಶ್ರೀ ಸಿದ್ದರಾಮಯ್ಯ:– ಆದರೂ ಅದನ್ನು ಇಲ್ಲಿ ಪ್ರಸ್ತಾಪ ಮಾಡುತ್ತಾರಾ?

ಶ್ರೀ ಜಗದೀಶ್ ಶೆಟ್ಟರ್:– Rules ಮೀರಿ ಹೊರಟಿದ್ದಾರೆಂದು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ:– ಇದರ ಅರ್ಥವೇನು? ಇಲ್ಲಿ ಪ್ರಸ್ತಾಪ ಮಾಡುವ ಉದ್ದೇಶವೇನು? ಸರ್ಕಾರದ ಮೇಲೆ motive attribute ಮಾಡುವುದಕ್ಕೋಸ್ಕರ ಮಾಡುತ್ತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್:– L1 ಬಂದರೆ ಕೋರ್ಟಿಗೆ ಹೋಗುತ್ತಾರೆ. Rules ಪ್ರಕಾರ ಇದ್ದರೆ ಯಾರಿಗೂ ಹೆದರಿಕೊಳ್ಳುವ ಪ್ರಶ್ನೆಯೇ ಇಲ್ಲ. ಆ ರೂಲ್ಸ್ ಮೀರಿ ನಡೆಯುತ್ತಾ ಇದ್ದಾರೆ. ಹಾಗಾಗಿ enquity ಮಾಡಿ ಎಂದು ಹೇಳಿದ್ದು.

ಶ್ರೀ ಸಿದ್ದರಾಮಯ್ಯ:– ಇನ್ನೊಂದು ಪ್ರಸ್ತಾಪ ಮಾಡಿರುವ ವಿಷಯವೇನೆಂದರೆ, 9 ಎಕರೆ 21 ಗುಂಟೆ ಜಮೀನನ್ನು ಡಿ–ನೋಟಿಫೈ ಮಾಡಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ. ಇದು ಕೂಡ ಕೋರ್ಟ್ ಆದೇಶದ ಪ್ರಕಾರ ಇಸ್ಕಾನ್ ಸಂಸ್ಥೆಯವರಿಗೆ ಆಗಿರುವಂತಹದ್ದು. ನಾನು ಆಗಲೇ ಪ್ರಸ್ತಾಪ ಮಾಡಿದಂತೆ ನನ್ನ ಕಾಲದಲ್ಲಿ ಸುಮಾರು 22 ಎಕರೆ ಭೂಮಿ ಬಿ.ಡಿ.ಎ., ಕೆ.ಹೆಚ್.ಬಿ., ಕೆ.ಐ.ಡಿ.ಬಿ. ಗಳಲ್ಲಿ ಕೋರ್ಟಿನ ಆದೇಶದ ಪ್ರಕಾರ ಡಿ–

ನೋಟಿಫಿಕೇಷನ್ ಆಗಿದೆ. ಯಾರ್‍ಯಾರ ಕಾಲದಲ್ಲಿ ಎಷ್ಟೆಷ್ಟು ಡಿ–ನೋಟಿಫಿಕೇಷನ್ ಆಗಿದೆಯೆನ್ನುವ ವಿಚಾರವನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ಯಾವ ಯಾವ ಮುಖ್ಯಮಂತ್ರಿಗಳಿದ್ದಾಗ ಎಷ್ಟೆಷ್ಟು ಡಿ–ನೋಟಿಫಿಕೇಷನ್ ಆಗಿದೆ ಎಂಬುದನ್ನು ಹೇಳಿದ್ದೇನೆ.

**ಅಧ್ಯಕ್ಷರು:–** ತಾವು ಗಮನಿಸಬೇಕಾದ ಅಂಶವೇನೆಂದರೆ, ನಾನು ನೋಡಿದ ಹಾಗೆ, layout ಬಂದ ಮೇಲೆ 5–10 ವರ್ಷಗಳಾದರೂ ಫೈನಲ್ ಆಗದೆ, ಬರೇ ಡಿ–ನೋಟಿಫಿಕೇಷನ್...

**ಶ್ರೀ ಸಿದ್ದರಾಮಯ್ಯ:–** ನಾವು ಮಾಡಿದ್ದಲ್ಲ.

**ಅಧ್ಯಕ್ಷರು:–** ಯಾರೇ ಮಾಡಿರಲಿ, ದಯಮಾಡಿ ಈಗಲಾದರೂ ಒಂದು ಪ್ರಾಜೆಕ್ಟ್ ಮಾಡುವಾಗ, ಸರಿಯಾಗಿ effective ಆಗಿ prepare ಮಾಡಿ, ಯಾವುದೇ ಗೊಂದಲಕ್ಕೆ ಬಾರದ ರೀತಿಯಲ್ಲಿ ಮಾಡಬೇಕು. Because, BDA is in-effectively dealing all these. ಆದ್ದರಿಂದ ಹೀಗೆ ನಡೆಯುತ್ತಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, ಆದ್ದರಿಂದ ನಮ್ಮ ಸರ್ಕಾರದಲ್ಲಿ ಹೊಸ ಬಡಾವಣೆಗಳಿಗೆ ಸಂಬಂಧಿಸಿದಂತೆ, ತಾವೇನು ಸಲಹೆ ನೀಡಿದ್ದೀರಿ, ಆ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ. ಅದು ಆಗಬೇಕಾಗುತ್ತದೆ. ಏಕೆಂದರೆ ಅರ್ಕಾವತಿ ಬಡಾವಣೆ ನಿರ್ಮಾಣ ಆದದ್ದು 2003 ರಲ್ಲಿ.

**ಅಧ್ಯಕ್ಷರು:–** ಕೆಂಪೇಗೌಡ ಬಡಾವಣೆ, ದೇವರಾಜ ಅರಸು ಬಡಾವಣೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ತರಿಸಿದ್ದೇನೆ.

**ಶ್ರೀ ಸಿದ್ದರಾಮಯ್ಯ:–** ಎಲ್ಲಾ ಕರ್ಮಕಾಂಡಗಳು ನಿಮ್ಮ ಕಾಲದಲ್ಲೇ ಆಗಿರುವುದು. All karma kandas ಎಲ್ಲಾ ನಿಮ್ಮ ಕಾಲದಲ್ಲಿಯೇ . . ..

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಲೂಟಿ, ಲೂಟಿ...

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್**:- ನೀವು ಎಷ್ಟು ಪ್ರಾಮಾಣಿಕರೆಂಬುದು ಎಲ್ಲಾ ಗೊತ್ತಿದೆ, ಜಗತ್ತಿಗೆ ಗೊತ್ತಿದೆ.

(ಗೊಂದಲ)

**ಶ್ರೀ ಕೆ.ಜೆ. ಜಾರ್ಜ್**:- ಬಳ್ಳಾರಿಯನ್ನು ಲೂಟಿ ಮಾಡಿಕೊಂಡು ಹೋದರು. ಎಷ್ಟೋ ಸಾವಿರ ಕೋಟಿ ರೂ. ಗಳು ಹೋಗಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:- ಕರ್ಮಕಾಂಡಗಳೆಲ್ಲಾ ನಿಮ್ಮ ಕಾಲದಲ್ಲಿಯೇ ಆಗಿರುವುದು.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್**:- 2002 ರ ಬಿಡಿಎ ಮಾಹಿತಿಗಳು ತೆಗೆಯಿರಿ. ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ 1,000 ಎಕರೆಯನ್ನು ಬಿಟ್ಟು ಬಿಟ್ಟರು. 2006 ರಿಂದ ಇವರು ಹೇಳುತ್ತೀರಿ. ಬಿಡಿಎದು ಹೇಳಬೇಕು. 2002 ರಲ್ಲಿ ಒಂದು ಸಾವಿರ ಎಕರೆಯನ್ನು ಬಿಟ್ಟು ಬಿಡುತ್ತಾರೆ.

(ಗೊಂದಲ)

**ಶ್ರೀ ಹೆಚ್.ಕೆ. ಪಾಟೀಲ್**:- ಜಗದೀಶ್ ಶೆಟ್ಟರ್‌ರವರೆ, ಮಾನ್ಯ ವಿರೋಧ ಪಕ್ಷದ ನಾಯಕರೆ, ನಿಮ್ಮ ಕಾಲದಲ್ಲಿ 10,000 ಎಕರೆ ಭೂಮಿ ಡಿ-ನೋಟಿಫೈ ಆಗಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:- ನಿಮ್ಮ ಕಾಲದಲ್ಲಿ ಎಷ್ಟು ಡಿ-ನೋಟಿಫೈ ಆಗಿದೆನ್ನುವ ವಿಚಾರವನ್ನು ಪುನಃ ಹೇಳಲೇ? ಯಾರ್‍ಯಾರ ಕಾಲದಲ್ಲಿ ಎಷ್ಟಾಗಿದೆ ಎನ್ನುವುದನ್ನು ಹೇಳಲೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಕಾಂಗ್ರೆಸ್ ಕಾಲದಲ್ಲಿ 1,800 ಎಕರೆ, 2002 ರಲ್ಲಿ 1,000 ಎಕರೆ ಬಿಟ್ಟಿರುತ್ತಾರೆ. ಪ್ರಿಲಿಮಿನರಿ ನೋಟಿಫಿಕೇಷನ್ ಮಾಡಿರುವುದು last.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಯಡಿಯೂರಪ್ಪನವರ ಕಾಲದಲ್ಲಿ 1961 ಎಕರೆ is the highest. Never in the history of Karnataka.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- 1800 ಎಕರೆಯನ್ನು ನೀವು ಬಿಟ್ಟಿದ್ದೀರಿ. ಅರ್ಕಾವತಿ ಬಡಾವಣೆಗೆ ಸಂಬಧಿಸಿದಂತೆ 2002 ರಲ್ಲಿ 1,000 ಎಕರೆಯನ್ನು ಬಿಟ್ಟು ಬಿಟ್ಟಿರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- Final notification ಆದ ಮೇಲೆ ಇವೆಲ್ಲವೂ ಆಗಿರುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಪ್ರಿಲಿಮಿನರಿ ನೋಟಿಫಿಕೇಷನ್‌ನಲ್ಲಿ ಇದ್ದದ್ದನ್ನು final notification ಆದ ಮೇಲೆ ಏಕೆ ಕೈ ಬಿಡಬೇಕಿತ್ತು?

(ಗೊಂದಲ)

ಅಧ್ಯಕ್ಷರು:- ಉತ್ತರ ಕೊಡುವುದಕ್ಕೆ ಬಿಡುತ್ತೀರಾ, ಇಲ್ಲವಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಬಹಳ ಪ್ರಾಮಾಣಿಕ ಎಂದು ಫೋಸ್ ತೋರಿಸುತ್ತಾರೆ. ಇವತ್ತು ಇವರ ಮುಖವಾಡ ಕಳಚಿ ಬಿದ್ದಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಿಮ್ಮ ಮುಖವಾಡ ಕಳಚಿ ಬೀಳುತ್ತಿದೆಯಲ್ಲವೇ? ನಿಮ್ಮ ನಿಜವಾದ ಬಣ್ಣ ಬಯಲಾಗುತ್ತಿದೆಯಲ್ಲವೇ? ಅದಕ್ಕಾಗಿಯೇ ನಿಮ್ಮ ಮುಖವಾಡ ಈಗ ಕಳಚಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- Investigation ಮಾಡಿದರೆ ಗೊತ್ತಾಗುತ್ತದೆ. ಯಾರು ಪ್ರಾಮಾಣಿಕರು ಎಂಬುದು ತಿಳಿಯುತ್ತದೆ. ಇಡೀ ಜಗತ್ತಿಗೆ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- I assert. ಈಗಲೂ ಕೂಡ ನಾವು ಕಾನೂನು ಪ್ರಕಾರವಾಗಿಯೇ ಮಾಡಿರುವುದು, ಪ್ರಾಮಾಣಿಕವಾಗಿಯೇ ಮಾಡಿರುವುದು. ಅಕ್ರಮವಾಗಿ ಒಂದೂ ಮಾಡಿರುವುದಿಲ್ಲ. ಎಲ್ಲಾ ನಿಮ್ಮ ಕಾಲದಲ್ಲಿಯೇ ಆಗಿರುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ತನಿಖೆ ಪೂರ್ತಿಯಾಗಲಿ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಗೊತ್ತಾಗುತ್ತದೆ, ಗೊತ್ತಾಗುತ್ತದೆ ಬಿಡಿ.

ಅಧ್ಯಕ್ಷರು:- ಉತ್ತರವನ್ನು ಬೇಗ ಪೂರೈಸಿ ಮಹಾರಾಯರೆ. Repeat ಮಾಡಬೇಡಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಾನು ಮತ್ತೆ ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ಯಾರ್ಯಾರ ಕಾಲದಲ್ಲಿ ಎಷ್ಟೆಷ್ಟು ಡಿ-ನೋಟಿಫೈ ಆಗಿದೆಯೆನ್ನುವ ಮಾಹಿತಿ ಇಲ್ಲಿದೆ.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರವನ್ನು ಹೇಳಲಿಲ್ಲ. 1900 ಎಕರೆ ಬಿಡುಗಡೆಯಾದಾಗ, ಇದನ್ನು resolution ಮಾಡಿ ಗಿನ್ನೆಸ್ ಬುಕ್ ದಾಖಲೆಗೆ ಕಳುಹಿಸುವುದಕ್ಕೆ ಸಾಧ್ಯವೇ?

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:-** ಒಟ್ಟಾರೆ ನಿಮ್ಮ ಕಾಂಗ್ರೆಸ್ ಸರ್ಕಾರದಲ್ಲಿ 1,800 ಎಕರೆ. 2002 ರಲ್ಲಿ 1,000 ಎಕರೆಯನ್ನು ಬಿಟ್ಟಿದ್ದೀರಿ. ನಿಮ್ಮ ಕಾಲದಲ್ಲಿ ಅಂದರೆ ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಇಷ್ಟೇ ಅಲ್ಲ, ಸದಾನಂದ ಗೌಡರ ಕಾಲದಲ್ಲಿ 498 ಎಕರೆ, ಕುಮಾರಸ್ವಾಮಿ ಅವರ ಕಾಲದಲ್ಲಿ 401 ಎಕರೆ . . .

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಜಯಚಂದ್ರ ಅವರೇ ಇನ್ನೊಂದು ಅಂಶವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, 401 ಎಕರೆಯನ್ನು ಅರ್ಕಾವತಿ ಬಡಾವಣೆಯಲ್ಲಿ ಮಾಡಿದ್ದೇನೆಯೇ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** After final notification ಮಾಡಿರುವುದು 401 ಎಕರೆ. ನಿಮಗೆ ಅಧಿಕಾರವೇ ಇಲ್ಲ. ಕಾನೂನು ಬಾಹಿರವಾಗಿ ಮಾಡಿದ್ದೀರಿ. ನಿಮ್ಮ ಕಾಲದಲ್ಲೇ . . ..

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಸ್ವಲ್ಪ ಇಲ್ಲಿ ಕೇಳಿ ಸ್ವಾಮಿ, ತನಿಖೆ ನಡೆಸಿ, ನಾನು ತಪ್ಪು ಮಾಡಿದ್ದರೆ ತನಿಖೆ ನಡೆಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ತನಿಖೆ ಮಾಡುತ್ತಾ ಇದ್ದೇವೆ. ಎಲ್ಲಾ ಗೊತ್ತಾಗುತ್ತದೆ. ನಿಮ್ಮ ಕಾಲದಲ್ಲಿ ಏನಾಯಿತು? ಎಂಬುದರ ಬಗ್ಗೆಯೂ ತನಿಖೆ ಮಾಡಿಸುತ್ತೇವೆ. ಅರ್ಕಾವತಿಯದೂ ಮಾಡಿಸುತ್ತೇವೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಯಾಗಿದ್ದಾಗ ಅರ್ಕಾವತಿ ಲೇಔಟ್‌ನಲ್ಲಿ ಎಷ್ಟು ಮಾಡಿದ್ದೇನೆಂಬುದು ಹೇಳಲಿ.

ಶ್ರೀ ಸಿದ್ದರಾಮಯ್ಯ:- 78 ಎಕರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- 78 ಎಕರೆ ನನ್ನದಲ್ಲ. ನಿಮ್ಮ ಕಾಂಗ್ರೆಸ್ ಸರ್ಕಾರದ್ದು.

ಶ್ರೀ ಸಿದ್ದರಾಮಯ್ಯ:- ನಿಮ್ಮದೇ, ನಿಮ್ಮದೇ, 78 ಎಕರೆಯನ್ನು ನೀವೇ ಮಾಡಿರುವುದು. ಅದಕ್ಕೆ ಯಾವುದೇ ಶಿಫಾರಸ್ಸಾಗಲಿ, resolution ಆಗಲಿ ಇಲ್ಲ. ಎಲ್ಲಾ ನೀವೇ ಮಾಡಿರುವುದು.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಜಾರ್ಜ್ ಅವರು ಹೇಳಿದ ಹಾಗೆ ಸಿ.ಎ.ಜಿ. ರಿಪೋರ್ಟ್‌ನಲ್ಲಿದೆ. ಎಸ್.ಎಂ. ಕೃಷ್ಣಾ ಅವರ ಕಾಲದಲ್ಲಿ . .. .

(ಗೊಂದಲ)

ಶ್ರೀ ಸಿದ್ದರಾಮಯ್ಯ:- 198 ಎಕರೆಯನ್ನು ನೀವೇ ಮಾಡಿರುವುದು. ನಾಚಿಕೆಯಾಗಬೇಕು ನಿಮಗೆ. ನೀವೇ ಮಾಡಿರುವುದು, ಎಲ್ಲಾ ನೀವೇ ಮಾಡಿರುವುದು.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಎಸ್.ಎಂ. ಕೃಷ್ಣ ಮತ್ತು ಧರ್ಮಸಿಂಗ್ ಅವರ ಕಾಲದಲ್ಲಿ ಆಗಿರುವುದು. ದಯವಿಟ್ಟು ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನೀವೇ ಮಾಡಿರುವುದು. ನಿಮಗೆ ನಾಚಿಕೆಯಾಗಬೇಕು.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ. ಸಿ.ಎ.ಜಿ. ರಿಪೋರ್ಟ್‌ನಲ್ಲಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಸತ್ಯ ಏನು ಎನ್ನುವುದು ಗೊತ್ತಾಗುತ್ತದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಎಲ್ಲಾ ನೀವೇ ಮಾಡಿರುವುದು. 78 ಎಕರೆ 33 ಗುಂಟೆ ನೀವೇ ಮಾಡಿರುವುದು.

(ಗೊಂದಲ)

**ಶ್ರೀ ಅಧ್ಯಕ್ಷರು:-** ಸಾಕು ಬಿಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನಿಮ್ಮ ಕಾಲದಲ್ಲಿಯೇ ಆಗಿರುವುದು. ನೀವು ಮುಖ್ಯ ಮಂತ್ರಿಯಾಗಿದ್ದಾಗಲೇ ಆಗಿರುವುದು. 2007-2008 ರ ವರೆಗೆ 78 ಎಕರೆ ಆಗಿದೆ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಸಿ.ಎ.ಜಿ. ರಿಪೋರ್ಟ್‌ನಲ್ಲಿ ಏನು ಕೊಟ್ಟಿದ್ದಾರೆನ್ನುವುದನ್ನು ಓದಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಕೆಂಪಣ್ಣ ಆಯೋಗದಿಂದ ಎಲ್ಲವೂ ಗೊತ್ತಾಗುತ್ತದೆ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಎಸ್.ಎಂ. ಕೃಷ್ಣ ಅವರು ಮತ್ತು ಧರ್ಮಸಿಂಗ್ ಅವರು ನಿರ್ಧಾರ ತೆಗೆದುಕೊಂಡಿದ್ದಾರೆ. ಕುಮಾರಸ್ವಾಮಿ ನಿರ್ಧಾರ ತೆಗೆದುಕೊಂಡಿರುವುದಿಲ್ಲ. ಸಿಎಜಿ ರಿಪೋರ್ಟ್‌ನಲ್ಲಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನಾವು ಯಾವುದನ್ನೂ ಕೂಡ ಕಾನೂನು ಬಾಹಿರವಾಗಿ ಮಾಡಿಲ್ಲ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಕಾನೂನು ಬಾಹಿರವಾಗಿಯೇ ಮಾಡಿರುವುದು ಅಧ್ಯಕ್ಷರೆ. Redo ಹೆಸರಿನಲ್ಲಿ ಆರು ಮಾರ್ಗಸೂಚಿಗಳನ್ನು ಸಂಪೂರ್ಣವಾಗಿ ನಾಶ ಮಾಡಿ, ಆರು ಮಾರ್ಗಸೂಚಿಗಳನ್ನು ಗಾಳಿಗೆ ತೂರಿ ಮಾಡಿರುವಂತಹ ನಿರ್ಧಾರಗಳು. ಯಾವ ಕಾನೂನು ಇದು?

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:–** ಸೆಕ್ಷನ್ 48 ರಲ್ಲಿ ಒಂದು ಎಕರೆಯನ್ನೂ ಸಹ ಡಿ–ನೋಟಿಫೈ ಮಾಡಿಲ್ಲ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** 2004 ರ final notification ಹಾಗೆ existence ನಲ್ಲಿದೆ. ಇವರು redo ಹೆಸರಿನಲ್ಲಿ ಇನ್ನೊಂದು ನೋಟಿಫಿಕೇಷನ್ ಮಾಡಿರುವುದು ಕಾನೂನು ಬಾಹಿರ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಸೆಕ್ಷನ್ (48) clause 1 ನಲ್ಲಿ illegal ಆಗಿ 78 ಎಕರೆ 32 ಗುಂಟೆ ಜಮೀನನ್ನು ನೀವೇ ಮಾಡಿದ್ದೀರಿ. ಕಾನೂನು ಬಾಹಿರವಾಗಿಯೇ ಮಾಡಿರುವುದು.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಎಸ್.ಎಂ. ಕೃಷ್ಣ ಅವರು High power committee ಯಲ್ಲಿ,,,. ಅದಕ್ಕಾಗಿಯೇ ಚರ್ಚೆ ಮಾಡೋಣವೆಂದು ಹೇಳಿದ್ದು. ಆದರೆ ಚರ್ಚೆ ಮಾಡುವುದಕ್ಕೆ ತಯಾರಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಚರ್ಚೆ ಮಾಡುವುದಕ್ಕೆ ಹೊರಗಡೆ ಹೋಗೋಣ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಮಾನ್ಯ ಅಧ್ಯಕ್ಷರೆ, ನೀವು ಹೇಳುತ್ತೀರಿ . . . .

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** ಸೆಕ್ಷನ್ (48) ರಲ್ಲಿ . .. .

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ಎಲ್ಲವೂ ಆಯೋಗದ ಮುಂದೆ ಬರಲಿ. ಎಲ್ಲಾ ಆಯೋಗದ ಮುಂದೆ ಕೊಡಲಿ. ಆಯೋಗ ರಚನೆ ಮಾಡಿರುವುದೇ ಆ ಕಾರಣಕ್ಕೋಸ್ಕರ.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಮಾನ್ಯ ಅಧ್ಯಕ್ಷರೆ, ಇದು ಒಂದೇ ಒಂದು ಓದಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನನ್ನದು ಒಂದೇ ಒಂದು ಇರತಕ್ಕಂಥದ್ದು, re-modify ಮಾಡಿರತಕ್ಕಂಥ 1,766 ಎಕರೆ. . .

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಮಾನ್ಯ ಅಧ್ಯಕ್ಷರೆ, ನಿಮ್ಮ ಕಾಲದಲ್ಲಿ ಅಧಿಕಾರಿಗಳು ಬರೆದಿರತಕ್ಕ ಈ ಒಂದು ಆದೇಶವನ್ನು ಓದಲಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, ಅವರನ್ನು ಕುಳಿತುಕೊಳ್ಳಲು ಹೇಳಿ. ನಾನು yield ಆಗಿದ್ದೇನೆಯೇ? I have not yielded.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಆದೇಶ ಮಾಡುವುದಕ್ಕೂ ಒಂದು ಇತಿ ಮಿತಿ ಇದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಕುಮಾರಸ್ವಾಮಿಯವರೆ, ಕುಳಿತುಕೊಳ್ಳಿ.

(ಗೊಂದಲ)

**ಅಧ್ಯಕ್ಷರು:–** ಮಾನ್ಯ ಕುಮಾರಸ್ವಾಮಿಯವರೆ, ನೀವು ಕೊಟ್ಟಿರುವಂಥ book ಅನ್ನು ಕೂಡ ನಾನು ಅಲ್ಲಿಗೆ ಕಳುಹಿಸಿಕೊಟ್ಟಿದ್ದೇನೆ. ಇದು ಕೊಟ್ಟರು ಕೂಡ ಅಲ್ಲಿಗೆ ಕಳುಹಿಸಿಕೊಡುತ್ತೇನೆ, ಕೊಡಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಇದು latest copy ಓದಿಬಿಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನೀವೇ ಇಟ್ಟುಕೊಂಡು ತೆಗೆದುಕೊಂಡು ಅಲ್ಲಿಗೆ ಹೋಗಿ ಕೊಡಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಯಾವ redo? ಎಲ್ಲಿಂದ redo? ಎಸ್.ಎಂ. ಕೃಷ್ಣನವರು ತೆಗೆದುಕೊಂಡಿರುವ ನಿರ್ಧಾರವನ್ನು ನನ್ನ ಮೇಲೆ ಹಾಕುತ್ತಾರೆ. ಸಿಎಜಿ ರಿಪೋರ್ಟ್‌ನಲ್ಲಿ ಏನಿದೆ ಎಂದು ಓದಿಕೊಳ್ಳಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಕುಮಾರಸ್ವಾಮಿಯವರೆ, ತಾವು senior leader ಆಗಿದ್ದೀರಿ. ನೀವು ಹಾಗೆಯೇ ಇದ್ದೀರಿ. ಸಾಕು ಕುಳಿತುಕೊಳ್ಳಿ. Last ನಲ್ಲಿ ಹೇಳುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಆದ್ದರಿಂದ, ನಮ್ಮ ಸರ್ಕಾರ. . .ನೀವು ಹೇಳುವುದಕ್ಕೆ ಬಿಡುವುದಿಲ್ಲವಲ್ಲ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳೇ, ತಾವು ಮಾತನಾಡಿ. ಉತ್ತರ ಕೊಡಿ. ಅದನ್ನು ಬಿಡಿ. ಬೇರೆ subject ಗೆ ಹೋಗಿ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:- De-nofication ಗುಂಗಿನಿಂದ ಆಚೆ ಬರಲಿ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಮಗೆ de-notification ನ ಗುಂಗೇ ಇಲ್ಲ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಪದೇ ಪದೇ ಹೇಳಿದರೆ ಜನ ನಂಬಿ ಬಿಡುತ್ತಾರೆಂದು ಅವರು ತಿಳಿದುಕೊಂಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಅದು ನಿಮ್ಮದು. ಕುಳಿತುಕೊಳ್ಳಿ ಜನ ನಂಬುತ್ತಾರೆ, ಎಲ್ಲರೂ ನಂಬುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಾನು ನಿನ್ನೆ ಮೊನ್ನೆ politics ಗೆ ಬಂದಿಲ್ಲ ಕುಳಿತುಕೊಳ್ಳಿ. ರಾಜಕೀಯದಲ್ಲಿ ನಿಮಗಿಂತಲೂ 10 ವರ್ಷ ಮುಂಚೆಯೇ ಬಂದಿದ್ದೇನೆ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಜನ ಏನೆಂದು ತಿಳಿದುಕೊಂಡಿದ್ದಾರೆ ಎಂದು ಆ ಫೈಲ್ ಅನ್ನು ಒಂದು ಸಲ ನೋಡಿ study ಮಾಡಿದರೆ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- 10 ವರ್ಷಗಳ ಹಿಂದೆಯೇ ನಾನು ಮಂತ್ರಿಯಾಗಿದ್ದೆ. ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಜಗದೀಶ ಶೆಟ್ಟರ್:-** 10 ವರ್ಷಗಳ ಮುಂಚೆ ಆಗಿರಬಹುದು. ನಾನು 1994 ರಿಂದ ರಾಜಕೀಯಕ್ಕೆ ಬಂದಿದ್ದೇನೆ. ನನ್ನ life ನಲ್ಲಿ ನನಗೆ ಒಂದೂ ಕಪ್ಪು ಚುಕ್ಕೆ ಇಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಹುಬ್ಬಳ್ಳಿಯಲ್ಲಿ ಹೋಗಿ ಕೇಳಿ. ಇಡೀ ರಾಜ್ಯದಲ್ಲಿ ಹೋಗಿ ಕೇಳಿ. ಕಪ್ಪು ಚುಕ್ಕೆ ಇಲ್ಲ ಎಂದು ಹೋಗಿ ಕೇಳಿ.

(ಗೊಂದಲ)

**ಶ್ರೀ ಜಗದೀಶ ಶೆಟ್ಟರ್:-** ಮುಖ್ಯಮಂತ್ರಿ ಆಗಿದ್ದೇನೆ, ಮಂತ್ರಿ ಆಗಿದ್ದೇನೆ, Speaker ಆಗಿದ್ದೇನೆ, ನನಗೆ ನೆನಪು ಮಾಡಿಕೊಳ್ಳುವುದು ಬೇಕಾಗಿಲ್ಲ. ನಮಗೆ ಎಲ್ಲ ಗೊತ್ತಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಇಡೀ ಜಗತ್ತಿಗೆ ಗೊತ್ತಿದೆ.

(ಗೊಂದಲ)

**ಶ್ರೀ ಆರ್. ಅಶೋಕ್:-** ಇದು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಅಲ್ಲ. ರಾಜ್ಯಪಾಲರ ಭಾಷಣಕ್ಕೆ ವಂದನೆ ಬಿಟ್ಟು ಇದು ಅರ್ಕಾವತಿಗೆ ಹೋಯಿತು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಶೋಕ್‌ರವರೆ, ಕುಳಿತುಕೊಳ್ಳಿ. ನೀವೇ ಮಾಡಿದ್ದು.

(ಗೊಂದಲ)

**ಶ್ರೀ ಆರ್. ಅಶೋಕ್:-** ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ.

(ಗೊಂದಲ)

**ಅಧ್ಯಕ್ಷರು:–** ಆಯಿತು. ಸಾಕು ಬಿಡಿ.

(ಗೊಂದಲ)

**ಶ್ರೀ ಆರ್. ಅಶೋಕ್:–** ದೆಹಲಿಗೆ ಹೋಗಿದ್ದಿರಿ. ಆಗ ನಾನು ಹೇಳಿದ್ದೆ, ದೆಹಲಿಗೆ ಹೋಗಿದ್ದಾರೆ. ಬೇಡ ಬಿಟ್ಟುಬಿಡಿ, ಇಲ್ಲಿ ಬನ್ನಿ ರಾಜ್ಯಪಾಲರು ಎಂದು. ಈಗಲಾದರೂ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಆಯಿತಲ್ಲ, ರಾಜ್ಯಪಾಲರ ಭಾಷಣ ಆಯಿತು, ಎಲ್ಲಾ ಆಯಿತು.

**ಅಧ್ಯಕ್ಷರು:–** ಆಯಿತು. ಆಯಿತು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, ಸಮಯ ಆಗುತ್ತಿದೆ.

**ಶ್ರೀ ಎನ್.ಹೆಚ್. ಕೋನರೆಡ್ಡಿ:–** ಊಟದ ನಂತರ ಮಾತನಾಡಿ. ಆಗ ಗಳಿಗೆ ಸರಿಯಾಗಿ ಬರುತ್ತದೆ.

**ಶ್ರೀ ಸಿದ್ದರಾಮಯ್ಯ:–** ನಾನು ಬಹಳಷ್ಟು ಹೇಳಬೇಕಾಗಿತ್ತು. ಆದರೆ, ಸಮಯವಿಲ್ಲ.

**ಅಧ್ಯಕ್ಷರು:–** ಇನ್ನೂ Budget Session ಬರುತ್ತದೆ ಬಿಡಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, Budget Session ನಲ್ಲಿ ಮಾತನಾಡೋಣ. ಮಾನ್ಯ ಸದಸ್ಯರು ಎತ್ತಿರತಕ್ಕಂಥ ಅನೇಕ ಪ್ರಶ್ನೆಗಳಿಗೆ ನಾನು ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಅನೇಕ ಸದಸ್ಯರು ಅನೇಕ ವಿಚಾರಗಳ ಬಗ್ಗೆ ಕೇಳಿರುವ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಇಲ್ಲಿ ಆಗುವುದಿಲ್ಲ. ಇದು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಆಗಿರುವುದರಿಂದ ಇನ್ನು ಹೆಚ್ಚು ದೀರ್ಘವಾಗಿ ಉತ್ತರ ಕೊಡುವುದು ಅಗತ್ಯವಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಜೋಳ ಮಾರುಕಟ್ಟೆಗೆ ಬರುತ್ತಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಪಾಟೀಲ್‌ರವರೆ, ಜೋಳವನ್ನು 2,000/- ರೂ. ಗಳಿಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್:- ಯಾರೂ ಮಾರಾಟಕ್ಕೆ ಬರುತ್ತಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಜೋಳವನ್ನು 2,000/- ರೂ. ಗಳಿಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವಲ್ಲ.

ಶ್ರೀ ಬಿ.ಆರ್. ಪಾಟೀಲ್:- ಯಾರೂ ಮಾರಾಟಕ್ಕೆ ಬರುತ್ತಿಲ್ಲ. ದಯಮಾಡಿ ಅದನ್ನು 3,000/- ರೂ. ಮಾಡಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಪಾಟೀಲ್‌ರವರೆ, ಸುಮ್ಮನಿರಿ. ಮುಖ್ಯಮಂತ್ರಿಗಳೇ ಮಾತನಾಡಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ರಾಗಿಯನ್ನು 2,000/- ರೂ. ಗಳಿಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಜೋಳ 2,000/- ರೂ. ಗಳಿಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್:- ಜೋಳ ಎಷ್ಟು procurement ಮಾಡಿದ್ದೀರಿ?

ಶ್ರೀ ಸಿದ್ದರಾಮಯ್ಯ:- ನೀವು ಎಷ್ಟು ಜೋಳವನ್ನು ಕೊಟ್ಟರೂ ಕೂಡ ನಾವು ತೆಗೆದುಕೊಳ್ಳುತ್ತೇವೆ.

**ಶ್ರೀ ಗೋವಿಂದ ಎಂ. ಕಾರಜೋಳ:**- ಮಾರುಕಟ್ಟೆಯಲ್ಲಿ ಬಿಳಿ ಜೋಳದ ರೇಟ್ 3,500 ರೂ. ಗಳು ಇದೆ. ನಾನು ಸುಳ್ಳು ಹೇಳುತ್ತಿಲ್ಲ.

**ಶ್ರೀ ಸಿದ್ದರಾಮಯ್ಯ:**- ಬಿಳಿ ಜೋಳಕ್ಕೆ 1,400 ರೂ. ಗಳ MSP ಇದೆ. ನಾವು 2,000 ಕೊಟ್ಟು ತೆಗೆದುಕೊಳ್ಳುತ್ತಿದ್ದೇವೆ. ಮಾರುಕಟ್ಟೆಯಲ್ಲಿ ಇನ್ನೂ ಜಾಸ್ತಿ ಸಿಕ್ಕರೆ ಅಲ್ಲೇ ಕೊಡಲಿ. ನಾವು ರೈತರಿಗೆ Market Intervention Scheme ಮಾಡಿರತಕ್ಕಂಥದ್ದು ರೈತರು ಬೆಳೆದಂಥ . . .

(ಗೊಂದಲ)

**ಶ್ರೀ ಬಿ.ಆರ್. ಪಾಟೀಲ್:**- ಪಡಿತರ ಮೂಲಕ ಜೋಳ ಕೊಡುವಂಥ ವ್ಯವಸ್ಥೆ ಮಾಡಿ. ಆಗ ಜೋಳದ ರೇಟ್ ಜಾಸ್ತಿಯಾಗುತ್ತದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:**- ಮಾನ್ಯ ರಾಯರೆಡ್ಡಿಯವರು ಒಂದು ಪ್ರಶ್ನೆಯನ್ನು ಕೇಳಿದ್ದರು. ಆ ಪ್ರಶ್ನೆ ಮೇಲೆ ತಾವು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಿರಿ. ಅದನ್ನು ಅವರು ನಿನ್ನೆ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ನಾನು ಬಹಳ ದೀರ್ಘವಾಗಿ ಉತ್ತರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಕರ್ನಾಟಕದಲ್ಲಿ ಕೈಗಾರಿಕೆಗಳು ಬರಬೇಕು, ಉದ್ಯೋಗ ಸೃಷ್ಟಿ ಆಗಬೇಕು, ಸಂಪತ್ತು ವೃದ್ಧಿ ಆಗಬೇಕೆನ್ನುವ ಕಾರಣಕ್ಕಾಗಿ ಕೈಗಾರಿಕೆಗಳಿಗೆ ಉತ್ತೇಜನ ಕೊಡುವಂಥದ್ದನ್ನು ನಾವು ಮಾಡಿದ್ದೇವೆ. ಅದಕ್ಕೋಸ್ಕರ 2015-2019 ಕ್ಕೆ ನಾವು ಬಹಳ ಪ್ರಗತಿಪರವಾದಂಥ ಒಂದು ಕೈಗಾರಿಕಾ ನೀತಿಯನ್ನು ಮಾಡಿದ್ದೇವೆ. ಕರ್ನಾಟಕದಲ್ಲಿ ಕೈಗಾರಿಕೆಗಳು ಬರುತ್ತಿಲ್ಲ, ಇಲ್ಲಿ ಇದ್ದಂಥ ಕೈಗಾರಿಕೆಗಳು ಹೊರಗಡೆ ಹೋಗುತ್ತಿವೆ ಅನ್ನತಕ್ಕಂಥದ್ದು ತಪ್ಪು ಮಾಹಿತಿ ಎಂದು ತಮಗೆ ತಿಳಿಸುವುದಕ್ಕೆ ಬಯಸುತ್ತಿದ್ದೇನೆ. ನಾವು ಬಂದ ಮೇಲೆ ಸುಮಾರು 45 ಸಾವಿರ ಕೋಟಿ ರೂ. ಗಳ ಬಂಡವಾಳ ಬರತಕ್ಕಂಥ .. .

**ಅಧ್ಯಕ್ಷರು:**- ವಿಶೇಷವಾಗಿ land ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

**ಶ್ರೀ ಬಸವರಾಜ್ ರಾಯರೆಡ್ಡಿ:-** ಮಾನ್ಯ ಅಧ್ಯಕ್ಷರೆ, land utilization ಬಗ್ಗೆ ನಾನು ಮಾತನಾಡಿದ್ದು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿ ಮುಗಿಸುತ್ತೇನೆ. ನಮ್ಮ ಸರ್ಕಾರ ಬಂದ ಮೇಲೆ 2013-14 ನೇ ಸಾಲಿನಲ್ಲಿ 42,500 ಕೋಟಿ ರೂ. ಗಳ ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳಿಗೆ ಮಂಜೂರಾತಿಯನ್ನು ಕೊಟ್ಟಿರುತ್ತೇವೆ. 2014-15 ರಲ್ಲಿ 12,000 ಕೋಟಿ ರೂ. ಗಳು.

**ಶ್ರೀ ಬಸವರಾಜ್ ಬೊಮ್ಮಾಯಿ:-** 2014-15 ರಲ್ಲಿ 50,000 ಕೋಟಿ ರೂ. ಗಳಿಗೆ ಸೈನ್ ಮಾಡಿದ್ದೇವೆಂದು ಹೇಳಿದಿರಿ. ಅದನ್ನು ಹೇಳಿ.

**ಶ್ರೀ ಸಿದ್ದರಾಮಯ್ಯ:-** ಇದು High Level Committee ಯಲ್ಲಿ ತೀರ್ಮಾನವಾಗಿದೆ. ಅವು MOU ಗಳು. ಬಂಡವಾಳ ಹೂಡುವುದಕ್ಕೆ ಬಂದಿರತಕ್ಕಂಥ ಪ್ರಸ್ತಾವನೆಗಳನ್ನು ಅನುಮೋದನೆ ಕೊಟ್ಟಿರುವುದು.

(ಗೊಂದಲ)

**ಶ್ರೀ ಬಸವರಾಜ್ ರಾಯರೆಡ್ಡಿ:-** ಮಾನ್ಯ ಬಸವರಾಜ್ ಬೊಮ್ಮಾಯಿಯವರೆ, it is invested on MOU.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** High power committee ನಲ್ಲಿ. . . ಬಸವರಾಜ್ ತಾವು ಅಲ್ಲಿ ಏಕೆ ಮಾತನಾಡುತ್ತಿದ್ದೀರಿ?

**ಶ್ರೀ ಬಸವರಾಜ್ ರಾಯರೆಡ್ಡಿ:-** MOU clear ಆಗಿದೆ, ಇನ್ನೂ investment ಬಂದಿಲ್ಲ.

(ಗೊಂದಲ)

**ಶ್ರೀ ಜಗದೀಶ ಶೆಟ್ಟರ್:-** ಒಂದೇ ಒಂದು industry . . .

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಜಗದೀಶ ಶೆಟ್ಟರ್ ರವರೆ, ತಾವು, ಎಲ್ಲದ್ಕೂ ಎದ್ದು ಎದ್ದು ಮಧ್ಯ ಮಾತನಾಡಿದರೆ ಹೇಗೆ? I cannot understand. ತಾವು ಮುಖ್ಯಮಂತ್ರಿಗಳಾಗಿದ್ದವರು ತಾವು ಈ ರೀತಿ ಮಾಡಿದರೆ ಹೇಗೆ?

**ಶ್ರೀ ಜಗದೀಶ ಶೆಟ್ಟರ್:–** ಎರಡು ವರ್ಷವಾದರೂ ಇಲ್ಲಿಯವರೆಗೆ ಒಂದು industry ಬರಲು ಸಾಧ್ಯವಾಗಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** 42,500 ಕೋಟಿ ಬಂಡವಾಳ ಬರುತ್ತಿದೆಯಲ್ಲ ಅದು ಯಾವುದು?

(ಗೊಂದಲ)

**ಅಧ್ಯಕ್ಷರು:–** ಮಾನ್ಯ ರಾಯರೆಡ್ಡಿಯವರು ಎತ್ತಿರುವುದು ಒಂದು ಇಂಡಸ್ಟ್ರಿ ಬಗ್ಗೆ ಅಲ್ಲ.

**ಶ್ರೀ ಜಗದೀಶ ಶೆಟ್ಟರ್:–** ಇನ್ನೂ ಹೆಚ್ಚಿನ ಆಸಕ್ತಿಯನ್ನು ತೆಗೆದುಕೊಂಡು ಮಾಡಿದ್ದರೆ, ಇನ್ನೂ ಸಾಕಷ್ಟು ಬರುತ್ತಿತ್ತು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನೀವು ನಿಮ್ಮ ಕಾಲದಲ್ಲಿ ಬಹಳ ಆಸಕ್ತಿ ತೆಗೆದುಕೊಂಡಿದ್ದೀರಿ ಅಲ್ಲವೇ? ಏನಾಯಿತು? 2010 ರಲ್ಲಿ Global Investors Meet ಮಾಡಿದ್ದೀರಿ. ಇವರು ಬಹಳ ಆಸಕ್ತಿ ತೆಗೆದುಕೊಂಡಿದ್ದರು. ಇವರು ಆಸಕ್ತಿ ತೆಗೆದುಕೊಂಡಿದ್ದರಿಂದ ಎಲ್ಲ ಕೈಗಾರಿಕೆಗಳು ಬಂದವು. 2010–12 ರಲ್ಲಿ GIM ಮಾಡಿ 6,73,000 ಕೋಟಿ ರೂ. ಗಳಷ್ಟು ಬಂಡವಾಳ ಬರುತ್ತದೆ ಎಂದು ಹೇಳಿದರು. ಆದರೆ, ಬಂದಿರುವುದು ಕೇವಲ 45,500 ಕೋಟಿ ರೂ. ಗಳು.

(ಗೊಂದಲ)

**ಶ್ರೀ ಬಸವರಾಜ್ ರಾಯರೆಡ್ಡಿ:-** ಮಾನ್ಯ ಅಧ್ಯಕ್ಷರೆ, GIM ನಲ್ಲಿ ಆಗಿರುವುದು MOU. ನಿಮ್ಮ MOU ಗಳಲ್ಲಿ ಬರುತ್ತದೆಯೇ ನೋಡೋಣ.

**ಶ್ರೀ ಸಿದ್ದರಾಮಯ್ಯ:-** 45,500 ಕೋಟಿ ರೂ. ಗಳು. ಇನ್ನು ಆಸಕ್ತಿಯಿಂದ ಇಷ್ಟೇನಾ ಆಗಿದ್ದು. ಇದು ನಿಮ್ಮ ಆಸಕ್ತಿಯಿಂದ ಆಗಿದೆಯೇ? ನಿಮ್ಮ ಆಸಕ್ತಿ ಏನಾಯಿತು? ನೀವು ಮುಖ್ಯಮಂತ್ರಿಯಾಗಿದ್ದಿರಿ.

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ:-** 42,000 ಕೋಟಿ ರೂ. ಬಗ್ಗೆ ಮುಂದಿನ ಪರದೆ ಮೇಲೆ ನೋಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಒಟ್ಟು 6,73,000 ಕೋಟಿ ರೂ. ಗಳಿಗೆ ಬಂದಿರುವುದು 45,000 ಕೋಟಿ ರೂ. ಗಳು.

**ಅಧ್ಯಕ್ಷರು:-** ಅವರು ಹೇಳುವುದನ್ನು ಹೇಳಲಿ. ಆಮೇಲೆ ನೀವು ಕೇಳಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ಕೇವಲ 7%. ನೀವು ಬಹಳ ಆಸಕ್ತಿ ತೆಗೆದುಕೊಂಡಿದ್ದರಿಂದ 7% ಗೆ ಬಂದಿದೆ. ಆಸಕ್ತಿ ತೆಗೆದುಕೊಳ್ಳದಿದ್ದರೆ zero ಆಗುತ್ತಿತ್ತು. ಅಲ್ಲವೇ? ಸುಮ್ಮನೆ ಏನೋ ಹೇಳಬೇಕು ಹೇಳುತ್ತಿದ್ದೀರಿ. ನಮ್ಮ ಕಾಲದಲ್ಲಿ 42,500 ಕೋಟಿ ಮತ್ತು 12,000 ಕೋಟಿ ರೂ. ಗಳಿಗೆ High Level Committee ಯಲ್ಲಿ ನಾವು approval ಮಾಡಿದ್ದೇವೆ. Single Window ನಲ್ಲಿ ಅದನ್ನು clear ಮಾಡುತ್ತಿದ್ದೇವೆ. Land ಕೂಡ ಕೊಟ್ಟಿದ್ದೇವೆ. ಮಾನ್ಯ ಜಗದೀಶ ಶೆಟ್ಟರ್ ರವರು ಪದೇ ಪದೇ Hero Motors ಹೋಯಿತು ಎಂದು ಹೇಳುತ್ತಿರುತ್ತಾರೆ. ನಿಜ, ಅದು ಹೋಗಿದೆ. ನಾವು ಆಸಕ್ತಿ ತೆಗೆದುಕೊಳ್ಳಲಿಲ್ಲ ಎನ್ನುವ ಕಾರಣಕ್ಕೋಸ್ಕರ ಅಲ್ಲ. ನಾವು ಅವರಿಗೆ ಧಾರವಾಡದಲ್ಲಿ 300 ಎಕರೆ ಜಮೀನನ್ನೂ ಕೊಟ್ಟಿದ್ದೆವು. ಅವರು ಕೇಳಿದಂಥ concession ತೆರಿಗೆ ರಿಯಾಯಿತಿಗಳನ್ನು ಸಹ ನಾವು ಕೊಟ್ಟಿದ್ದೇವೆ. ಆಂಧ್ರದಲ್ಲೇನೋ ಹೊಸ ರಾಜ್ಯವಾಗಿದೆ. ಅಲ್ಲಿ ಹೆಚ್ಚಾಗಿ ರಿಯಾಯಿತಿಗಳು

ಸಿಗುತ್ತವೆಂದು ಹೋಗಿದ್ದಾರೆ. ಆದರೆ ಇವತ್ತಿನವರೆಗೆ ಅಲ್ಲಿ ಏನಾದರೂ ತೀರ್ಮಾನವಾಗಿದೆಯೇ?

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:– ಆಂಧ್ರ divide ಆಗುವ 6 ತಿಂಗಳ ಮುಂಚೆಯೇ ನಿಮಗೆ proposal ಬಂದಿತ್ತು. ಆಗ accept ಮಾಡಿದ್ದರೆ ಆಗುತ್ತಿತ್ತು.

(ಗೊಂದಲ)

ಶ್ರೀ ಸಿದ್ದರಾಮಯ್ಯ:– No, No, ಅವರು ಕೇಳಿದ್ದೆಲ್ಲವನ್ನೂ ಕೊಟ್ಟಿದ್ದೇವೆ. ಅವರು ಏನು ಬೇಡಿಕೆಯಿಟ್ಟಿದ್ದರೋ, ಆ ಬೇಡಿಕೆಗಳನ್ನೆಲ್ಲಾ ಪೂರೈಸಿದ್ದೇವೆ. ಆದ್ದರಿಂದ, ಆ ರೀತಿಯಲ್ಲಿ ಇಲ್ಲಿ ಲೆಕ್ಕ ಹಾಕಿದರೆ ಮಹರಾಷ್ಟ್ರದಿಂದ, ತೆಲಂಗಾಣದಿಂದ, ತಮಿಳುನಾಡಿನಿಂದ ಅನೇಕ ಕೈಗಾರಿಕೆಗಳು ಕರ್ನಾಟಕಕ್ಕೆ ಬರುತ್ತಿದೆ. Pharmaceutical industry ಗಳು, garments ನಮ್ಮಲ್ಲಿ ಬರುತ್ತಿವೆ. ನಾನು ಬೆಳಗಾವಿಯಲ್ಲಿದಾಗ ಕೊಲ್ಲಾಪುರದಿಂದ ಒಂದು ನಿಯೋಗ ಬಂದಿತ್ತು. ಆ ನಿಯೋಗದವರು ನಾವು ಬರುತ್ತಿದ್ದೇವೆ, ನಮಗೆ ಜಮೀನು ಕೊಡಿ ಎಂದು ಮನವಿ ಮಾಡಿದರು. ಅದಕ್ಕೋಸ್ಕರವಾಗಿ ಯಾದಗಿರಿಯಲ್ಲಿ 3,232 ಎಕರೆ ಕೊಡುತ್ತಿದ್ದೇವೆ. ಕೊಯಮತ್ತೂರಿನಲ್ಲಿ ಹೋಗಿ ಒಂದು road show ಮಾಡಿದ ಮೇಲೆ ಚಾಮರಾಜನಗರದಲ್ಲಿಯೂ ಮಾಡಬೇಕೆಂದು 1,500 ಎಕರೆಯನ್ನು ತೆಗೆದುಕೊಳ್ಳುತ್ತಿದ್ದೇವೆ. ಅಲ್ಲಿಯೂ ಸಹ ಕೈಗಾರಿಕೆಗಳು ಬರುತ್ತಿದ್ದು, ಅನೇಕ ಜನ ತಮಿಳುನಾಡಿನವರು ಕರ್ನಾಟಕಕ್ಕೆ ಬರುತ್ತಿದ್ದಾರೆ. ಆಂಧ್ರದಿಂದ, ಮಹಾರಾಷ್ಟ್ರದಿಂದ, ತಮಿಳುನಾಡಿನಿಂದ ಬರುತ್ತಿದ್ದಾರೆ.

ಶ್ರೀ ಆರ್. ಅಶೋಕ್:– ಸಾರ್, ತಾವು ಬರೀ ಬರುತ್ತಿದ್ದಾರೆ, ಬರುತ್ತಿದ್ದಾರೆ ಎಂದು ಹೇಳುತ್ತಿದ್ದೀರಿ ಹೊರತು ಎರಡು ವರ್ಷದಿಂದ ಬಂದಿರುವವರೆಷ್ಟು ಎಂದು ಹೇಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನೀವು 5 ವರ್ಷ ಏನು ಮಾಡಿದ್ದೀರಿ? ಎರಡು GIM ಮಾಡಿದ್ರಲ್ಲ, ಏನಾಯಿತು?

(ಗೊಂದಲ)

**ಶ್ರೀ ಆರ್. ಅಶೋಕ್:–** ನಾವು ತಪ್ಪು ಮಾಡಿದ್ದೇವೆ, ಬಿಟ್ಟುಬಿಡಿ ಸಾರ್.

**ಶ್ರೀ ಸಿದ್ದರಾಮಯ್ಯ:–** ಅದಕ್ಕೆ 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಲ್ರೀ, ಏನಾಯಿತು?

(ಗೊಂದಲ)

**ಶ್ರೀ ಆರ್. ಅಶೋಕ್:–** ನಾವು ತಪ್ಪು ಮಾಡಿದ್ದೇವೆ. ನೀವು ಬಂದ ಮೇಲೆ ಏನು ಮಾಡಿದ್ದೀರಾ ಹೇಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಹಾಗಾದರೆ ನಮ್ಮನ್ನು ಕೇಳುವುದಕ್ಕೆ, ಮಾತನಾಡುವುದಕ್ಕೆ ನಿಮಗೇನು ನೈತಿಕ ಹಕ್ಕಿದೆ?

(ಗೊಂದಲ)

**ಶ್ರೀ ಆರ್. ಅಶೋಕ್:–** ನೀವು ಬಂದು 2 ವರ್ಷವಾಯಿತು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** 4 ವರ್ಷ 2 ಜಿಮ್ ಮಾಡಿ ಏನು ದೊಡ್ಡದಾಗಿ ಪ್ರಚಾರ ಮಾಡಿಕೊಂಡಿರಲ್ಲ, 6 ಲಕ್ಷ 73 ಸಾವಿರ ಕೋಟಿ ರೂಪಾಯಿಗಳಿಗೆ 45 ಸಾವಿರ ಕೋಟಿ ರೂಪಾಯಿಗಳಷ್ಟು ಸಹ ಬಂದಿಲ್ಲ.

**ಅಧ್ಯಕ್ಷರು:–** ಮುಖ್ಯಮಂತ್ರಿಗಳೆ, ರಾಯರೆಡ್ಡಿ ಎತ್ತಿದ ಪ್ರಶ್ನೆ ಏನೆಂದರೆ land ಗೆ ಸಂಬಂಧಪಟ್ಟಿದ್ದು.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಅಧ್ಯಕ್ಷರೆ, ಕೆಲವು ಜನ ಭೂಮಿಯನ್ನು ಮಾರಿಕೊಂಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, ಒಂದು ಕೈಗಾರಿಕೆಗೆ approval ಕೊಟ್ಟ ಮೇಲೆ ಅವರಿಗೆ 2 ವರ್ಷದಿಂದ 5 ವರ್ಷದವರೆಗೆ ಅವಕಾಶ ಕೊಡಬೇಕಾಗುತ್ತದೆ. ಕೆಲವು ಕೈಗಾರಿಕೆಗಳು ಜಿಮ್‌ನಲ್ಲಿ ಸಹ ಆಗಿದ್ದವಲ್ಲ, ಏಕೆ ಮುಂದುವರೆಯಲಿಲ್ಲವೆಂದರೆ ಕಬ್ಬಿಣದ ಅದಿರಿನ ಸಮಸ್ಯೆ ನಿರ್ಮಾಣವಾಯಿತು. ಅದರದ್ದೇ major ಆಗಿ MOU ಗಳಾಗಿರುವುದು. ಅದು ಆಗಲಿಲ್ಲ. ಇದು ಇತ್ಯರ್ಥವಾಗುವವರೆಗೆ ಬಹಳ ಕಷ್ಟವಿದೆ. ಹಾಗಾಗಿ. . . . . .

**ಅಧ್ಯಕ್ಷರು:–** ಮತ್ತೆ ಭೂಮಿಯನ್ನಾದರೂ ವಾಪಸ್ಸು ತಗೊಳ್ಳಿ.

**ಶ್ರೀ ಸಿದ್ದರಾಮಯ್ಯ:–** ವಾಪಸ್ಸು ತೆಗೆದುಕೊಳ್ಳುತ್ತೇವೆ. ಕಾನೂನು ರೀತ್ಯಾ ಏನು ಕ್ರಮ ಕೈಗೊಳ್ಳಬೇಕೋ ಅದನ್ನೂ ಮಾಡುತ್ತೇವೆ. ಕಾನೂನು ರೀತ್ಯಾ ಕೈಗಾರಿಕೆಯನ್ನು ಮಾಡಲಿಲ್ಲವೆಂದರೆ ಜಮೀನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾವು ಮಾಡುತ್ತೇವೆ.

**ಶ್ರೀ ಬಸವರಾಜ ರಾಯರೆಡ್ಡಿ:–** ಬ್ರಾಹ್ಮಿಣಿ ಸ್ಟೀಲ್ಸ್ ಹೆಸರಿನಲ್ಲಿ 5,000– 6,000 ಎಕರೆ ಮಾರಾಟವಾಗಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಅದನ್ನು ನಾವು ಮಾಡಿರುವುದಲ್ಲ. ಹಿಂದಿನ ಸರ್ಕಾರವಿದ್ದಾಗ ಆಗಿರುವುದು.

**ಶ್ರೀ ಬಸವರಾಜ ರಾಯರೆಡ್ಡಿ:–** ನಮ್ಮ ಕಾಲದಲ್ಲಿ ಅಲ್ಲ. ಹಿಂದೆ ಜಗದೀಶ್ ಶೆಟ್ಟರ್‌ರವರ ಹಿಂದಿನ ಸರ್ಕಾರದಲ್ಲಿಯೇ ಆಗಿದೆ.

(ಗೊಂದಲ)

**ಅಧ್ಯಕ್ಷರು:–** ಮುಖ್ಯಮಂತ್ರಿಗಳೆ, ಅವರು ನಿನ್ನೆ ಪ್ರಸ್ತಾಪ ಮಾಡಿದ ವಿಷಯಗಳನ್ನು ನಾವು ನೋಡಿದರೆ, ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯತೆಯಿದೆ. ಏಕೆಂದರೆ, ನಾವೇ ಮಾಡಿದಾಗ Land Reforms Act ನಲ್ಲಿ ಖಾಸಗಿ ಜಮೀನನ್ನು ಖರೀದಿ ಮಾಡುವುದಕ್ಕೆ ಅವಕಾಶವಿರಲಿಲ್ಲ. ತದನಂತರ ಸೆಕ್ಷನ್ 109 ಮತ್ತು 107 ಗೆ ತಿದ್ದುಪಡಿ ಮಾಡಿಕೊಂಡು ಖರೀದಿ

ಮಾಡುವುದಕ್ಕೆ ಅವಕಾಶ ಕೊಟ್ಟರು. ಹಿಂದಿನ land order ಗಳನ್ನು ನಾವು ಮುಗಿಸಿದ್ದೇವೆ. ಈಗ ಹೊಸ land order ಗಳು ಕೈಗಾರಿಕೆ ಹೆಸರಿನಲ್ಲಿ ಹುಟ್ಟಿದ್ದಾರೆ. ಅದಕ್ಕಾಗಿಯೇ ನಾನು ಹೇಳುವುದೇನೆಂದರೆ, ಇನ್ನು ಮುಂದೆ ಬರುವವರು ಸಹ ಎಚ್ಚರಿಕೆ ವಹಿಸಬೇಕಾಗುತ್ತದೆ. ಸಕಾಲದಲ್ಲಿ ಕೈಗಾರಿಕೆ ಮಾಡದೆ ಹೋದರೆ ಭೂಮಿಯನ್ನು ವಾಪಸ್ಸು ಕೊಡಬೇಕು. ನಿನ್ನೆ Food Park ನ ವಿಚಾರದಲ್ಲಿ ಎಲ್ಲರೂ ಹೇಳುತ್ತಿದ್ದರು. ಒಂದೇ ಒಂದು Food Park ಸಹ ಇವತ್ತು develop ಆಗಿಲ್ಲ. ದುಡ್ಡು ತಿಂದಿದ್ದಾರೆ, ಸಬ್ಸಿಡಿಯನ್ನು ಹೊಡೆದಿದ್ದಾರೆ. ಎಲ್ಲಾ ಏನೇನೋ ಕಥೆಗಳಾಗಿದೆ. ಅದಕ್ಕಾಗಿ ನಾನು ಒಂದು ಮಾತನ್ನು ಹೇಳುವುದೇನೆಂದರೆ, ಒಂದು ಸದನ ಸಮಿತಿ ರಚನೆ ಮಾಡಿ, ಇದನ್ನೆಲ್ಲಾ examine ಮಾಡಿದರೆ ಗೊತ್ತಾಗುತ್ತದೆ.

**ಶ್ರೀ ಸಿದ್ದರಾಮಯ್ಯ:-** ಆಯಿತು, ಮಾನ್ಯ ಅಧ್ಯಕ್ಷರೆ, ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ನಾವು ಹೊಸ ಕೈಗಾರಿಕಾ ನೀತಿ ಮಾಡಿದ್ದೇವೆ. ಅವರಿಗೆ single window ಮೂಲಕ . . . . .

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** ಸದನ ಸಮಿತಿ ಕಮಿಟಿ ಮಾಡುತ್ತೀರಾ? ಇದರ ಬಗ್ಗೆ ಸದನ ಸಮಿತಿ ಏಕೆ ಮಾಡಬಾರದು?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ಮೊದಲು ಏನಾಗಿತ್ತೆಂದರೆ, ಮಾರಿಕೊಳ್ಳುವುದಕ್ಕೆ ಅವಕಾಶವಿತ್ತು. ಈಗ 99 ವರ್ಷ lease ಮಾಡಿದ್ದೇವೆ. ಆದ್ದರಿಂದ ಅವರು ಇಲ್ಲಿ ಬಂದು ಮಾರಿಕೊಳ್ಳುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** ಇದಕ್ಕೊಂದು House Committee ಏಕೆ ಮಾಡಬಾರದು?

(ಗೊಂದಲ)

**ಅಧ್ಯಕ್ಷರು:–** ನಾನು ಕೇಳುವುದೇನೆಂದರೆ 99 ವರ್ಷ lease ಮಾಡಿದ್ದೀರಲ್ಲ, ಒಂದು ವೇಳೆ ಕೈಗಾರಿಕೆಯನ್ನು ಸ್ಥಾಪನೆ ಮಾಡದೆ ಹೋದರೆ ಏನು ಮಾಡುತ್ತೀರಿ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, ಕೈಗಾರಿಕೆಯನ್ನು ಮಾಡಲಿಲ್ಲವೆಂದರೆ ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ.

**ಅಧ್ಯಕ್ಷರು:–** ಎಷ್ಟು ವರ್ಷದೊಳಗೆ?

**ಶ್ರೀ ಸಿದ್ದರಾಮಯ್ಯ:–** ಅವರಿಗೆ 2 ರಿಂದ 5 ವರ್ಷದವರೆಗೆ ಅವಕಾಶ ಕೊಡುತ್ತೇವೆ. ಅವರು ಕೈಗಾರಿಕೆ ಮಾಡಲಿಲ್ಲವೆಂದರೆ. . . . . .

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** KIADB ಯಲ್ಲಿ land ಕೊಡುವಾಗ rules ಮಾಡಿದ್ದಾರೆ. ಅದು invest ಮೇಲೆ depend ಆಗುತ್ತದೆ. ಸುಮಾರು 1000 ಕೋಟಿ ರೂ. Investment ಇದೆ. Steel industry ಇದೆ 3 type. I. T industry ಇದೆ. ಲಘು ಮಾಡಬಹುದು. Depends upon the project, depends upon the investment ಮಾಡಬಹುದು. ಹಾಗಾಗಿ ಈಗ ಜಮೀನು ಕೊಡುವಾಗ . . . . .

(ಗೊಂದಲ)

**ಶ್ರೀ ಟಿ.ಬಿ. ಜಯಚಂದ್ರ:–** Ownership lies with Government only. ನಾವು lease ಕೊಡುವುದಷ್ಟೆ, ownership ನಮ್ಮ ಹತ್ತಿರವೇ ಇರುತ್ತದೆ.

(ಗೊಂದಲ)

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):–** ಎಷ್ಟೋ ಜನ ಮಾರಾಟ ಮಾಡಿಕೊಳ್ಳುತ್ತಿದ್ದಾರೆ. Real estate ಮಾಡಿಕೊಂಡು ಅವರು ಮಾರಾಟ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- Land ಕೊಡುವಾಗ land audit ಆಗುತ್ತದೆ. There is Land Audit Committee. Commission ನಲ್ಲಿ screening ಆದಾಗ Land Audit Committee ಆದ ನಂತರ, it comes to the High Power Committee. ತಾವು ಹೇಳಿದಂತೆ ಕೆಲವು ಕಡೆ ಆಗಿದೆ. ನಾನು ಆಗಿಲ್ಲ ಎಂದು ಹೇಳುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:- ನಾನು ಒಂದು ಮಾತನ್ನು ಹೇಳುತ್ತೇನೆ ಕೇಳಿ. Land Reforms Act, Secton 109 ಪ್ರಕಾರ permission ಕೊಡುತ್ತೀರೋ, ಇಲ್ಲವೋ? ಆ ಜಮೀನನ್ನು ಕೈಗಾರಿಕೆಗೆ ಅಥವಾ ಬೇರೆ ಯಾವುದೋ ಉದ್ದೇಶಕ್ಕೆ ಖರೀದಿ ಮಾಡುತ್ತಾರೆ, ಹೌದೇ? ಕೈಗಾರಿಕೆ ಮಾಡಲಿಲ್ಲವೆಂದರೆ ಆಗ ಏನು provision ಇದೆ ಅಲ್ಲಿ. Land Reforms Act ನಡಿ ಖರೀದಿ ಮಾಡಿದ ಜಮೀನನ್ನು ಆ ಉದ್ದೇಶಕ್ಕೆ ಬಳಸಿಕೊಳ್ಳಲಿಲ್ಲವೆಂದರೆ ಆ ಭೂಮಿಯನ್ನು ವಾಪಸ್ಸು ಪಡೆಯುವುದಕ್ಕೆ provision ಎಲ್ಲಿದೆ ಅಲ್ಲಿ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಅಧ್ಯಕ್ಷರೆ, ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನೋಡಿ, the ownership lies with the Government. ಅವರಿಗೆ ನಾವು ಸಮಯ ಕೊಡುತ್ತೇವೆ. ಒಂದು ವೇಳೆ ಮಾಡಲಿಲ್ಲವೆಂದರೆ ಕೈಗಾರಿಕೆಗಳನ್ನು ನಾವು ಒಕ್ಕಲೆಬ್ಬಿಸಿ ಓಡಿಸುವುದಕ್ಕೆ ಆಗುವುದಿಲ್ಲ. ಅದು ಬೆಳವಣಿಗೆಯಾಗಬೇಕಾಗುತ್ತದೆ. ಅದಕ್ಕೋಸ್ಕರ reasonable time ಕೊಡುತ್ತೇವೆ. ಒಂದು ವೇಳೆ reasonable time ನಲ್ಲಿ ಅವರು ಮಾಡಲಿಲ್ಲವೆಂದರೆ ಕಾನೂನು ರೀತಿ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾರಾಟ ಮಾಡಿದ್ದಾರಲ್ಲ, ಅವರಿಗೇನು ಮಾಡುತ್ತೀರಿ? ಕಾನೂನು ಬಾಹಿರವಾಗಿ ಮಾರಾಟ ಮಾಡಿದ್ದಾರೆ. ಕಾನೂನು ಬಾಹಿರವಾಗಿ ಹೇಗೆ ಮಾರಾಟ ಮಾಡಿದ್ದಾರೆಂದರೆ ಉದಾಹರಣೆಗೆ GIM ನಲ್ಲಿ ಬ್ರಾಹ್ಮಿಣಿ ಸ್ಟೀಲ್ಸ್‌ಗೆ agreement ಆಯಿತು, ಅವರು ಅಲ್ಲಿ 5,000 ಎಕರೆಯನ್ನು ಮಾರಾಟ ಮಾಡಿಬಿಟ್ಟರು. ಅವರಿಗೇನು ಮಾಡುತ್ತೀರಿ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ಆ ರೀತಿ ಏನಾದರೂ ಮಾಡಿದ್ದರೆ ಅದರ ಬಗ್ಗೆ enquiry ಮಾಡಿ ಕ್ರಮ ಕೈಗೊಳ್ಳುತ್ತೇವೆ.

**ಅಧ್ಯಕ್ಷರು:-** ಆಯಿತು, ಅದೇ ರೀತಿ ಮಾಡಿ.

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):-** ಸಾರ್, ಒಂದು ಸದನ ಸಮಿತಿ ಮಾಡಿಸಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಅಧ್ಯಕ್ಷರೆ, ಒಂದು ಮಾತನ್ನು ಕೇಳುತ್ತೇನೆ, solar energy ಸಲುವಾಗಿ Solar Park ಮಾಡುತ್ತೇವೆಂದು ಸುಮಾರು 20 ಸಾವಿರಕ್ಕಿಂತ ಹೆಚ್ಚು ಎಕರೆ ಜಮೀನುಗಳನ್ನು ಸ್ವಾಧೀನ ಮಾಡಿಸಿಕೊಂಡಿದ್ದಾರೆ. Under Section 109 ನಲ್ಲಿ Cabinet ಒಪ್ಪಿಗೆ ಕೊಟ್ಟು ಖರೀದಿ ಮಾಡಿದ್ದಾರೆ. ಇವತ್ತಿನವರೆಗೂ ಒಂದು panel ಬಂದಿಲ್ಲ. ಒಂದು ಏನನ್ನೂ ಹಾಕಿಲ್ಲ, ಒಂದು single unit ಸಹ ಹಾಕಿಲ್ಲ.

**ಅಧ್ಯಕ್ಷರು:-** ಅದಕ್ಕಾಗಿಯೇ enquiry ಮಾಡಿಸುತ್ತೇವೆಂದು ಹೇಳಿದ್ದಾರಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ಎಲ್ಲೆಲ್ಲಿ ಅವರಿಗೆ ನಾವು ನಿಬಂಧನೆಗಳನ್ನು ಹಾಕಿದ್ದೇವೆಯೋ, ಆ . ನಿಂಬಂಧನೆಗಳ ಉಲ್ಲಂಘನೆಯಾಗಿದ್ದರೆ, ಅದರ ವಿರುದ್ಧವಾಗಿ ಕ್ರಮ ತೆಗೆದುಕೊಳ್ಳುತ್ತೇವೆ, Enquiry ಮಾಡಿಸುತ್ತೇವೆ.

**ಅಧ್ಯಕ್ಷರು:-** ಒಂದು Committee constitute ಮಾಡಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, ಮಾಡುತ್ತೇವೆ. ಅದನ್ನು ಮಾಡೋಣ. ಈಗಾಗಲೇ Chief Secretary ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಇದೆ.

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):–** ಮಾನ್ಯ ಅಧ್ಯಕ್ಷರೆ, ಒಂದು ಸದನ ಸಮಿತಿ ಮಾಡಿಸಿ, ಅದೇನೇನು ಆಗಿದೆಯೋ enquiry ಆಗಲಿ.

**ಅಧ್ಯಕ್ಷರು:–** ಅವುಗಳಿಗೆ ಇನ್ನೂ ತಲೆಗೆ ಹೋಗೇ ಇಲ್ಲ ಬಿಡಿ. ಇವತ್ತಿನ ಕಾಲದಲ್ಲಿ administration ಹೇಗೆ ಕೊಡಬೇಕೆಂದು ಅವರಿಗೆ ಗೊತ್ತಿದೆಯೇ? ಅವರೇ suo-moto ಮಾಡಬೇಕು.

**ಶ್ರೀ ಇ. ತುಕಾರಾಂ:–** ಮಾನ್ಯ ಅಧ್ಯಕ್ಷರೆ, ರೈತರಿಗೆ ಅನ್ಯಾಯವಾಗಿರುವುದು ಮತ್ತು ಯಾವ್ಯಾವ ಇಂಡಸ್ಟ್ರಿಯವರು opposition ಮಾಡಿದ್ದಾರೆ, ಯಾರ್‍ಯಾರು ಮಾಡಿಲ್ಲ. . . . . .

**ಅಧ್ಯಕ್ಷರು:–** Industries ತಂದು ಏನು ಮಾಡುತ್ತಾರೆ.

**ಶ್ರೀ ಸಿದ್ದರಾಮಯ್ಯ:–** ಬ್ರಾಹ್ಮಿಣಿ ಸ್ಟೀಲ್ಸ್‌ಗೆ 4,948 ಎಕರೆ ಕೊಟ್ಟಿತ್ತು.

**ಶ್ರೀ ಬಸವರಾಜ ರಾಯರೆಡ್ಡಿ:–** approximate ಆಗಿ 5,000 ಎಕರೆ ಎಂದು ಹೇಳಿದೆನು.

**ಶ್ರೀ ಸಿದ್ದರಾಮಯ್ಯ:–** ಇರಲಿ ಸ್ವಲ್ಪ ಹೆಚ್ಚು ಕಡಿಮೆ ಇರಲಿ. ಇದು ಉತ್ತಮ್ ಗ್ಯಾಲ್ವಾಗೆ transfer ಆಗಿಬಿಟ್ಟಿದೆ. ಅದು 2011ರಲ್ಲಿ ಆಗಿರುವುದು. ಇದರ ಬಗ್ಗೆ ನಾವು enquiry ಮಾಡಿಸುತ್ತೇವೆ.

**ಅಧ್ಯಕ್ಷರು:–** ಈ ಕೆಲವೊಂದನ್ನು ನೋಡಿದರೆ, ಇನ್ನು ಮುಂದೆ ನೀವು ಕೈಗಾರಿಕೆಗಳಿಗೆ ಅನುಮತಿ ನೀಡುವವರಿದ್ದೀರಲ್ಲ, ಆಗ ಕಠಿಣವಾದ ನಿರ್ಬಂಧಗಳನ್ನು ಹಾಕಬೇಕಾಗುತ್ತದೆ. ಇದನ್ನೆಲ್ಲಾ ಪತ್ತೆ ಮಾಡುವುದಕ್ಕೆ ಯಾವುದಾದರೊಂದು ಸಮಿತಿ ಮಾಡಬೇಕಾಗುತ್ತದೆ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:–** ಮಾನ್ಯ ಅಧ್ಯಕ್ಷರೆ, MoU ಆಗಿತ್ತಲ್ಲ, ಆ land transfer ಹೇಗಾಯಿತು?

(ಗೊಂದಲ)

**ಶ್ರೀ ಪ್ರಮೋದ್ ಮಧ್ವರಾಜ್:–** Take over ಮಾಡಿಕೊಂಡಿರುತ್ತಾರೆ.

**ಅಧ್ಯಕ್ಷರು:–** Industries Secretary ಯವರು ಇಲ್ಲೇ ಇದ್ದಾರೆ ನೋಡಿ. What is the administration they are doing?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, ಇದು ನಮ್ಮ ಕಾಲದಲ್ಲಿ ಆಗಿರುವುದಿಲ್ಲ. No, all these things have not been done during our period Government is a different thing. ಎಲ್ಲಾ ಮಾಡಿಬಿಟ್ಟು ಈಗ ನಮ್ಮ ತಲೆಗೆ ಕಟ್ಟುತ್ತಿದ್ದಾರೆ.

(ಗೊಂದಲ)

**ಅಧ್ಯಕ್ಷರು:–** ಆಯಿತು, ಈಗ enquiry ಮಾಡಿಸಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** Enquiry ಮಾಡಿಸುತ್ತೇವೆ.

(ಗೊಂದಲ)

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):–** ಮಾನ್ಯ ಅಧ್ಯಕ್ಷರೆ, ಒಂದು ಸದನ ಸಮಿತಿ form ಮಾಡಿಸಿ.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಅಧ್ಯಕ್ಷರೆ, ಇನ್ನೊಂದು ಪ್ರಮುಖವಾದ ವಿಚಾರ, ನೀವು ಮಿತ್ತಲ್ ಸ್ಟೀಲ್ಸ್‌ಗೆ 4,500 ಎಕರೆ ಕೊಟ್ಟಿದ್ದೀರಿ, ಟಾಟಾ ಸ್ಟೀಲ್ಸ್‌ಗೆ 2,500 ಎಕರೆ ಕೊಟ್ಟಿದ್ದೀರಿ, ಅವರು ಇನ್ನೂ ಕೈಗಾರಿಕೆ ಪ್ರಾರಂಭನೇ ಮಾಡಲಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ರಾಯರೆಡ್ಡಿಯವರೆ, ಅವರಿಗೆಲ್ಲಾ ಕಬ್ಬಿಣದ ಅದಿರು ಸಿಕ್ಕಿಲ್ಲ. ನೀವು ಕುಳಿತುಕೊಳ್ಳಿ. ಅವರಿಗೆಲ್ಲಾ ಏನಾಗಿದೆಯೆಂದರೆ, ಸಮಾಜ ಪರಿವರ್ತನ ಸಮುದಾಯಟವರಾದ ಶ್ರೀ ಹಿರೇಮಠ್‌ರವರು ಸುಪ್ರೀಂ ಕೋರ್ಟ್‌ಗೆ ಹೋದ ಮೇಲೆ, ನಮಗೆಲ್ಲಾ ಬರಿ 30 ಲಕ್ಷ ಮಿಲಿಯನ್ ಟನ್ ಉತ್ಪಾದನೆ ಮಾಡಿ ಎಂದು ಕೊಟ್ಟಿದ್ದಾರೆ. ಈ ಸಮಸ್ಯೆ ಉದ್ಭವವಾಗಿ ಗೊಂದಲವಾಗುವುದರಿಂದ mines, steel factory ಗಳನ್ನೆಲ್ಲಾ ಮಾಡುತ್ತೇವೆಂದು ಯಾರ್‍ಯಾರು MOU ಮಾಡಿಕೊಂಡಿದ್ದರೋ ಅವರು ಈಗ ಸಮಸ್ಯೆ ಎದುರಿಸುತ್ತಿದ್ದಾರೆ. ಇದರಿಂದ ಈಗ ತೊಂದರೆಗಳಾಗುತ್ತಿವೆ. ಅದನ್ನೆಲ್ಲಾ ನೋಡಿಕೊಂಡು ನಾವು ಏನು ಮಾಡಬೇಕೆಂದು ಇದೆಯೋ ಅದನ್ನು ಮಾಡುತ್ತೇವೆ.

**ಶ್ರೀ ಬಸವರಾಜ ರಾಯರೆಡ್ಡಿ:-** ನನಗೆ ಗೊತ್ತಿದ್ದ ಮಟ್ಟಿಗೆ Mitttal steels ಬರಲಿಕ್ಕಿಲ್ಲ. Because steel industries has collapsed in India. China is dumping.

(ಗೊಂದಲ)

**ಅಧ್ಯಕ್ಷರು:-** Enquiry ಮಾಡಿಸುತ್ತೇವೆಂದು ಹೇಳಿದ್ದಾರಲ್ಲ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:-** China economic is getting slower.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- Don't give the wrong information to the house.

ಶ್ರೀ ಆರ್.ವಿ. ದೇಶಪಾಂಡೆ:- Sir, Mittal, Tata's they are reputed houses. ನಾವು ಸದನದಲ್ಲಿ ಏನು ವಿಚಾರ ಮಾಡಬೇಕು, ಯಾರು land ತೆಗೆದುಕೊಂಡು speculate ಮಾಡುವುದಿದ್ದರೆ, you take action. ನಾವು Tata's ಗೆ ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ 600 acres land ಕೊಟ್ಟೆವು. ಎರಡು ವರ್ಷದಲ್ಲಿ ರತನ್ ಟಾಟಾ ಬಂದದ್ದರು. ಎರಡು ವರ್ಷದಲ್ಲಿ ಯಾವುದೂ take off ಆಗಲಿಲ್ಲ. Industry ನಲ್ಲಿ recession ಬಂತು, They requested us, we gave time. ಏನಾಯಿತು ಮೂರು Industries ಅಲ್ಲಿ ಬಂತಲ್ಲಾ, ಸಾವಿರಾರು ಜನ ಅಲ್ಲಿ ಕೆಲಸ ಮಾಡುತ್ತಾರಲ್ಲ, you have to understand. What is the group? ಆ group ಏನಾದರೂ speculative ಇದ್ದರೆ, ಅ land ತೆಗೆದುಕೊಂಡು ವ್ಯವಹಾರ ಮಾಡಿ ಹಣ ಮಾಡುವುದಿದ್ದರೆ, you are right sir, we have to take action against them. But if the bonafides are good . . . ಈಗ economy is going to a very bad shape. Even Indian Economy ಈ ಕಳೆದ ಒಂದು, ಒಂದುವರೆ ವರ್ಷದಿಂದ gradually pick up ಆಗುತ್ತಿದೆ. Recession is there, so many problems are there. ಹಾಗಾಗಿ groups ಒಳ್ಳೆಯವರು ಇದ್ದರೆ, ಅವರು reputed ಇದ್ದರೆ, ಅವರು bonafides ಇದ್ದರೆ, we have to co-operate sir. Without investments, no State can prosper. Investment ಬಂದರೆ, ನಿಮಗೆ tax ಬರುವುದು. Investment ಬಂದರೆ jobs create ಆಗುವುದು. ನಿಮಗೆ investment ಬೇಡ, ಎಲ್ಲಾ ಕಾರ್ಯಕ್ರಮ ಮಾಡಿ ಎಂದರೆ ಎಲ್ಲಿ ಹಣ ತರುತ್ತೀರಿ ನೀವು? ಹಾಗಾಗಿ Industries ಬರಬೇಕು. ವ್ಯಾಪಾರ ಬೆಳೆಯಬೇಕು, ಕೃಷಿ ಬೆಳೆಯಬೇಕು. That should be the intention. I agree, Speculative ಇದ್ದರೆ, we should take action.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಅಧ್ಯಕ್ಷರೆ, ನಾನು ಹೇಳುವುದು steel Industries totally collapsed. ಮುಂದೆ ಯಾವುದೇ steel industries ಕರ್ನಾಟಕ ಅಲ್ಲ, ನಮ್ಮ ದೇಶದಲ್ಲಿಯೇ ಬರುವುದಿಲ್ಲ. China is dumping 15 ಸಾವಿರ. .

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** Sir, I am very concerned about it.

**ಅಧ್ಯಕ್ಷರು:-** ಅದನ್ನು ಪ್ರತ್ಯೇಕ ಮಾಡಿರಿ. ಎತ್ತಿದ ಪ್ರಶ್ನೆಗೆ ಬನ್ನಿ.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** ಸರ್ ದಯವಿಟ್ಟು ನನಗೆ ಒಂದೇ minute ಕೊಡಿ. ಚೈನಾ ಇವತ್ತು 10 ಮಿಲಿಯನ್ . . .

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** Please see the market. Government of India ದಲ್ಲಿ ಏನಾಗುತ್ತಿದೆ ಎಂದು ನೋಡಿ. 10 ಮಿಲಿಯನ್ ಟನ್ . . .

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** Steel industry has collapsed in India. ಯಾವುದೂ ಬರುವುದಿಲ್ಲ. Steel industry ಬರುವುದಕ್ಕೆ chance ಇಲ್ಲ. China is dumping.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** ಒಂದು ಟನ್ನಿಗೆ 15 ಸಾವಿರ ರೂ. ಕಡಿಮೆ ರೇಟಿಗೆ ಚೈನಾ ಮಾರುತ್ತಿದೆ. ಅದಕ್ಕೆ ಯಾವ industry ಬರುತ್ತಿಲ್ಲ. ಕೇಂದ್ರ ಸರ್ಕಾರ . . .

(ಗೊಂದಲ)

**ಅಧ್ಯಕ್ಷರು:–** ಈಗ ಎತ್ತಿರುವ ಪ್ರಶ್ನೆ ಮುಖ್ಯವಾಗಿದೆ. ಯಾರು defaulters ಇದ್ದಾರೆ, ಅದರ ಬಗ್ಗೆ enquiry ಮಾಡಿಸುತ್ತೇವೆಂದು ಹೇಳಿದ್ದಾರೆ. Immediate ಆಗಿ ಒಂದು expert Committee ಹಾಕಿ enquiry ಮಾಡಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಅಧ್ಯಕ್ಷರೆ, ದೇಶಪಾಂಡೆಯವರು ಹೇಳಿದಂತೆ ಕೆಲವು reputed companies ಇವೆ. Tata, Mittal ಇವೆಲ್ಲವೂ reputed companies.

**ಶ್ರೀ ನಾರಾಯಣಗೌಡ:–** ಮಾನ್ಯ ಅಧ್ಯಕ್ಷರೆ, ಒಂದೇ ನಿಮಿಷ. ಮಾನ್ಯ ಮುಖ್ಯಮಂತ್ರಿಗಳಿಗೆ ವಿಷಯ ಗೊತ್ತಿದೆ.

**ಶ್ರೀ ಸಿದ್ದರಾಮಯ್ಯ:–** ನೀವು ಕುಳಿತುಕೊಳ್ಳಿ please.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ದೇಶದಲ್ಲಿ ಕೆಲವೆಲ್ಲಾ reputed companies ಇವೆ. ನಾವು ಎಲ್ಲರ ಬಗ್ಗೆ ಸಂಶಯ ಪಡಲು ಸಾಧ್ಯವಿಲ್ಲ. ಇದರಿಂದ wrong messages would go to the industry houses. ಹಾಗೆಲ್ಲಾ ಮಾಡಲಾಗುವುದಿಲ್ಲ.

**ಅಧ್ಯಕ್ಷರು:–** ಮುಖ್ಯಮಂತ್ರಿಗಳೆ, ನಾನು observe ಮಾಡಿದ್ದೇನೆ. SEZ ಕಾನೂನು ಬಂತಲ್ಲ, ದೊಡ್ಡ ದೊಡ್ಡ ಮಹಾನುಭಾವರು, capital ನವರು 5–5 ಸಾವಿರ ಎಕರೆಗಳನ್ನು ಕೊಡಲು ಅವಕಾಶ ಇದೆಯಲ್ಲ, ಅವರು ತೆಗೆದುಕೊಂಡು ಇಟ್ಟುಕೊಂಡಿದ್ದಾರೆ.

**ಒಬ್ಬ ಮಾನ್ಯ ಸದಸ್ಯರು:–** Real estate ಮಾಡುತ್ತಿದ್ದಾರೆ ಸರ್.

**ಶ್ರೀ ಸಿದ್ದರಾಮಯ್ಯ:–** ಈಗ ನೀವು ಹೇಳಿದ್ದೀರಲ್ಲ, ಒಂದು ಸಾರಿ ಅದನ್ನೆಲ್ಲಾ review ಮಾಡಿ, bonafides companies ಯಾವುದು ಇದೆ ಎಂದು ನೋಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಹೆಚ್.ಸಿ. ಮಹದೇವಪ್ಪ:–** SEZ ಕಾನೂನು ಬಂತಲ್ಲ lease ಕೊಡುತ್ತಿರುವುದು ಅದೇ ಕಾರಣಕ್ಕೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಅಧ್ಯಕ್ಷರೆ, ಕೈಗಾರಿಕೀಕರಣ ಆಗದೆ ರಾಜ್ಯದ ಅಭಿವೃದ್ಧಿಯಾಗುವುದು ಕಷ್ಟ. ಅದಕ್ಕೆ ವಿಶ್ವೇಶ್ವರಯ್ಯನವರು industrialize or perish ಎಂದು ಹೇಳಿದ್ದು. ಯುವಕರಿಗೆ, ನಿರುದ್ಯೋಗಿಗಳಿಗೆ ಉದ್ಯೋಗ ಕೊಡಬೇಕಾಗುತ್ತದೆ. ಅದಕ್ಕೋಸ್ಕರ ನಾವು ಬಹಳ ಪ್ರಗತಿಪರವಾದ Industrial Policy ಯನ್ನು ತಂದಿದ್ದೇವೆ. ಇದರಿಂದ ದಲಿತರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ, ಮಹಿಳೆಯರಿಗೆ ಮತ್ತು backward regions ಗೂ ಕೂಡಾ ಅನುಕೂಲವಾಗುವ ರೀತಿಯಲ್ಲಿ Industrial Policy ತಂದಿದ್ದೇವೆ. ಇವತ್ತು ಬಂಡವಾಳ ಹೂಡಿಕೆಗೆ ಪ್ರಶಸ್ತವಾದ ಸ್ಥಳವೆಂದು ಇಡೀ ದೇಶದಲ್ಲಿಯೇ ನಮ್ಮ ಕರ್ನಾಟಕವನ್ನು ಎಲ್ಲಾ ಕಡೆಯಿಂದ ನೋಡುತ್ತಿದ್ದಾರೆ. ಆದುದರಿಂದ industries ಬರುತ್ತಿಲ್ಲ ಎನ್ನುವುದು ಕೂಡಾ ಸರಿಯಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ರಾಯರೆಡ್ಡಿಯವರು ಕೊಟ್ಟಿರುವ ಸಲಹೆಗಳನ್ನು ಕೂಡಾ ಗಮನದಲ್ಲಿಟ್ಟುಕೊಂಡು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂಬ ಮಾತನ್ನು ಹೇಳಿ ವಂದನಾ ನಿರ್ಣಯ ಏನು ಮಂಡಿಸಿದ್ದಾರೆ, 2015ರ ಫೆಬ್ರವರಿ 02 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ . .

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಅಧ್ಯಕ್ಷರೆ, ನಾವು ಸ್ಪಷ್ಟೀಕರಣ ಕೇಳಬೇಕಿದೆ.

**ಶ್ರೀ ಸಿದ್ದರಾಮಯ್ಯ:-** ಎಲ್ಲ ಕೇಳಿ ಆಯಿತಲ್ಲ.

**ಶ್ರೀ ಜಗದೀಶ್ ಶೆಟ್ಟರ್:-** ಕೆಲವೊಂದು ವಿಚಾರಗಳು ಹೊರಗೆ ಬರಲಿಲ್ಲ. ಬೆಳಗಾವಿ ಅಧಿವೇಶನದಲ್ಲಿ ಡಾ: ನಂಜುಂಡಪ್ಪ ವರದಿಯನ್ನು review ಮಾಡುವುದಾಗಿ ಹೇಳಿದರು. ಅದನ್ನು ಮುಂದುವರೆಸಿದರೋ, ಇಲ್ಲವೋ ಎಂಬುದನ್ನು ಹೇಳಲಿಲ್ಲ. ಅವರು ಉತ್ತರ ಕೊಟ್ಟ ಮೇಲೆ ನಾವು ಕೆಲವೊಂದು . . .

**ಅಧ್ಯಕ್ಷರು:-** ಅವರು ಉತ್ತರ ಕೊಡುವ ಸಂದರ್ಭದಲ್ಲಿ ನೀವು ಗಂಭೀರವಾಗಿ ಕೇಳಿದ್ದರೆ, ಉತ್ತರ ಕೊಟ್ಟ ನಂತರ ನೀವು ಸ್ಪಷ್ಟೀಕರಣ ಕೇಳಬಹುದಿತ್ತು.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಅಧ್ಯಕ್ಷರೆ, ಕೆಲವೊಂದು ವಿಚಾರಗಳು ಇವತ್ತು ಸ್ಪಷ್ಟೀಕರಣವಾಗಲೇ ಇಲ್ಲ. ನಂಜುಂಡಪ್ಪ ವರದಿಯನ್ನು CMDR ಯವರಿಗೆ ಕೊಡುತ್ತೇವೆಂದು ಹೇಳಿದ್ದರು. ಅದಕ್ಕೆ ಉತ್ತರ ಇಲ್ಲ. ಕೃಷಿ ಬೆಲೆ ಆಯೋಗದ ಬಗ್ಗೆ ಕೇಳಿದೆವು, ಅದಕ್ಕೂ ಯಾವುದು strengthen ಇಲ್ಲ. ನಾನು change of land use ಬಗ್ಗೆ ಹೇಳಿದ್ದೆನಲ್ಲ, ಅದು investigation ಆಗಬೇಕು.

**ಶ್ರೀ ಸಿದ್ದರಾಮಯ್ಯ:–** ಎಲ್ಲದಕ್ಕೂ ಉತ್ತರ ಕೊಟ್ಟಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್:–** ಆ ಗಣಿಗೆ ಇವರು license renewal ಮಾಡಿದರು. 5 ವರ್ಷ. ಈಗ ordinance ಬಂತು ಅಲ್ಲಿ. ಕೇಂದ್ರದಲ್ಲಿ ಎಂ.ಎಂ.ಡಿ.ಆರ್. ಆಕ್ಟ್‌ಗೆ amendment ಮಾಡಿ ಇಂದು ordinance ಬಂದ ಸಂದರ್ಭದಲ್ಲಿ 7 ಜನ ಇವರಿಗೆ ಗಣಿಯನ್ನು ವಿಸ್ತರಣೆ ಮಾಡಿದರು. ಗಣಿಗಾರಿಕೆ ಮಾಡಲು ಏನು renewal ಮಾಡಿಕೊಟ್ಟರು, 5 ವರ್ಷಕ್ಕೆ ಅವಕಾಶವಿತ್ತು, 20 ವರ್ಷ ಮಾಡಿದರು. ಅಲ್ಲಿ ordinance ಬರುತ್ತದೆಂದು.

**ಶ್ರೀ ಸಿದ್ದರಾಮಯ್ಯ:–** Act ಪ್ರಕಾರ 50 ವರ್ಷ ಇದೆ.

**ಶ್ರೀ ಜಗದೀಶ್ ಶೆಟ್ಟರ್:–** ಹೊಸ proposal ಕೊಟ್ಟರು. ಅದರ ಬಗ್ಗೆಯೂ ಏನೂ ಹೇಳಲಿಲ್ಲ. ಅಂದರೆ ಈ ರೀತಿ ಕೆಲವೊಂದು ವಿಚಾರಗಳನ್ನು ಮುಚ್ಚಿಡುವ ಕೆಲಸ ಸರ್ಕಾರದಿಂದಾಗುತ್ತಿದೆ. ಸ್ಪಷ್ಟವಾದ ಉತ್ತರ ಬರಲಿಲ್ಲ. ನಂಜುಂಡಪ್ಪ ರವರ ವರದಿಯ ಬಗ್ಗೆ ಏನು ನಿಮ್ಮ stand? ಆ CMDR ಧಾರವಾಡ ಅವರಿಗೆ ಏನು ಕೊಟ್ಟಿರಿ, ಅದೂ ಇಲ್ಲ. ಕೃಷಿ ಬೆಲೆ ಆಯೋಗದ ಬಗ್ಗೆ ಏನು? ಅದು ಇಲ್ಲ. ಈ ರೀತಿ ಹಲವಾರು ವಿಚಾರಗಳನ್ನು, ಅರ್ಕಾವತಿ ವಿಚಾರವಂತೂ ಅವರೇ ಹೇಳಿಕೊಳ್ಳುತ್ತಿದ್ದರು. ಅವರು ನೀಡಿರುವ ಉತ್ತರ ಸಮಾಧಾನವಿಲ್ಲ. ರಾಜ್ಯಪಾಲರ ಭಾಷಣ ಇದೆಯಲ್ಲ, change of land use ಬಗ್ಗೆ, ಬಾಲಸುಬ್ರಮಣಿಯನ್ ವರದಿಯ ಬಗ್ಗೆ ಮುಖ್ಯಮಂತ್ರಿಯವರು ಹೇಳಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಮೊದಲು ರಾಜ್ಯಪಾಲರ ಭಾಷಣಕ್ಕೆ ಗೌರವವನ್ನು ಕೊಡಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ರಾಜ್ಯಪಾಲರ ಭಾಷಣಕ್ಕೆ ಇವರು ಗೌರವ ಕೊಡಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ರಾಜ್ಯಪಾಲರ ಭಾಷಣಕ್ಕೆ ಅವಮಾನವಾಗುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- Change of Land use ಬಗ್ಗೆ Court ಆದೇಶವನ್ನು ಉಲ್ಲಂಘನೆ ಮಾಡಿದ್ದಾರೆ. Park ಇದ್ದದ್ದನ್ನು ಇಂದು residential ಮಾಡಿದ್ದಾರೆ. ಇದು ಕಾನೂನು ಮೀರಿ ಮಾಡಿರುವುದು. ಅದು investigation ಆಗಲೇಬೇಕು ಎಂದು ನಾನು ಒತ್ತಾಯಿಸುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಇವರು ಎತ್ತಿರುವ ಎಲ್ಲಾ ಪ್ರಶ್ನೆಗಳಿಗೂ . .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- Park ಇದ್ದದ್ದನ್ನು ಇಂದು residential ಮಾಡಿದ್ದಾರೆ. ಇದು ಕಾನೂನು ಮೀರಿ ಮಾಡಿರುವುದು. ಅದು investigation ಆಗಲೇಬೇಕು ಎಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಎಲ್ಲವನ್ನೂ ಕಾನೂನು ರೀತಿಯಲ್ಲಿ ಮಾಡಲಾಗಿದೆ. ಕೋರ್ಟಿನ ಆದೇಶದ ಪ್ರಕಾರ . . .

**ಶ್ರೀ ಜಗದೀಶ್ ಶೆಟ್ಟರ್**:- ಮಾನ್ಯ ಅಧ್ಯಕ್ಷರೆ, ಇವರು ಯಾವುದಕ್ಕೂ ತಯಾರಿಲ್ಲ. ಎಲ್ಲವನ್ನೂ ಮುಚ್ಚಿಡುವ ಕೆಲಸ ಮಾಡುತ್ತಿದ್ದಾರೆ. ನಾವು ಬಾವಿಗೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷದ ಸದಸ್ಯರು ಸದನದ ಬಾವಿಗಿಳಿದು ಧರಣಿ ನಡೆಸಿದರು)

(ಗೊಂದಲ)

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಅಧ್ಯಕ್ಷರೆ, ಇದು ಇತಿಹಾಸದಲ್ಲಿ, ......

(ಗೊಂದಲ)

**ಶ್ರೀ ಟಿ.ಬಿ. ಜಯಚಂದ್ರ**:- ರಾಜ್ಯಪಾಲರ ಭಾಷಣಕ್ಕೆ ಮಾಡಿದಂತಹ ಅವಮಾನ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:- ರಾಜ್ಯಪಾಲರ ಭಾಷಣಕ್ಕೆ ಮಾಡಿದ ಅವಮಾನ, ಅಗೌರವ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:- ಕರ್ನಾಟಕ ವಿಧಾನಸಭೆ ಇತಿಹಾಸದಲ್ಲಿ ರಾಜ್ಯಪಾಲರ ಭಾಷಣಕ್ಕೆ ಧರಣಿ ಮಾಡುತ್ತಿರುವವರು ಇವರೇ, ಬಿ.ಜೆ.ಪಿ. ಯವರು, ಬೇರೆ ಯಾರೂ ಕೂಡಾ ಮಾಡಿಲ್ಲ. ಇವರು ಹೇಳಿರುವ ಎಲ್ಲಾ ವಿಚಾರಗಳಿಗೂ ನಾನು ಉತ್ತರ ಕೊಟ್ಟಿದ್ದೇನೆ. ನಮ್ಮಲ್ಲಿ ಯಾವುದೂ ಕೂಡಾ ಕಾನೂನು ಬಾಹಿರವಾಗಿ ಮಾಡಿಲ್ಲ. ಎಲ್ಲವನ್ನೂ ಕಾನೂನು ರೀತಿಯಲ್ಲಿಯೇ ಮಾಡಿದ್ದೇವೆ. ಆದುದರಿಂದ ನಾವು ಇದರಲ್ಲಿ ಯಾವುದೂ ಕೂಡಾ ಮುಚ್ಚುಮರೆ ಮಾಡುವುದು ಯಾವುದೂ ಇಲ್ಲ.

(ಗೊಂದಲ)

**ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಅಂಗೀಕಾರ**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** "2015 ರ ಫೆಬ್ರವರಿ 02 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ".

(ಗೊಂದಲ)

**ಅಧ್ಯಕ್ಷರು:** ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

(ಗೊಂದಲ)

**ಪ್ರಸ್ತಾವನೆ ಹೀಗಿದೆ:**

"2ನೇ ಫೆಬ್ರವರಿ 2015 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವವು ಅಂಗೀಕೃತವಾಗಿದೆ.

**ವಂದನಾ ನಿರ್ಣಯದ ಪ್ರಸ್ತಾಪಕ್ಕೆ ಸಭೆಯ ಅನುಮತಿ ದೊರಕಿದೆ.**

ವಂದನಾ ನಿರ್ಣಯವನ್ನು ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

**ಅಧ್ಯಕ್ಷರು:–** ಈಗ ಸದನವನ್ನು ಸಂಜೆ 4.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸದನವು 3.00 ಗಂಟೆ ಎರಡು ನಿಮಿಷಕ್ಕೆ ಮುಕ್ತಾಯವಾಗಿ ಭೋಜನ ವಿರಾಮದ ನಂತರ ಪುನಃ 4.00 ಗಂಟೆಗೆ ಸೇರುವಂತೆ ನಿರ್ಧರಿಸಿತು)**

(ಸಭೆಯು ಮತ್ತೆ ಮಧ್ಯಾಹ್ನ 4 ಗಂಟೆ 28 ನಿಮಿಷಗಳಿಗೆ ಪ್ರಾರಂಭಗೊಂಡಿತು ಮಾನ್ಯ ಅಧ್ಯಕ್ಷರು ಸಭಾಧ್ಯಕ್ಷರ ಪೀಠದಲ್ಲಿ ಉಪಸ್ಥಿತರಿದ್ದರು)

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಸದನಕ್ಕೆ ಆಗಮಿಸಿ ಸದನದ ಬಾವಿಯಲ್ಲಿ ಧರಣಿ ನಿರತರಾದರು)

(ಗೊಂದಲ)

**ಶ್ರೀ ಕೆ. ಷಡಕ್ಷರಿ:–** ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದಲ್ಲಿ ಯಾರೂ ಇಲ್ಲ, ಒಬ್ಬ ಮಂತ್ರಿ ಇಲ್ಲವೆಂದರೆ ಎಷ್ಟು ಹೇಳುತ್ತಾರೆ, ವಿರೋಧಪಕ್ಷದವರಿಗೆ ಎಷ್ಟು ಕಾಳಜಿ ಇದೆಯೆಂಬುದನ್ನು ನೋಡಿ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಅಧ್ಯಕ್ಷರು, ನೀವು ಕೋರಂಗೆ ಎಷ್ಟು ಸಮಯ ತೆಗೆದುಕೊಳ್ಳುತ್ತೀರೆಂಬುದನ್ನು test ಮಾಡುವುದಕ್ಕೆ ಇದ್ದೆವು.

(ಗೊಂದಲ)

**ಶ್ರೀ ಕೆ. ಷಡಕ್ಷರಿ:–** ಮಾನ್ಯ ಅಧ್ಯಕ್ಷರೆ, ಒಬ್ಬರು ಇಲ್ಲವೆಂದರೆ ಎಷ್ಟು ಮಾತನಾಡುತ್ತಾರೆ? ಈಗ ನೋಡಿ ಎಲ್ಲಾ ಬರುತ್ತಿದ್ದಾರೆ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:-** ನಾವು ಆಡಳಿತ ಪಕ್ಷದವರಿಗೆ ಸದನದ ಬಗ್ಗೆ ಎಷ್ಟು ಕಾಳಜಿ ಇದೆಯೆಂಬುದನ್ನು ನೋಡುತ್ತಿದ್ದೆವು, ಕೋರಂ ಯಾವಾಗ ಮಾಡುತ್ತಾರೆಂಬುದನ್ನು ನೋಡುತ್ತಿದ್ದೆವು. ಆಡಳಿತ ಪಕ್ಷದ ಜವಾಬ್ದಾರಿ ಏನೆಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿದೆವು.

(ಗೊಂದಲ)

**ಅಧ್ಯಕ್ಷರು:-** ಈಗ ಪ್ರಶ್ನೋತ್ತರ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಅಧ್ಯಕ್ಷರೆ, ತಾವು ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತಿರಾ?

**ಅಧ್ಯಕ್ಷರು:-** ಹೌದು.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರವಾದರೆ ನಮ್ಮ ಸಹಕಾರವಿದೆ. ಈಗ ನಿನ್ನೆ, ಮೊನ್ನೆ ಬಿಲ್‌ಗಳನ್ನು ತಂದು ಪಾಸ್ ಮಾಡಿಕೊಳ್ಳುತ್ತೇವೆಂದರೆ, ಅದಕ್ಕೆ ನಮ್ಮ ಸಹಕಾರವಿಲ್ಲ.

**ಅಧ್ಯಕ್ಷರು:-** Move ಮಾಡುವುದು ಮಾಡಲಿ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಅಧ್ಯಕ್ಷರೆ, move ಮಾಡಿದ್ದಾರಷ್ಟೆ, ಚರ್ಚೆ ಮಾಡುವುದನ್ನು ಬಜೆಟ್‌ನಲ್ಲಿ ನೋಡೋಣ.

**ಅಧ್ಯಕ್ಷರು:-** ನೋಡೋಣ, ಈಗ ಮಾನ್ಯ ಮಂತ್ರಿಯವರು ಇಲ್ಲ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರಕ್ಕೆ ಏನೂ ತೊಂದರೆ ಇಲ್ಲ. ತಾವು request ಮಾಡಿದ್ದೀರಿ, ತಮಗೆ ಗೌರವ ಕೊಟ್ಟು ನಾವು ಕಲಾಪಕ್ಕೆ ಸಹಕಾರ ಮಾಡುತ್ತೇವೆ.

**ಅಧ್ಯಕ್ಷರು:-** Ok, thank you. ಆಯಿತು ಮಾಡೋಣ.

(ಈ ಹಂತದಲ್ಲಿ ಧರಣಿ ನಿರತರಾಗಿದ್ದ ಬಿ.ಜೆ.ಪಿ. ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)